
# ಭಗವಾನ್
# ಶ್ರೀ ರಮಣ ಮಹರ್ಷಿಗಳು



ಲೇಖಕರು : ಡಾ|| ಎ. ಎಸ್. ವೇಣುಗೋಪಾಲರಾವ್

ಅಧ್ಯಾತ್ಮಪ್ರಕಾಶ ಕಾರ್ಯಾಲಯ
ಹೊಳೆನರಸೀಪುರ - 573 211
www.adhyatmaprakasha.org
ಬೆಂಗಳೂರು. ದೂರವಾಣಿ: 26765548

ಅಧ್ಯಾತ್ಮಗ್ರಂಥಾವಳಿ

# ಭಗವಾನ್
# ಶ್ರೀ ರಮಣಮಹರ್ಷಿಗಳು

ಬರೆದವರು :
ಡಾ॥ ಎ. ಎಸ್. ವೇಣುಗೋಪಾಲರಾವ್

ಕ್ರಮಾಂಕ. 226

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ,
ಹೊಳೆನರಸೀಪುರ - 573211
ದೂ : 08175-273820
ಬೆಂ. 080-26765548
**2012**

**BHAGAVAN SRI RAMANAMAHASHIGALU :**
Written by **Dr. A.S. Venugopala Rao, Shimoga,**
Printed at Adhyatma Prakasha Karyalaya, Public Charitable Trust,
Holenarasipur - 573211(INDIA)
Phone : 08175-273820 www.adhyatmaprakasha.org.

| | | |
|---|---|---|
| ಮೊದಲನೆಯ ಮುದ್ರಣ | 2005 | (1000 ಪ್ರತಿಗಳು) |
| ಎರಡನೆಯ ಮುದ್ರಣ | 2005 | (1000 ಪ್ರತಿಗಳು) |
| ಮೂರನೆಯ ಮುದ್ರಣ | 2012 | (1000 ಪ್ರತಿಗಳು) |

**ಪುಟಗಳು : 6 + 76 = 82**

ಬಳಸಿದ ಕಾಗದ : 70 GSM N.S. Maplitho

ಆಕಾರ : 1/8th Demy

**ಬೆಲೆ : ರೂ. 30/-**

**© ಅಧ್ಯಾತ್ಮ ಪ್ರಕಾಶಕಾರ್ಯಾಲಯ**

**ಅಕ್ಷರ ಜೋಡಣೆ :**
**ಪ್ರಶಾಂತ್ ಎಂಟರ್‌ಪ್ರೈಸಸ್**
ನಂ. 45, 3ನೇ ಮುಖ್ಯರಸ್ತೆ, ಟಿ.ಆರ್.ನಗರ ಪೋಸ್ಟ್
ನಾಗಸಂದ್ರ, ಬೆಂ.- 28, ದೂರವಾಣಿ: 26761529

**ಮುದ್ರಣಸ್ಥಾನ :**
**ಶ್ರೀರಾಮ ಪ್ರಿಂಟರ್ಸ್**
ನಂ. 25, 15ನೇ ಕ್ರಾಸ್,
ಶ್ರೀನಿಧಿ ಲೇಔಟ್, ಬೆಂಗಳೂರು - 560 062
ದೂ. 98453 46197

# ಮೊದಲನೆಯ ಮುದ್ರಣಕ್ಕೆ ಮುನ್ನುಡಿ

ಭಗವಾನ್ ಶ್ರೀ ರಮಣಮಹರ್ಷಿಗಳ ದಿವ್ಯಜೀವನಚರಿತ್ರೆಯನ್ನು ಡಾ|| ಎ. ಎಸ್. ವೇಣುಗೋಪಾಲರಾಯರು ಸರಳವೂ ಸುಂದರವೂ ಯಥಾರ್ಥವೂ ಆಗಿರುವ ಬರವಣಿಗೆಯಲ್ಲಿ ಸಿದ್ಧಗೊಳಿಸಿ ಮಹರ್ಷಿಗಳ ಕೃಪಾಪಾತ್ರರಾಗಿರುತ್ತಾರೆ.

ಪರಮಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಮಹಾಸ್ವಾಮಿಗಳವರು ಭಗವಾನ್ ಶ್ರೀ ರಮಣಮಹರ್ಷಿಗಳು ಬ್ರಹ್ಮೀಭೂತರಾದ ಸಂದರ್ಭದಲ್ಲಿ ಹೀಗೆ ತಿಳಿಸಿದ್ದಾರೆ.

"ಮೌನದ ಮಾಹಾತ್ಮ್ಯವನ್ನು ಮೌನದಿಂದಲೇ ವ್ಯಾಖ್ಯಾನಮಾಡಿ ಮಹಾಮೌನ ಸಮಾಧಿಯನ್ನು ನಮ್ಮ ಕಣ್ಣು ಮುಂದೆಯೇ ಪಡೆದು ಎಲ್ಲರನ್ನೂ ಬೆರಗು ಮಾಡಿರುವ ಈ ಮಹಾತ್ಮರ ಚರಿತ್ರೆಯನ್ನು ನಮ್ಮ ದೇಶದ ಯುವಕರು ಮನನ ಮಾಡುವದರಿಂದ ಲಾಭವುಂಟು."

ಈ ಗ್ರಂಥವನ್ನು ಪಠನ ಮಾಡಿದಂತೆಲ್ಲ ಭಗವಾನ್‌ರ ಜೀವಿತಕಾಲಕ್ಕೇ ವಾಚಕರನ್ನು ಸೆಳೆದುಕೊಂಡು ಹೋಗುತ್ತದೆ. ಓದುಗರಿಗೆ ಪೂಜ್ಯ ಮಹರ್ಷಿಗಳೊಡನೆ ತತ್ತ್ವಾನುಸಂಧಾನ ಮಾಡಿರುವಂಥ ಅನುಭವವು ಮನಸ್ಸಿನಲ್ಲಿ ಮೂಡುತ್ತದೆ. ಮಹರ್ಷಿಗಳ ದಿವ್ಯಜೀವನದ ಅನುಸಂಧಾನವು ವಾಚಕರ ಸಂಶಯಗಳನ್ನು ಪರಿಹರಿಸಿ ಮಹರ್ಷಿಗಳ ಸನ್ನಿಧಿಯಲ್ಲಿಯೇ ಇದ್ದಂತೆ ಭಾವನೆಯನ್ನು ಉಂಟುಮಾಡುತ್ತದೆ. ಈ ಗ್ರಂಥಕರ್ತರ ಗುರುಸೇವಾ ಕೈಂಕರ್ಯವು ಗುರುಶಿಷ್ಯರ ಆದರ್ಶಗಳನ್ನೂ ವಿಶೇಷವಾಗಿ ಗುರುಕೃಪಾನುಗ್ರಹಗಳನ್ನೂ ವಾಚಕರಿಗೆ ಉಣಬಡಿಸುವ ಆದರ್ಶ ಗ್ರಂಥವಾಗಿದೆ. ಗ್ರಂಥಕರ್ತರಿಗೆ ನಮ್ಮ ಅಭಿನಂದನೆಗಳು.

ಈ ಗ್ರಂಥಪ್ರಕಟಣೆಗೆ ಬೆಂಗಳೂರಿನಲ್ಲಿರುವ ರಮಣಭಕ್ತರಾದ ಜಿ.ಎಮ್. ಮಲ್ಲೇಶ್‌ರವರು 500 ರೂ. ಮತ್ತು ಹೆಸರನ್ನು ಪ್ರಕಟಿಸಲು ಬಯಸದ ಅಂತರಂಗ ಭಕ್ತರೊಬ್ಬರು 1000 ರೂ.ಗಳನ್ನು ಉದಾರವಾಗಿ ಸಹಾಯ ಮಾಡಿರುತ್ತಾರೆ. ಈ ದಾನಿಗಳಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾ ಪೂರ್ವಕವಾದ ವಂದನೆಗಳು.

ವಾಚಕರು ಎಂದಿನಂತೆ ಈ ಗ್ರಂಥವನ್ನು ಆದರದಿಂದ ಬರಮಾಡಿ ಕೊಳ್ಳುವರೆಂದು ಆಶಿಸಲಾಗಿದೆ.

ತಾರಣ ಸಂವತ್ಸರ
ಮಾರ್ಗಶಿರ ಬಹುಳ ಅಷ್ಟಮಿ
**3-1-2005**

ಪ್ರಕಾಶಕರು

## ಎರಡನೆಯ ಮುದ್ರಣಕ್ಕೆ ಮುನ್ನುಡಿ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳ 124ನೆ ಜಯಂತಿಯ ದಿವಸ (3-1-2005)ರಂದು ಪ್ರಕಾಶನಗೊಂಡ **ಮೊದಲನೆಯ** ಮುದ್ರಣದ ಪ್ರತಿಗಳೆಲ್ಲಾ ಕೇವಲ ಒಂದು ವರ್ಷದಲ್ಲಿ ಮಾರಾಟವಾಗಿದೆಯೆಂದರೆ ಪುಸ್ತಕವು ಎಷ್ಟು ಜನಪ್ರಿಯವಾಗಿದೆ ಎಂಬುದನ್ನು ತಾವೇ ಊಹಿಸಬಹುದು. ಇದರ ಲೇಖಕರೂ ಮತ್ತು ರಮಣರ / ಶ್ರೀ ಶ್ರೀಗಳವರ ಪರಮಭಕ್ತರೂ ಆದ ಡಾ|| ಎ.ಎಸ್. ವೇಣುಗೋಪಾಲ ರಾಯರ ಪ್ರೋತ್ಸಾಹ, ಅನೇಕ ಕಡೆಗಳಲ್ಲಿ ನಡೆಸಿದ ಸತ್ಸಂಗ / ಉಪನ್ಯಾಸಗಳಲ್ಲಿ ರಮಣರ ಬಗ್ಗೆ ತಿಳಿಸಿ ಪುಸ್ತಕಗಳನ್ನು ಕೊಳ್ಳುವಂತೆ ಅಭಿರುಚಿಯನ್ನುಂಟುಮಾಡಿದ್ದು, ಬೇಗ ಮಾರಾಟವಾಗಲು ಕಾರಣ ಎಂದರೆ ಅತಿಶಯೋಕ್ತಿಯಾಗಲಾರದು. ಕಾರ್ಯಾಲಯದ ಪರವಾಗಿ ಇವರಿಗೆ ಕೃತಜ್ಞತಾಪೂರ್ವಕ ವಾದ ವಂದನೆಗಳನ್ನು ಅರ್ಪಿಸುತ್ತೇವೆ.

**ಎರಡನೆಯ** ಮುದ್ರಣದ ಗ್ರಂಥವನ್ನು ಪುನಃ ಶ್ರೀ ಶ್ರೀಗಳವರ 125ನೆಯ ಜಯಂತೋತ್ಸವದ ದಿನದಂದು (24-12-2005) ಲೇಖಕರಾದ ಡಾ|| ಎ.ಎಸ್. ವೇಣುಗೋಪಾಲರಾಯರಿಂದಲೇ ಪ್ರಕಾಶನಗೊಳ್ಳುತ್ತಿರುವದು ಇನ್ನೂ ಹೆಚ್ಚಿನ ಸಂತಸವನ್ನುಂಟುಮಾಡಿದೆ. ಎಂದಿನಂತೆ ಎರಡನೆಯ ಮುದ್ರಣದ ಪ್ರತಿಗಳು ಹೆಚ್ಚು ಸಂಖ್ಯೆಯ ಜನರ ಕೈಸೇರಿ, ಆ ಮೂಲಕ ಕಾರ್ಯಾಲಯದ ಶ್ರಮವನ್ನು ಸಾರ್ಥಕಗೊಳಿಸುತ್ತದೆ ಎಂದು ಆಶಯ.

ಪಾರ್ಥಿವ ಸಂವತ್ಸರ — ಪ್ರಕಾಶಕರು
ಮಾರ್ಗಶಿರ ಬಹುಳ ಅಷ್ಟಮಿ 24-12-2005

## ಮೂರನೆಯ ಮುದ್ರಣಕ್ಕೆ ಪ್ರಕಾಶಕರ ಬಿನ್ನಹ

2005ರಲ್ಲಿ ಎರಡನೆಯ ಬಾರಿಗೆ ಮುದ್ರಿತವಾಗಿದ್ದ ಪುಸ್ತಕಗಳೆಲ್ಲವೂ ಮಾರಾಟವಾಗಿಬಿಟ್ಟಿದ್ದರಿಂದ, ಭಕ್ತಾದಿಗಳ ಅಪೇಕ್ಷೆಯಂತೆ ಮುದ್ರಣದ ತಪ್ಪುಗಳನ್ನೆಲ್ಲಾ ತಿದ್ದಿ ಗ್ರಂಥ ಶರೀರದಲ್ಲಿ ಯಾವ ಬದಲಾವಣೆಯಿಲ್ಲದೆ ಮೂರನೆಯ ಬಾರಿಗೆ ಮುದ್ರಿಸಿ ಹೊರತರಲಾಗಿದೆ. ಎಂದಿನಂತೆ ಭಕ್ತಾದಿಗಳು ಈ ಗ್ರಂಥವನ್ನು ಬರಮಾಡಿಕೊಂಡು, ಕಾರ್ಯಾಲಯದ ಮುಖ್ಯ ಧ್ಯೇಯವಾದ ಗ್ರಂಥಪ್ರಕಾಶನಕ್ಕೆ ಪ್ರೋತ್ಸಾಹ ನೀಡಬೇಕಾಗಿ ವಿನಂತಿ

ಖರ ಸಂವತ್ಸರ ಫಾಲ್ಗುಣ ಶುಕ್ಲ ಚೌತಿ — ಪ್ರಕಾಶಕರು
26.2.2012

# ಲೇಖಕರ ಬಿನ್ನಹ

"ಅಧ್ಯಾತ್ಮಪ್ರಕಾಶ" ಮಾಸಪತ್ರಿಕೆಯಲ್ಲಿ ಒಂದೂವರೆ ವರ್ಷಗಳು (ಜೂನ್ 2002 ರಿಂದ ಡಿಸೆಂಬರ್ 2003ರವರೆಗೆ) ನಿರಂತರವಾಗಿ ಪ್ರಕಟವಾದ ಈ ಲೇಖನ ಮಾಲೆ ಪುಸ್ತಕರೂಪದಲ್ಲಿ ಪ್ರಕಟವಾಗುತ್ತಿರುವುದು ನನಗೆ ಸಂತಸ ಹಾಗೂ ಧನ್ಯತೆಯನ್ನು ಉಂಟುಮಾಡಿದೆ. ಇದನ್ನು ಸಾಧ್ಯವಾಗಿಸಿದ :

(ಅ) - ಅಧ್ಯಾತ್ಮಪ್ರಕಾಶದ ಪ್ರಧಾನಸಂಪಾದಕರಾದ ವೇದಬ್ರಹ್ಮಶ್ರೀ-ಶ್ರೀಲಕ್ಷ್ಮೀನರಸಿಂಹಮೂರ್ತಿಗಳಿಗೆ; ಪ್ರಕಟಣೆಯಲ್ಲಿ ವಿಶೇಷ ಆಸಕ್ತಿ ವಹಿಸಿದ ಶ್ರೀ ತಾಂಡವೇಶ್ವರ್ ಹಾಗೂ ಸಮಿತಿಯ ಸದಸ್ಯರಿಗೆಲ್ಲ ಕೃತಜ್ಞತಾಪೂರ್ವಕ ನಮನಗಳು.

(ಆ) - ನನ್ನ ಬದುಕಿನ ಭಾಗ್ಯವಾಗಿ, ಬೆಳಕಾಗಿ ಬಂದು ನಿರಂತರ ಕೃಪಾವರ್ಷದಿಂದ ಸಲಹುತ್ತಿರುವ ಭಗವಾನ್ ಶ್ರೀ ರಮಣಮಹರ್ಷಿಗಳ ಅನುಗ್ರಹ ವಲಯಕ್ಕೆ ನನ್ನನ್ನು ಪ್ರೀತಿಯಿಂದ ಸಳೆದುಕೊಂಡ ಬೆಂಗಳೂರಿನ ಶ್ರೀ ರಮಣ-ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್ ಅಧ್ಯಕ್ಷರಾದ ಶ್ರೀ ಎ. ಆರ್. ನಟರಾಜನ್ ಅವರಿಗೆ ಕೃತಜ್ಞತಾ ಪೂರ್ವಕ ನಮನಗಳು.

ತಿರುವಣ್ಣಾಮಲೆಯ ಶ್ರೀರಮಣಾಶ್ರಮದ ಅಧ್ಯಕ್ಷರಾದ ಶ್ರೀಯುತ ಸುಂದರ-ರಮಣನ್ ಅವರಿಗೆ ನನ್ನ ಅನಂತ ಕೃತಜ್ಞತೆಗಳು.

ಅಧ್ಯಾತ್ಮದ ಅಕ್ಷರಾಭ್ಯಾಸದ ರುಚಿ-ಶುಚಿ-ಪರಮಾರ್ಥಸ್ವರೂಪದ ಆಕರ್ಷಣೆಗೆ ನಾನು ಒಳಗಾದುದೇ ಪರಮಪೂಜ್ಯ ಶ್ರೀ ಶ್ರೀಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳ ಕೃತಿಗಳ ಅಭ್ಯಾಸದಿಂದ. ಆದರ ಪರಿಪೂರ್ಣತೆಯೂ ಅವರ ಅನುಗ್ರಹದಿಂದಲೇ ಎಂದಾದರೊಂದು ದಿನ ಸಾಧ್ಯವಾದೀತು- ಎಂಬ ಹಂಬಲ ನನ್ನದು . ಪರಮಪೂಜ್ಯರ ಪಾದಪದ್ಮಗಳಿಗೆ ನನ್ನ ಅನಂತನಮನ.

ಓಂ ನಮೋ ಭಗವತೇ ಶ್ರೀ ರಮಣಾಯ

**15-12-2005** ಲೇಖಕ

# ಪರಿವಿಡಿ

ಪುಟಗಳು


| | | |
|---|---|---|
| 1. | ಆಧ್ಯಾತ್ಮ ಜಗತ್ತಿನ ಆಚ್ಚರಿ | 1 |
| 2. | ಶ್ರೀ ಭೂಮಿನಾಥಸ್ಥಲೋತ್ಥಿತ | 4 |
| 3. | ಅರುಣಾಚಲ --- ಅರುಣಾಚಲ | 7 |
| 4. | ಹಾಗಾದರೆ ನಾನು ಯಾರು? | 8 |
| 5. | ತಂದೇ, ನಾನು ಬಂದೆ | 15 |
| 6. | ಮಗೂ ಮನೆಗೆ ಬಾರೋ ! | 21 |
| 7. | ಇಳಿದು ಬಂದ ಲೋಕಕಾರುಣ್ಯ | 23 |
| 8. | ಇವರೇ ನನ್ನ ಗುರು | 26 |
| 9. | ಸ್ಕಂದಾಶ್ರಮ | 34 |
| 10. | ಅಪೂರ್ವಶಿಷ್ಯ ಮುರುಗನಾರ್ | 36 |
| 11. | ವೈದೇಶಿಕೋತ್ತಮ ಪಾಲ್‌ಬ್ರಂಟನ್ | 40 |
| 12. | ಕೃಪಾವೈಭವ | 45 |
| 13. | ಕರುಣಾಪೂರ್ಣಸುಧಾಬ್ಧಿ | 56 |
| 14. | ನಾಹಂ ದೇಹೋ ನೇಂದ್ರಿಯಾಣಿ | 61 |
| 15. | ಕೇವಲಮ್ ಬ್ರಹ್ಮಮಾತ್ರಮ್ | 64 |
| 16. | ಟಿಪ್ಪಣಿ | 73 |
| 17. | ಅನುಬಂಧ (ಮೌನದಿಂದಲೇ ಪರಮಾರ್ಥವನ್ನು ವ್ಯಾಖ್ಯಾನ ಮಾಡಬಹುದು. (ಶ್ರೀಶ್ರೀಗಳವರ ಲೇಖನ) | 75 |

# ಭಗವಾನ್ ಶ್ರೀ ರಮಣಮಹರ್ಷಿಗಳು

## 1. ಅಧ್ಯಾತ್ಮಜಗತ್ತಿನ ಅಚ್ಚರಿ !

ಬ್ರಹ್ಮವಿದ್ ಬ್ರಹ್ಮೈವ ಭವತಿ - ಎಂಬುದು ಪ್ರಸಿದ್ಧವಾದ ಶ್ರುತಿವಾಕ್ಯವಷ್ಟೆ? ಬ್ರಹ್ಮವನ್ನು ಅರಿತವನು ಬ್ರಹ್ಮವೇ ಆಗುತ್ತಾನೆ. ಈ ವಾಕ್ಯದಲ್ಲಿನ ಅರಿಯುವದು ಎಂಬ ಮಾತಿಗೆ ಅರ್ಥವೇನು ? ಅರಿಯುವದು - ತಿಳಿಯುವದು- ಎಂಬುದು ಒಂದು ಕ್ರಿಯೆ. ಅದು ಸಾಧ್ಯವಾಗುವದು ಕರ್ತೃವಿನಿಂದ. ಲೋಕವ್ಯವಹಾರದಲ್ಲಿ ಹಾಗೆ ಅರಿಯಲ್ಪಡುವ ಒಂದು ವಸ್ತು-ವಿಷಯ - ಉಂಟು. ಅದನ್ನು ಅರಿಯುವದು ಮನಸ್ಸು - ಇಂದ್ರಿಯಗಳ ಮೂಲಕ. ಹೀಗಾಗಿ ಇಂದ್ರಿಯಗಳು ಕರಣಗಳು - ಅರಿಯುವ ಸಾಧನಗಳು. ಇದು ಮರ, ಇದು ತಂಗಾಳಿ, ಇದು ಸುವಾಸನೆ, ಇದು ಮಧುರಗಾನ - ಹೀಗೆ ಮನೋವೇದ್ಯವಾಗುವದು, ಕಣ್ಣು ಚರ್ಮ, ನಾಲಿಗೆ ಮೂಗು, ಕಿವಿ, ಈ ಇಂದ್ರಿಯಗಳ ಮೂಲಕ ಎಂದರೆ ಲೋಕದಲ್ಲಿ ವಿಷಯಜ್ಞಾನವಾಗುವದು ಕರ್ತೃ-ಕರ್ಮ- ಕ್ರಿಯೆ ಎಂಬ ವ್ಯವಹಾರದಲ್ಲಿ, ಇಂತಹ ಅರಿಯುವಿಕೆ ಬ್ರಹ್ಮ (=ಆತ್ಮ) ವಿಷಯದಲ್ಲಿ ಹೊಂದುವದಿಲ್ಲವಲ್ಲ ! ಅದು ಅಸ್ಪರ್ಶ, ಅಗೋಚರ, ಹಾಗೆ ನೋಡಿದರೆ ಅದು ಇಂದ್ರಿಯಗೋಚರವಾದ, ವಸ್ತುವೇ ಅಲ್ಲ, ಅದನ್ನು ಮನಸ್ಸು ಹಿಡಿಯಲೇ ಆರದು. ಮಾತು ವರ್ಣಿಸಲೂ ಆರದು. 'ಅಪ್ರಾಪ್ಯ ಮನಸಾ ಸಹ' ಆತ್ಮ (=ಬ್ರಹ್ಮ)ವನ್ನು ಅರಿಯಲು ಹೊರಟು ಮಾತೂ ಮನಸ್ಸೂ ಸೋತು ಹಿಂತಿರುಗುತ್ತವೆ- ಎಂದು ಶ್ರುತಿಯೇ ಕೈವಾರಿಸಿಬಿಟ್ಟಿದೆಯಲ್ಲ !

-ಎಂದ ಮೇಲೆ ಶ್ರುತಿವಾಕ್ಯದ ಬ್ರಹ್ಮವಿದ್ ಎಂಬುದರ ಅರ್ಥ ಲೋಕ ವ್ಯವಹಾರಕ್ಕೆ ಹೊಂದುವದಿಲ್ಲ, ಅಲ್ಲಿ ಅರಿಯುವದು ಎಂದರೆ ಅನುಭವಕ್ಕೆ ತಂದುಕೊಳ್ಳುವದು, ಅನುಭವ - ಇಂದ್ರಿಯಗಳನ್ನೂ ಮನಸ್ಸು ಮುಂತಾದ ಅಂತಃಕರಣಗಳೂ ಸೇರಿದಂತೆ ಹಿಡಿಯಲಾರದ ಅನುಭವ - ಎಂದರೆ ಈ ಅನುಭವವೇ ತಾನಾಗುವದು. ಅಲ್ಲಿ ಅನುಭವಿ, ಅನುಭವ, ಅನುಭವಿಸುವಿಕೆ ಎಂಬ ತ್ರಿಪುಟಿಯೇ ಇಲ್ಲ, ಅರ್ಥಾತ್ ಕರ್ತೃಕರ್ಮಕ್ರಿಯೆಗಳ ವ್ಯಾಕರಣವೇ

ಇಲ್ಲ! ಮರವನ್ನು ತಿಳಿದವನು ಮರವೇ ಆಗುತ್ತಾನೆ ಎಂಬುದು ವ್ಯವಹಾರದಲ್ಲಿ ಹಾಸ್ಯಾಸ್ಪದ. ಹಾಗೆಯೇ ಬ್ರಹ್ಮವನ್ನು ತಿಳಿದವನು ಬ್ರಹ್ಮವೇ ಆಗುತ್ತಾನೆ - ಎಂಬುದೂ ವ್ಯವಹಾರಜಗತ್ತಿಗೆ ಒಂದು ವಿಸ್ಮಯ - ಒಂದು ಅದ್ಭುತ. ಆದರೆ ಅಧ್ಯಾತ್ಮಜಗತ್ತಿನ ಈ ಅನುಭವವೇ ಬ್ರಹ್ಮಜ್ಞಾನಿಗೆ ಸತ್ಯಸ್ಯ ಸತ್ಯ. ಅತ್ಯಂತ ಸಹಜ ಎಂಬುದರ ಪ್ರತ್ಯಕ್ಷ ಉದಾಹರಣೆ - ಎಂದರೆ ಭಗವಾನ್ ಶ್ರೀ ರಮಣಮಹರ್ಷಿಗಳು. 'ಬ್ರಹ್ಮವಿದ್ ಬ್ರಹ್ಮೈವ ಭವತಿ' ಎಂಬ ಶ್ರುತಿವಾಕ್ಯದ ಲಕ್ಷ್ಯವೇ ಅವರಾಗಿದ್ದರು - ಎಂದರೆ ಅತಿಶಯೋಕ್ತಿಯಲ್ಲ. ಸನಾತನಭಾರತದ ಅಧ್ಯಾತ್ಮಋಷಿಗಳ ಭವ್ಯಪರಂಪರೆಯೇ ಕಳೆದ ಶತಮಾನದಲ್ಲಿ ಅವರಿಂದ ಪುನರುಜ್ಜೀವನಗೊಂಡಿತು. ಅಂಗೈಮೇಲಿನ ನೆಲ್ಲಿಕಾಯಿಯಷ್ಟು ಖಚಿತವಾಗಿ, ಸ್ಪಷ್ಟವಾಗಿ ಅವರಿಗೆ ಸತ್ಯದರ್ಶನವಾಯಿತು. ಅದು ಸ್ವಾನುಭವವೇ ಆಯಿತು. ಆ ಅನುಭವವೇ ಅವರಾದರು. ''ಆಶ್ಚರ್ಯವತ್ ಪಶ್ಯತಿ ಕಶ್ಚಿದೇನಂ'' ಎಂಬಂತೆ ಸುತ್ತಲ ಜಗತ್ತು ಅವರನ್ನು ಅಚ್ಚರಿಯಿಂದ ಕಂಡಿತು. ಕೇಳಿತು. ಅವರೇ ಒಂದು ಅಚ್ಚರಿ - ಎಂದು ಮೌನವಾಗಿ ಮಣಿಯಿತು.

ಅಚ್ಚರಿ- ಎಂಬ ಶಬ್ದಕ್ಕೆ 'ಅಭೂತಪೂರ್ವವಾದದ್ದು' ಎಂಬ ಅರ್ಥವಿದೆಯಷ್ಟೆ? ರಮಣಮಹರ್ಷಿಗಳು ಸನಾತನಋಷಿಪರಂಪರೆಯನ್ನೇ ಪುನರುಜ್ಜೀವಿಸಿದರು - ಎಂದಮೇಲೆ ಅಚ್ಚರಿ ಏನು ? ಎಂಬ ಸಂದೇಹ ಮೂಡಬಹುದು. ಸತ್ಯದರ್ಶನ, ಸತ್ಯನಿಷ್ಠತೆ, ಅಪಾರಲೋಕಾನುಕಂಪ, ಲೋಕವಿಷಯ- ವಸ್ತುಗಳಲ್ಲಿ ತೀವ್ರವೈರಾಗ್ಯ - ಮುಂತಾದ ಹಲವು ಅಂಶಗಳಲ್ಲಿ ಅವರು ಪೂರ್ವಪರಂಪರೆಯನ್ನು ನೆನಪಿಸುತ್ತಾರೆ ಎಂಬುದು ನಿಜ. ಆದರೆ ಕೆಲವು ವಿಶಿಷ್ಟ ಸಂಗತಿಗಳನ್ನೂ ಅವರ ಜೀವನಪಥದಲ್ಲಿ ಕಳೆದ ಶತಮಾನವು ಗುರುತಿಸಿ ಚಕಿತವಾಯಿತು. ಸನಾತನವೇದಾಂತವಿದ್ಯೆಯೇ ಮೂರ್ತಿಮಂತಾಗಿದ್ದ ಅವರು ತಮ್ಮ ಆತ್ಮಾನುಭವದ ಪೂರ್ವಸಿದ್ಧತೆ- ಎಂಬಂತೆ ವೇದೋಪನಿಷತ್ತುಗಳನ್ನು ಅಭ್ಯಾಸಮಾಡಿದವರೇ ಅಲ್ಲ. 'ಗುರುಮೇವಾಭಿಗಚ್ಛೇತ್ ಶ್ರೋತ್ರಿಯಂ ಬ್ರಹ್ಮನಿಷ್ಠಮ್' ಎಂಬ ವಿಧಿವಾಕ್ಯವನ್ನು ಅನುಸರಿಸಿ ನಿರ್ದಿಷ್ಟಗುರುವನ್ನು ಹುಡುಕಿ ಸೇವಿಸಿದವರೂ ಅಲ್ಲ. ಮನೆಯಲ್ಲಿಯೇ ಲಭ್ಯವಿದ್ದ ತಮಿಳುಭಾಷೆಯ ''ಪೆರಿಯ ಪುರಾಣಂ'' ಎಂಬ ಅರವತ್ತನಾಲ್ಕು ಶೈವಸಂತರ ಚರಿತ್ರೆ ಹಾಗೂ ಶಾಲೆಯಲ್ಲಿ

ಕಡ್ಡಾಯವಾಗಿ ಕಲಿಯಬೇಕಿದ್ದ ಬೈಬಲ್‌ಗ್ರಂಥವನ್ನು ಬಿಟ್ಟರೆ ಬೇರೆ ಯಾವದೇ ಧಾರ್ಮಿಕ - ಅಧ್ಯಾತ್ಮ ಗ್ರಂಥಗಳನ್ನು ಓದಿರಲಿಲ್ಲ. ಆತ್ಮ - ಜೀವ - ಬ್ರಹ್ಮ - ಇಂತಹ ಪಾರಿಭಾಷಿಕಶಬ್ದಗಳ ಪರಿಚಯವೂ ಅವರಿಗಿರಲಿಲ್ಲ. ಅತ್ಯಂತ ಜನಪ್ರಿಯವಾದ ಶ್ರೀಮದ್-ಭಗವದ್ಗೀತೆಯೂ ಅವರ ಗಮನಕ್ಕೆ ಬಂದಿರಲಿಲ್ಲ. ಅವರು ಆತ್ಮಾನುಭವವನ್ನು ಪಡೆದು ತನ್ನಿಷ್ಠರಾಗಿ, ಸಹಜಸಮಾಧಿಸ್ಥರಾಗಿ ಅರುಣಾಚಲದಲ್ಲಿ ನೆಲೆನಿಂತ ಅನಂತರ ಶಿಷ್ಯರು ತಂದುಕೊಡುತ್ತಿದ್ದ ಗ್ರಂಥಗಳಾದ ವಿವೇಕಚೂಡಾಮಣಿ, ಕೈವಲ್ಯನವನೀತ, ಆತ್ಮಬೋಧ, ಹಸ್ತಾಮಲಕಸ್ತೋತ್ರ, ದೇವಿಕಾಲೋತ್ತರ - ಮುಂತಾದ ಗ್ರಂಥಗಳನ್ನು ಓದಿ ಬಹುಶೀಘ್ರವಾಗಿ ಅವುಗಳ ಅಂತರಾರ್ಥವನ್ನು ಗ್ರಹಿಸಿದವರಾದರೂ ಆ ಅಭ್ಯಾಸ ಹೊಸಅನುಭವಕ್ಕಾಗಿ ಅಲ್ಲ. ತಮಗಾಗಲೇ ಆಗಿಬಿಟ್ಟಿದ್ದ ಅಧ್ಯಾತ್ಮ ಅನುಭವಕ್ಕೆ, ಶಾಸ್ತ್ರದಲ್ಲಿಯೂ ಆಧಾರವಿದೆ - ಎಂಬುದನ್ನು ಕಂಡುಕೊಳ್ಳುವದಕ್ಕಾಗಿ. ಜ್ಞಾನಪಿಪಾಸುಗಳಿಗೆ ವಿವರಿಸುವದಕ್ಕಾಗಿ. ಹೀಗಾಗಿ ಶಾಸ್ತ್ರಾಭ್ಯಾಸಂಗ ಆತ್ಮಾನುಭವದ ಅನಂತರ - ಪೂರ್ವಭಾವಿಯಾಗಿ ಅಲ್ಲ- ಎಂಬುದು ಅವರ ಜೀವನದಲ್ಲಿನ ಒಂದು ವಿಸ್ಮಯ.

ತಮ್ಮ ಅಧ್ಯಾತ್ಮ ಅನುಭವಗಳ ಹಾಗೂ ವೇದಾಂತಚಿಂತನೆಯ ಅಭಿವ್ಯಕ್ತಿಗೆ ಅವರು ಹಿಡಿದ ಮಾರ್ಗವೂ ವಿಶಿಷ್ಟವಾದದ್ದೇ. ಗ್ರಂಥರಚನೆ ಅವರ ಮನೋವೃತ್ತಿಯಾಗಲಿಲ್ಲ. ಅವರು ಲೋಕಸಂಚಾರ (ಪರಿವ್ರಜನ) ಮಾಡಲಿಲ್ಲ. ಪ್ರವಚನ - ಉಪನ್ಯಾಸಗಳನ್ನು ನೀಡಲಿಲ್ಲ. ತಮ್ಮನ್ನು ಯಾವದೇ ನಿರ್ದಿಷ್ಟ ಪಂಥದ ಗುರು ಎಂದು ಭಾವಿಸಿ, ಶಿಷ್ಯಸ್ವೀಕಾರ ಮಾಡಲಿಲ್ಲ. ದೀಕ್ಷೆ ನೀಡಲಿಲ್ಲ. ತಮ್ಮ ಉತ್ತರಾಧಿಕಾರಿ ಎಂದು ಯಾರನ್ನೂ ಆರಿಸಿಕೊಂಡವರಲ್ಲ. ಸದಾ ಆತ್ಮಾರಾಮರಾಗಿ, ಸದಾಶಿವಬ್ರಹ್ಮೇಂದ್ರರಂತೆ ಪುರಾಣಯುಗದ ಶುಕಮಹರ್ಷಿ ಯಂತೆ - ನಿತ್ಯತಪಸ್ವಿಗಳಾಗಿ ಸಹಜಸಮಾಧಿಸ್ಥಿತಿಯಲ್ಲಿ ಇದ್ದುಬಿಟ್ಟರು. ಆದರೆ ಇಂದೂ ಇರಬಹುದಾದ ಹಲವು ಜೀವನ್ಮುಕ್ತರಂತೆ ಅವರು ಲೋಕದಿಂದ ದೂರವಾಗಿ - ತನಗೆ ಈ ಜಗತ್ತು ಬೇಡ, ಜಗತ್ತಿಗೆ ತಾವು ಬೇಡ, ಎಂಬಂತೆ

ಅಗೋಚರತಪಸ್ವಿಯಾಗಿ ಇದ್ದವರೂ ಅಲ್ಲ, ತಮ್ಮ ಇಹದ ಬದುಕಿನ 52 ವರ್ಷಗಳು ಅರುಣಾಚಲದಲ್ಲಿ (ತಮಿಳುನಾಡಿನ ತಿರುವಣ್ಣಾಮಲೆ) ಸ್ಥಿರವಾಗಿ ನಿಂತು, ಬೇರೊಂದು ಕ್ಷೇತ್ರಕ್ಕೆ ತೆರಳದೆ ಆ ಮಹಾಮೌನಿಯ ಸನ್ನಿಧಿಗೆ ಪೂರ್ವ-ಪಶ್ಚಿಮ ಭೇದವಿಲ್ಲದೆ, ಜಾತಿ-ಮತ -ವಯಸ್ಸು - ಲಿಂಗ ಭೇದವಿಲ್ಲದೆ ಜಗತ್ತು ಧಾವಿಸಿ ಬಂದದ್ದು ವಿಸ್ಮಯವೇ. ಹಾಗೆ ಬಂದವರಲ್ಲಿ ಆಧ್ಯಾತ್ಮಗುರುಗಳು, ರಾಜರಾಣಿಯರು, ಪ್ರಕಾಂಡಪಂಡಿತರು, ಕವಿಶ್ರೇಷ್ಠರು, ಸಾಮಾನ್ಯಸಾಧಕರು, ಬಹುವಿದಗ್ಧರು, ಹಾಗೆಯೇ ಅತಿಮುಗ್ಧರೂ ಪುನೀತರಾದದ್ದು - ಮತ್ತೂ ಅಚ್ಚರಿಯ ವಿಷಯವೇ. ಈ ವಿಷಯದಲ್ಲಂತೂ ಅವರು ಅಭೂತಪೂರ್ವ ಎಂದು ಅನಿಸಿದರೆ ಅದು ಅಚ್ಚರಿಯಲ್ಲ!

## 2. ಶ್ರೀ ಭೂಮಿನಾಥ ಸ್ಥಲೋತ್ಥಿತ

"ತಮಿಳುನಾಡಿನ "ಮಧುರೆ" ಪುರಾಣಪ್ರಸಿದ್ಧವಾದ ಕ್ಷೇತ್ರ. ಇತಿಹಾಸ ಪ್ರಸಿದ್ಧವೂ ಹೌದು. ಅದು ಚೋಳರ-ಪಾಂಡ್ಯರ ರಾಜಧಾನಿ. ಇಲ್ಲಿಯ ಅಧಿದೈವ ಮೀನಾಕ್ಷಿದೇವಿ, ಪಾಂಡ್ಯಕುಮಾರಿ ಎಂದೇ ಪ್ರಸಿದ್ಧಳು. ಕೈಲಾಸದ ಶಿವನಿಗೆ ಒಲಿದು ಅವನನ್ನೇ ತನ್ನ ರಾಜಧಾನಿಗೆ ಕರೆಸಿಕೊಂಡ ಮಹಾದೇವಿ ಅವಳು. ಈ ಮೀನಾಕ್ಷಿ- ಸುಂದರೇಶ್ವರರ ಪ್ರಣಯ-ಕಲ್ಯಾಣ-ನೃತ್ಯವೈಭವಗಳು ಪ್ರಸಿದ್ಧ ಕವಿಗಳ- ಗಾಯಕರ-ನೃತ್ಯಪಟುಗಳ-ಜಾನಪದ ಕಲಾವಿದರ ಹೃದಯ ಮಂದಿರದಲ್ಲಿ ಚಿರಸ್ಥಾಯಿಯಾಗಿದೆ. ಹಾಗೆಯೇ ದ್ರಾವಿಡಶಿಲ್ಪದ ನಿತ್ಯವಸ್ತುವೂ ಆಗಿದೆ.

ಇಂತಹ ಪಟ್ಟಣಕ್ಕೆ ಸುಮಾರು 38 ಮೈಲುಗಳ ದೂರದಲ್ಲಿನ ತಿರುಚುಳಿಯೂ ಪ್ರಸಿದ್ಧವಾದ ಯಾತ್ರಾಸ್ಥಳ. ಭೂಮಿನಾಥೇಶ್ವರ ಹಾಗೂ ಸಹಾಯವಲ್ಲಿ ಈ ಶೈವಕ್ಷೇತ್ರದ ಅಧಿದೈವರು. ತಮಿಳುನಾಡಿನ ಶ್ರೇಷ್ಠಕವಿಗಳೂ ಸಂತರೂ ಆದ ಶ್ರೀ ಅಪ್ಪರ್, ಶ್ರೀ ಸುಂದರಾರ್, ಶ್ರೀ ಮಾಣಿಕ್ಯ ವಾಚಗರ್-ಮುಂತಾದವರು ಈ ದಿವ್ಯಕ್ಷೇತ್ರವನ್ನು ಸಂದರ್ಶಿಸಿ ಶಿವ-ಪಾರ್ವತಿಯರನ್ನು ಭಾವಪೂರ್ಣವಾಗಿ ಹಾಡಿ ಸ್ತುತಿಸಿದ್ದಾರೆ.

ದೇವಾಲಯದ ಎದುರಿಗೆ ತ್ರಿಶೂಲತೀರ್ಥ. ಶಿವನ ತ್ರಿಶೂಲದ ಒಂದೇ ಪೆಟ್ಟಿನಿಂದ ಇದು ಉದ್ಭವವಾಯಿತಂತೆ.

ಹೀಗೆ ಪುರಾಣಪ್ರಸಿದ್ಧವಾದ ತಿರುಚುಳಿ (ಆವರ್ತಪುರ)ಯಲ್ಲಿ ಶ್ರೀ ರಮಣಮಹರ್ಷಿಗಳು 1879, ಡಿಸೆಂಬರ್ 30 ರಂದು ಜನ್ಮತಾಳಿದರು. ಅವರ ತಂದೆ ಜನಪ್ರಿಯವಕೀಲರಾಗಿದ್ದ ಶ್ರೀ ಸುಂದರಂ ಅಯ್ಯರ್, ತಾಯಿ ಶ್ರೀಮತಿ ಅಳಗಮ್ಮಾಳ್ ಎಂಬ ಸಾಧ್ವೀಶಿರೋಮಣಿ. ಈ ಪುಣ್ಯದಂಪತಿಗಳ ಮೂವರು ಗಂಡುಮಕ್ಕಳಲ್ಲಿ ರಮಣಮಹರ್ಷಿ ಎಂದು ಮುಂದೆ ಖ್ಯಾತರಾದ ವೆಂಕಟರಮಣ ಎರಡನೆಯವನು. ಅವರ ಅಣ್ಣ ನಾಗಸ್ವಾಮಿ ಮತ್ತು ತಮ್ಮ ನಾಗಸುಂದರಂ ಅಲ್ಲದೆ- ಅಲುಮೇಲು ಎಂಬ ತಂಗಿಯೊಬ್ಬಳೂ ಈ ಕುಟುಂಬದಲ್ಲಿದ್ದಳು.

ವೆಂಕಟರಮಣ ಜನಿಸಿದುದು ಸೌರಮಾನದ ಮಾರ್ಗಳಿಮಾಸದಲ್ಲಿ. ಅಂದು ತಿರುಚುಳಿಯಲ್ಲಿ ಆರ್ದ್ರಾದರ್ಶನಮಹೋತ್ಸವ. ಭೂಮಿನಾಥೇಶ್ವರನ ಉತ್ಸವ ನಗರ ಪ್ರದಕ್ಷಿಣೆಯನ್ನು ಮುಗಿಸಿ ರಾತ್ರಿ ಒಂದು ಗಂಟೆಗೆ ದೇವಾಲಯವನ್ನು ಪ್ರವೇಶಿಸುತ್ತಿದ್ದ ಮಂಗಳ ಮುಹೂರ್ತದಲ್ಲಿ ವೆಂಕಟರಮಣನ ಜನ್ಮವಾಯಿತು. ಅದೇ ಆಗ ಆಗಮಿಸಿದ್ದ ಕಣಿ ಹೇಳುವ ವೃದ್ಧೆಯೊಬ್ಬಳು- '' ಈಗ ಜನಿಸಿದ ಈ ಮಗು ದೈವಾಂಶಸಂಭೂತನೇ ಆಗುತ್ತಾನೆ '' ಎಂದಿದ್ದಳಂತೆ. ಎರಡು ಸಾವಿರ ವರ್ಷಗಳ ಹಿಂದೆ ಬೆತ್ಲಹಮ್ ಗ್ರಾಮದಲ್ಲಿ ಏಸುಕ್ರಿಸ್ತನ ಜನನವಾದದ್ದು ಅದೇ ಗಳಿಗೆಯಲ್ಲಿ ಎಂಬುದು ಗಮನಾರ್ಹ. ಹಾಗೆಯೇ ಮುಂದೆ 1950ರ ಏಪ್ರಿಲ್ 14 ರಂದು ಸಂಜೆ ಶುಭ ಶುಕ್ರವಾರ ಏಸುವಿನ ನಿರ್ಯಾಣದ ದಿನದಂದೇ ರಮಣಮಹರ್ಷಿಗಳ ಮಹಾನಿರ್ವಾಣವಾದದ್ದೂ ಒಂದು ವಿಸ್ಮಯದ ಘಟನೆಯೇ.

ಆದರೆ ಇವೆಲ್ಲ ಲೋಕದ ಗಮನಕ್ಕೆ ಬಂದದ್ದು ಅನಂತರದಲ್ಲಿಯೇ ! ವೆಂಕಟರಮಣನ ಬಾಲ್ಯಜೀವನದ ಹನ್ನೆರಡು ವರ್ಷಗಳಲ್ಲಿ ಅಂತಹ ವಿಶಿಷ್ಟ ಘಟನೆಗಳೇನೂ ಸಂಭವಿಸಲಿಲ್ಲ. ತನ್ನ ಒಡನಾಡಿಗಳಂತೆ ಹುಡುಗನಿಗೂ ಆಟೋಟಗಳಲ್ಲಿ ಪ್ರೇಮ. ಅದರಲ್ಲೂ ಫುಟ್‌ಬಾಲ್ ಆಟದಲ್ಲಿ ಅವನು ಪ್ರವೀಣ.

ಗೆಳೆಯರೊಡನೆ ಆ ಆಟದಲ್ಲಿ ಎಂದೂ ಅವನು ಸೋತದ್ದೇ ಇಲ್ಲ. ಆರೋಗ್ಯ ದೃಢಕಾಯನಾಗಿ ಚೆಲುವಾಗಿದ್ದ ಬಾಲಕ ಸಹಜವಾಗಿಯೇ ಗ್ರಾಮದ ಕಣ್ಮಣಿಯಾಗಿದ್ದ. ಅವನ ನೆನಪಿನ ಶಕ್ತಿಯೂ ಸುಂದರವಾದ ಬರವಣಿಗೆಯೂ ಶಾಲೆಯಲ್ಲಿನ ಅಧ್ಯಾಪಕರ ಗಮನ ಸೆಳೆಯುವಂತಿದ್ದವು. ಗ್ರಾಮವನ್ನು ಬಳಸಿ ಹರಿಯುತ್ತಿದ್ದ ಕೌಂಡಿನ್ಯನದಿಯಿಂದ ನೀರು ತಂದು ಕಲಯಾರ್ ದೇವಾಲಯದ ಶಿವಲಿಂಗಕ್ಕೆ ಅಭಿಷೇಕಮಾಡುವದೂ, ನದಿಯ ಮರಳಿನಲ್ಲಿ ಗೆಳೆಯರೊಡನೆ ಆಟವಾಡುವದೂ ಅವನ ಪ್ರಿಯವಾದ ದಿನಚರಿ. ಮನಸ್ಸಿಗೆ ಬೇಸರ-ದುಃಖ ಆದರೆ ಸಹಾಯವಲ್ಲಿಅಂಬಾಳ್‌ದೇವಾಲಯದಲ್ಲಿ ಕುಳಿತು ದೇವಿಯೆದುರು ಅತ್ತು ಹೃದಯವನ್ನು ಹಗುರಾಗಿಸಿಕೊಂಡರೆ ಅವನಿಗೆ ಎಷ್ಟೋ ಸಮಾಧಾನ.

ಬಾಲಕನ ಗಾಢವಾದ ನಿದ್ರೆ (ಅದು ನಿದ್ರೆಯೋ ಸಮಾಧಿಯೋ !) ಎಲ್ಲರ ಅಚ್ಚರಿಗೆ ಕಾರಣವಾಗಿತ್ತು. ಅದೆಂತಹ ಯಮನಿದ್ರೆಯೆಂದರೆ ಎಷ್ಟು ಗದ್ದಲವಾದರೂ ಅವನಿಗೆ ಎಚ್ಚರವಾಗುತ್ತಲೇ ಇರಲಿಲ್ಲ. ಸಂಜೆ ಆಟದಲ್ಲಿ ಸೋತ ಗೆಳೆಯರು ಮತ್ಸರದಿಂದ ಅವನನ್ನು ಅನಾಮತ್ತು ಎತ್ತಿಕೊಂಡು ಚೆನ್ನಾಗಿ ಹೊಡೆದು ಬಡಿದು ಪುನಃ ತಂದು ಹಾಸಿಗೆಯ ಮೇಲೆ ಮಲಗಿಸಿದರೂ ವೆಂಕಟರಮಣನಿಗೆ ಎಚ್ಚರವೇ ಆಗುತ್ತಿರಲಿಲ್ಲವಂತೆ ! ಒಮ್ಮೆ ಮನೆಯಲ್ಲಿ ಒಬ್ಬನೇ ಓದುತ್ತಿದ್ದ ಬಾಲಕನನ್ನು ಬಿಟ್ಟು ಯಾವದೋ ಉತ್ಸವಕ್ಕೆಂದು ಎಲ್ಲರೂ ದೇವಾಲಯಕ್ಕೆ ಹೋಗಿದ್ದರಂತೆ. ಓದು ಮುಗಿಸಿದ ಬಾಲಕ ಬಾಗಿಲಚಿಲುಕ ಹಾಕಿ, ಕಿಟಕಿಗಳನ್ನು ಮುಚ್ಚಿ ಮಲಗುತ್ತಿದ್ದಂತೆಯೇ ನಿದ್ರೆ ಹೋದನಂತೆ. ಹಿಂತಿರುಗಿ ಬಂದವರು ಎಷ್ಟು ಬಾಗಿಲು ಬಡಿದರೂ, ಕಿಟಕಿಯಲ್ಲಿ ಕೂಗಾಡಿದರೂ ಎಚ್ಚರವೇ ಆಗಲಿಲ್ಲವಂತೆ. ಪಕ್ಕದ ಮನೆಯವರ ಸಹಾಯದಿಂದ ಬಾಗಿಲು ತೆರೆದು, ಒಳಗೆ ಬಂದು ಹುಡುಗನನ್ನು ಅಕ್ಷರಶಃ ಬಡಿದರೂ ಅವನಿಗೆ ನಿದ್ರೆ ಹರಿಯಲೇ ಇಲ್ಲವಂತೆ. ಬೆಳಗಾದಮೇಲೆ ಈ ಎಲ್ಲಾ ಸಂಗತಿಗಳನ್ನು ಹಾಗೆ ಹೊಡೆದವರೇ ವಿವರಿಸಿ ಹೇಳಿದರೂ ಬಾಲಕನಿಗೆ ಯಾವ ನೆನಪೂ ಆಗಲಿಲ್ಲವಂತೆ. ಅಂತಹ ಗಾಢನಿದ್ರೆ ವೆಂಕಟರಮಣನದು, ಬಾಲ್ಯದಲ್ಲಿ.

ಹೀಗೆ ಇನ್ನೂ ಬಾಲ್ಯದ ದಿನಗಳು ಕಳೆಯುತ್ತಿರುವಾಗಲೇ, ಹನ್ನೊಂದನೆಯ

ವರ್ಷದಲ್ಲಿ ವೆಂಕಟರಮಣನ ತಂದೆ ಸುಂದರಂಅಯ್ಯರ್ ವಿಧಿವಶರಾಗಿಬಿಟ್ಟರು. ಆಗಿನ ಬಾಲಕನ ಅನುಭವ ಸ್ವಲ್ಪ ವಿಶಿಷ್ಟವಾದದ್ದೇ ಎನ್ನಬಹುದು. (1890) ಮೃತ ದೇಹದ ಬಳಿ ತಾಯಿ-ಸಹೋದರರು ಎಲ್ಲರೂ ಗಟ್ಟಿಯಾಗಿ ರೋದಿಸುತ್ತಿದ್ದರು. ಆದರೆ ಬಾಲಕ ಮೌನವಾಗಿ ಕುಳಿತು ಈ ಸಾವನ್ನು ಕುರಿತೇ ಚಿಂತಿಸತೊಡಗಿದ್ದ. ದೇಹವನ್ನು ದಹನಕರ್ಮಕ್ಕೆ ತೆಗೆದುಕೊಂಡು ಹೋದರು. ಓಹೋ ! ಅದು ಈಗ ಬರಿಯ ಜಡವಸ್ತು. ಈ ಮೊದಲು ಅದರಲ್ಲಿದ್ದ ಯಾವುದೋ "ನಾನು" ಎಂಬುದರಿಂದಲೇ ಅದು ನೋಡುತ್ತಿತ್ತು, ಓಡಾಡುತ್ತಿತ್ತು, ತಿಂದು ಕುಡಿಯುತ್ತಿತ್ತು. ಅಪ್ಪನ ಈ "ನಾನು" ಅವರನ್ನು ಬಿಟ್ಟುಹೋಗಿದೆ. ಬರಿಯ ದೇಹವನ್ನು ತೆಗೆದುಕೊಂಡು ಹೋಗಿದ್ದಾರೆ. ನನ್ನಲ್ಲಿ ನಾನು ಎಂಬುದು ಅರಿವಿಗೆ ಬರುತ್ತಿದೆ..... ಹೀಗೆ ಬಾಲಕನ ಚಿಂತನೆ ಹರಿದಿತ್ತು. ಉಳಿದವರಂತೆ ಅವನು ಅಳುತ್ತಲೇ ಇರಲಿಲ್ಲ. ಆ ವಯಸ್ಸಿಗೆ ಇಂತಹ ದೇಹಾತ್ಮವಿಮರ್ಶೆ ವಿಶಿಷ್ಟವೇ. ಯಾವ ಅಧ್ಯಾತ್ಮಗ್ರಂಥವನ್ನೂ ಅವನು ಅಭ್ಯಾಸಮಾಡಿರಲಿಲ್ಲ. ಅವನ ಚಿಂತನೆ ಒಂದು ಪ್ರಜ್ಞಾಪೂರ್ವಕಕ್ರಿಯೆ ಆಗಿರಲಿಲ್ಲ. ಅತಿಸಹಜವಾದ ಅನುಭವವೇ ಆಗಿತ್ತು. ಸತ್ಯದ ನೇರದರ್ಶನ ವಾಗಿತ್ತು. "ನಾಹಂ ದೇಹೋ ನೇಂದ್ರಿಯಾಣಿ......." ಎಂಬ ಅನುಭವ ಅದು.

## 3. ಅರುಣಾಚಲ...ಅರುಣಾಚಲ !

"ವೆಂಕಟರಮಣನಿಗೆ ಹದಿನೈದು ವರ್ಷವಾದಾಗ, ಅಧ್ಯಾತ್ಮಜಗತ್ತಿನ ದೃಷ್ಟಿಯಿಂದ, ಮತ್ತೊಂದು ವಿಸ್ಮಯದ ಘಟನೆ ನಡೆಯಿತು. ಆಗ ಅವರು ಮಧುರೆಯಲ್ಲಿ ಚಿಕ್ಕಪ್ಪ ಸುಬ್ಬಯ್ಯರ್ ಮನೆಯಲ್ಲಿದ್ದರು. ಮನೆಗೆ ಬಂಧುವೊಬ್ಬರು ತಿರುಚುಳಿಯಿಂದ ಬಂದರು. "ಎಲ್ಲಿಂದ ಬರುತ್ತಿದ್ದೀರಿ?" ಎಂದು ಬಾಲಕ ಸಹಜವಾಗಿ ಕೇಳಿದ. "ಅರುಣಾಚಲದಿಂದ" ಎಂದು ಅಷ್ಟೇ ಸಹಜವಾದ ಉತ್ತರ ದೊರೆಯಿತು. "ಏನು ಅರುಣಾಚಲವೆ? ಅದು ಈ ಭೂಮಿಯ ಮೇಲಿದೆಯೆ? ಅದೆಲ್ಲಿದೆ? " ಎಂದು ಬಾಲಕ ವಿಸ್ಮಯದಿಂದ ಕೇಳಿದ. ಎಲಾ ! ಎಂತಹ ದಡ್ಡತನ ! ಸಮೀಪದ ತಿರುವಣ್ಣಾಮಲೆಯೇ ಅರುಣಾಚಲ ಎಂಬುದು ಇವನಿಗೆ ತಿಳಿದಿಲ್ಲವೆ, ಎಂದು ಆ ಬಂಧುವಿಗೆ ಅಚ್ಚರಿ. ಆದರೆ ವೆಂಕಟರಮಣನಷ್ಟು ಖಚಿತವಾಗಿ ಅರುಣಾಚಲವನ್ನು ತಿಳಿದವರು ಮತ್ತೆ ಯಾರಿದ್ದಾರು? ಅರುಣಾಚಲ.....?

ಅರುಣಾಚಲ..... ಅರುಣಾಚಲ...ಎಂದು ಸಹಜ ಸ್ಪಂದನ ಸದಾ ಅವನ ಹೃದಯದಲ್ಲಿ ಜಾಗೃತವೇ ಆಗಿತ್ತಂತೆ! "ಆಲೋಚನೆಯೂ ಮೂಡದಷ್ಟು ಎಳೆಯದಿನದಿಂದಲೇ ನನ್ನ ಅಂತಃಪ್ರಜ್ಞೆಯಲ್ಲಿ ಅದು ಸ್ಫುರಿಸುತ್ತಿತ್ತು" ಎನ್ನುತ್ತಾರೆ ರಮಣರು. ಅದನ್ನು ತಂದೆ ತಾಯಿ ಗೆಳೆಯರಿಗೆ ಏಕೆ ಹೇಳಲಿಲ್ಲ? ಎಂದರೆ "ಎಲ್ಲರ ಹೃದಯದಲ್ಲೂ ಹೀಗೆಯೇ ಸ್ಫುರಿಸುತ್ತದೆ" ಎಂಬ ಭಾವನೆ ಅವರಿಗೆ. (ತರುಣ ನರೇಂದ್ರನಿಗೆ ನಿದ್ರಿಸುವ ಸಮಯದಲ್ಲಿ ಹುಬ್ಬುಗಳ ನಡುವೆ ಒಂದು ಬೆಳಕು ಕಾಣುತ್ತಿತ್ತಂತೆ. ಎಲ್ಲರಿಗೂ ಹೀಗೆಯೇ ಆಗುತ್ತದೆ ಎಂದು ಅವರು ತಿಳಿದಿದ್ದರಂತೆ!)

## 4.ಹಾಗಾದರೆ 'ನಾನು' ಯಾರು?

"ರಮಣರ ಜೀವನದ ಮಹತ್ವದ ಘಟನೆ ಎನ್ನಬಹುದಾದ ಮರಣಾನುಭವ ವನ್ನು ಕುರಿತು ಈಗ ಚಿಂತಿಸಬಹುದು. ಅದು ಸಂಭವಿಸಿದುದು 1896ರ ಜುಲೈ 17 ರಂದು, ಮಧುರೆಯಲ್ಲಿ ಅವರ ಚಿಕ್ಕಪ್ಪನವರ ಮನೆಯ ಮೇಲುಮಾಳಿಗೆಯಲ್ಲಿ. ಮನೆಯವರಾರು ಇರಲಿಲ್ಲ, ಬಾಲಕ ವೆಂಕಟರಮಣ ಏಕಾಕಿಯಾಗಿದ್ದ. ಇದ್ದಕ್ಕಿದ್ದಂತೆ ತೀವ್ರವಾದ ಮರಣಭೀತಿ ಅವನನ್ನು ಮುತ್ತಿಬಿಟ್ಟಿತು. ಸಾಮಾನ್ಯವಾಗಿ ದೇಹದಲ್ಲಿ ದುರ್ಬಲತೆಯಿದ್ದಾಗ ಅಥವಾ ಕತ್ತಲು-ಏಕಾಕಿತನ ಮುಂತಾದ ಸಂದರ್ಭದಲ್ಲಿ ಹೀಗಾಗುವದುಂಟು. ಆದರೆ ವೆಂಕಟರಮಣ ಸದೃಢವಾಗಿ ಆರೋಗ್ಯದಿಂದಿದ್ದ. ಏಕಾಕಿತನವಂತೂ ಅವನಿಗೆ ಸಹಜವೇ ಆಗಿಬಿಟ್ಟಿತ್ತು. ಅಲ್ಲದೆ ಅದು ಮಧ್ಯಾಹ್ನದ ವೇಳೆ. ಭೀತಿಗೆ-ಅದರಲ್ಲೂ ಮರಣದ ಭೀತಿಗೆ ಏನೇನೂ ಕಾರಣವಿರಲಿಲ್ಲ. 'ನಾನು ಇಗೋ ಈಗ ಸಾಯುತ್ತಿದ್ದೇನೆ' ಎಂದು ದೃಢವಾಗಿ ಅವನಿಗೆ ಎನಿಸಿಬಿಟ್ಟಿತು. ಮುಖ್ಯವಾದ ಮಾತೆಂದರೆ, ಅಂತಹ ಉತ್ಕಟಭಾವದಲ್ಲೂ ಯಾರನ್ನಾದರೂ ಕೂಗಿ ಕರೆಯಬೇಕು ಎಂದು ಅವನಿಗೆ ಎನ್ನಿಸಲೇ ಇಲ್ಲ. ಸ್ನೇಹಿತರ ಹಾಗೂ ವೈದ್ಯರ ನೆರವು ಕೋರಲು ಅವರು ಇಚ್ಛಿಸಲಿಲ್ಲ. ಇದು ನನ್ನ ಸಮಸ್ಯೆ; ಇದನ್ನು ಪರಿಹರಿಸಿಕೊಳ್ಳಬೇಕಾದದ್ದು ನಾನೇ ಎಂದುಕೊಂಡು. ಹದಿನಾರುವರ್ಷದ ಬಾಲಕನಲ್ಲಿ ಇಂತಹ ಅಸಾಮಾನ್ಯ ಬೌದ್ಧಿಕಎಚ್ಚರ ಅಪೂರ್ವವೇ. ನಾನು ಯಾರು? ಎಂಬ ಪ್ರಶ್ನೆಗೆ ತಕ್ಷಣದ ಉತ್ತರ ದೊರಕಿಬಿಟ್ಟಿತು. ಅದು ಪ್ರಶ್ನೆಗೆ ಉತ್ತರವಷ್ಟೇ ಅಲ್ಲದೆ ಅನುಭವವೇ ಆಗಿಬಿಟ್ಟಿತು. ಅದನ್ನು ಪ್ರಾಯೋಗಿಕವಾಗಿ ನೋಡಿಬಿಡುತ್ತೇನೆ-

ಎಂದುಕೊಂಡ ಬಾಲಕ ಉಸಿರನ್ನು ಬಿಗಿಹಿಡಿದ, ದೇಹವನ್ನು ಕಟ್ಟಿಗೆಯಂತೆ ಮಾಡಿಕೊಂಡು ಮಲಗಿಬಿಟ್ಟ. ದೇಹ ಕೊರಡಿನಂತೆ ಬಿದ್ದಿರುವದನ್ನೂ ತಾನು ಅದಕ್ಕೆ ಸಾಕ್ಷಿಯಾಗಿ ನಿರ್ಬಾಧಿತನಾಗಿರುವದನ್ನು ಕಂಡುಕೊಂಡ. ಬಾಲಕನ ಚಿಂತನೆ ಹೀಗೆ ಹರಿಯಿತು. ''ಈಗ ಈ ದೇಹ ಸತ್ತುಹೋಗಿದೆ. ಇದನ್ನು ಸ್ಮಶಾನಕ್ಕೆ ಒಯ್ದು ಸುಟ್ಟು ಬೂದಿಮಾಡುತ್ತಾರೆ. ಆದರೇನು? ನಾನು ಸಾಯಲಿಲ್ಲ''. ಅತ್ಯಂತ ದೃಢವಾಗಿ ಪ್ರಬಲವಾಗಿ ನಾನು-ನಾನು ಎಂಬ ಸ್ಫುರಣೆ, ಸ್ಪಂದನ, ಅನುಭವಕ್ಕೆ ಬರುತ್ತಲೇ ಇದೆ. ಸಂಗೀತದ ನಿರಂತರ ಶ್ರುತಿಯಂತೆ ಮೊರೆಯುತ್ತಲೇ ಇದೆ. ''ಹಾಗಾದರೆ ನಾನು ಎಂಬುದು ಈ ದೇಹವಲ್ಲ, ನಾನು ಮರಣರಹಿತ ಅಮರಚೈತನ್ಯ'' ಎಂಬುದನ್ನು ಅನುಭವಿಸಿ ತಿಳಿಸಿದರು. ಒಂದೆರಡು ನಿಮಿಷದಲ್ಲಿ ಸಾಧ್ಯವಾದ ಈ ಅನುಭವ ತೀವ್ರವಾದ ಮೃತ್ಯುಭೀತಿಯನ್ನು ಕೂಡಲೆ ಅಳಿಸಿಬಿಟ್ಟಿತು. ಅಖಂಡಅರಿವಿನಲ್ಲಿ ಬಾಲಕ ಮುಳುಗಿಹೋದ. ನಾನು ಯಾರು? ಎಂಬ ಶೋಧನೆಗೆ ಉತ್ತರವಾಗಿ-ಅದರ ಫಲವಾಗಿ ಈ ಅಪೂರ್ವಚೈತನ್ಯವೊಂದೇ ಎದ್ದುಕೊಂಡು ನನ್ನನ್ನು ಕಬಳಿಸಿಬಿಟ್ಟಿತು. ಮುಂದೆ ನಡೆದುದೆಲ್ಲ ಆ ಚೈತನ್ಯಕ್ಕೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ಅದು ಸೆಳೆದುಕೊಂಡು ಹೋದತ್ತ ಹೋದುದು. ಮುಖ್ಯವಾಗಿ ಆ ಕ್ಷಣದಲ್ಲಿ ವೆಂಕಟರಮಣ ಎಂಬ ನಾಮ-ರೂಪದ ದೇಹವು ಸತ್ತುಹೋಯಿತು. ಎಂದು ರಮಣರು ಮುಂದೆ ಆ ಘಟನೆಯನ್ನು ಸ್ಮರಿಸಿಕೊಳ್ಳುತ್ತಾರೆ. ಈಗ ಅವರ ಮನೋದೃಷ್ಟಿ ವರ್ತನೆಗಳೆಲ್ಲ ಸಂಪೂರ್ಣವಾಗಿ ಬೇರೆಯೇ ಆದವು. ಹಿಂದಿನ ಇಷ್ಟಾನಿಷ್ಟಗಳೆಲ್ಲ ಅಳಿದುಹೋದವು. ಎಲ್ಲದರಲ್ಲೂ ಪೂರ್ಣವಿರಕ್ತಿ, ಮನೆಗೆಲಸದ ಒತ್ತಡಗಳು, ಓದುಬರಹ, ಗೆಳೆಯರ ಒಡನಾಟ. ಯಾವದರಲ್ಲೂ ಹಿಂದಿನ ಆಸಕ್ತಿ ಉಳಿಯಲಿಲ್ಲ. ಆದರೆ ನಡೆವಾಗ, ನುಡಿವಾಗ, ಮಲಗಿದಾಗಲೆಲ್ಲ ನಾನು-ನಾನು ಎಂಬ ನಿರಂತರಸ್ಫುರಣೆಯೊಂದೇ ಮೊರೆಯುತ್ತಿತ್ತು, ಪ್ರತಿದಿನವೂ ಸಮೀಪದ ಮೀನಾಕ್ಷಿದೇವಾಲಯಕ್ಕೆ ಹೋಗುತ್ತಿದ್ದರು. ಆದರೆ ಹಿಂದಿನಂತೆ ಪೂಜೆ, ಜಾಗಟೆ, ಗಂಟೆಗಳಲ್ಲಿ ಮನಸ್ಸು ತೊಡಗಲಿಲ್ಲ, ಗಂಟೆಗಟ್ಟಲೆ ಭಾವಪೂರ್ಣರಾಗಿ ಮೀನಾಕ್ಷಿ-ಸುಂದರೇಶ್ವರರ ಹಾಗೂ ಅರವತ್ತಮೂರು ಶೈವಸಂತರ ವಿಗ್ರಹಗಳ ಮುಂದೆ ನಿಂತುಬಿಡುತ್ತಿದ್ದರು. ಅಪ್ರಯತ್ನವಾಗಿ, ಕಣ್ಣುಗಳಿಂದ ಆನಂದಬಾಷ್ಪ ಚಿಮ್ಮುತ್ತಿದ್ದಿತು. ಅದು ಪ್ರಬಲಶಕ್ತಿಪಾತವೇ ಇರಬಹುದು, ಹೃದಯಕಮಲದ ವಿಕಾಸವಿರಬಹುದು. ಸಹಜ

ಸಹಸ್ರಾರದ ಸಾವಿರದಳದ ಅಮೃತಧಾರೆಯೇ ಇರಬಹುದು. ಅದನ್ನು ಬಡಮಾತುಗಳಲ್ಲಿ ವರ್ಣಿಸುವದಾದರೂ ಹೇಗೆ? ಮುಖ್ಯವಾಗಿ ಅವರಲ್ಲಿ ಈಗ ಯಾವ ಉದ್ವೇಗ-ಕಳವಳ-ಭೀತಿಗಳೂ ಇರಲಿಲ್ಲ. ಅವರು ಶಾಂತವಾಗಿದ್ದರು-ಸ್ವಸ್ಥವಾಗಿದ್ದರು- ಆನಂದಮಯವಾಗಿದ್ದರು. "ಹೃತ್ ಸ್ಥಲೇ ಮನಃಸ್ವಸ್ಥತಾ ಕ್ರಿಯಾ ಭಕ್ತಿ-ಯೋಗ-ಬೋಧಾತ್ಮ ನಿಶ್ಚಿತಮ್-" ಎಂದು ಮುಂದೆ ಅವರು ಆತ್ಮಸಂಸ್ಥಿತಿಯನ್ನು ವರ್ಣಿಸಿದ್ದಾರೆ.

ಈ ಅಪೂರ್ವ ಅನುಭವದ ಅನಂತರ ಅವರು ಸಹಜಸಮಾಧಿಯಲ್ಲಿ ಇದ್ದುಬಿಟ್ಟರು. ಆತ್ಮನಿಷ್ಠರಾದರು. ಕ್ಷಣಾರ್ಧವೂ ಆ ಸ್ಥಿತಿಯಿಂದ ವಿಚಲಿತರಾಗಲಿಲ್ಲ. "ನಿಮೇಷಾರ್ಧಂ ನ ತಿಷ್ಠನ್ತಿ ದೃಷ್ಟಿಂ ಜ್ಞಾನಮಯೀಂ ವಿನಾ" ಎಂಬುದೇ ಅವರು ನಿಂತ ನೆಲೆ. "ಅವಿಚ್ಯುತನಿಜಪ್ರಜ್ಞಾಯ ನಮಃ" ಎಂದು ವಿಶ್ವನಾಥಸ್ವಾಮಿಗಳು ಶ್ರೀರಮಣಾಷ್ಟೋತ್ತರದಲ್ಲಿ ಅವರನ್ನು ಸ್ತುತಿಸಿದ್ದಾರೆ. ಜುಲೈ 17 ರಿಂದ ಸೆಪ್ಟೆಂಬರ್ 1ನೇ ದಿನದವರೆಗೆ ನಡೆದ ಯಾವದೇ ಘಟನೆಯಲ್ಲೂ ಅವರ ಚಿಂತನೆ-ಸಂಕಲ್ಪ ಎಂಬುದೇ ಇರಲಿಲ್ಲ- ಏನು ನಡೆಯಬೇಕಿತ್ತೋ ಹೇಗೆ ನಡೆಯಬೇಕಿತ್ತೋ ಹಾಗೆಯೇ ನಡೆದುಹೋಯಿತು. ಅದು ಈಗ ಇತಿಹಾಸವೇ ಆಗಿ ಲೋಕವನ್ನು ಚಕಿತಗೊಳಿಸಿದೆ.

ರಮಣರ ಈ ಆತ್ಮಾನುಭವದ ಆರುವಾರಗಳ ಅನಂತರ ಅವರ ಜೀವನಯಾತ್ರೆಗೆ ಒಂದು ನಿಶ್ಚಿತಗತಿ ಉಂಟಾಯಿತು. 1896ರ ಆಗಸ್ಟ್ 29ರಂದು ನಡೆದ ಘಟನೆ ಅದು. ವಿದ್ಯಾಭ್ಯಾಸದಲ್ಲಿ ಉಳಿದ ಕೆಲಸಗಳಲ್ಲಿ-ಅವರ ತೀವ್ರ ಉದಾಸೀನ, ಅವರ ಚಿಕ್ಕಪ್ಪ ಹಾಗೂ ಅಣ್ಣ ನಾಗಸ್ವಾಮಿಯ ಕೋಪ-ಕುಹಕಗಳಿಗೆ ಪಾತ್ರವಾದದ್ದು ಸಹಜವೇ. ಅಂದು ಶಾಲೆಯಲ್ಲಿ ಇಂಗ್ಲಿಷ್ ವ್ಯಾಕರಣದ ಪ್ರಶ್ನೆಗೆ ಉತ್ತರ ನೀಡಲಿಲ್ಲವೆಂದು ಮನೆಯಲ್ಲಿ ಸರಿಯಾಗಿ ಬರೆದುಕೊಂಡು ಬರುವ ಶಿಕ್ಷೆಯನ್ನು ಅಧ್ಯಾಪಕರು ನೀಡಿದ್ದರು. ಮೂರು ಬಾರಿ ಬರೆಯಬೇಕಿತ್ತು. ಎರಡು ಸಲ ಬರೆದು ಮುಗಿಸಿದಾಗ. ಇದೆಲ್ಲ ಪೂರ್ಣಅರ್ಥಹೀನ-ಎಂದು ತೀವ್ರವಾಗಿ ಬಾಲಕನಿಗೆ ಎನಿಸಿಬಿಟ್ಟಿತು. ಬರವಣಿಗೆ ನಿಲ್ಲಿಸಿ ಧ್ಯಾನದಲ್ಲಿ ಮುಳುಗಿದರು. ಅದನ್ನು ಕಂಡ ನಾಗಸ್ವಾಮಿ "ನಿನ್ನಂಥವನಿಗೆ ಈ ಓದು ಬರಹ ಎಲ್ಲ ಯಾಕೆ?" ಎಂದು ಛೇಡಿಸಿದರು. ಬಾಲಕನಿಗೆ ಬೇಸರವಾಗಲಿಲ್ಲ-ಕೋಪವೂ ಬರಲಿಲ್ಲ. 'ಹೌದು

ನನ್ನಂಥವನಿಗೆ ಇದೆಲ್ಲ ಯಾಕೆ? ಇದು ಅರುಣಾಚಲನ ಆದೇಶವೇ ಸರಿ' ಎಂದುಕೊಂಡರು. ಮನೆಯನ್ನು ತೊರೆದುಹೋಗುವ ಚಿಂತನೆಗೆ ತೊಡಗಿದರು.

ತಾನು ತರಗತಿಗೆ, ವಿಶೇಷ ತರಗತಿಗೆ ಹೋಗುತ್ತಿದ್ದೇನೆ- ಎಂದು ಅಣ್ಣನಿಗೆ ಹೇಳಿ ಮೇಲೆದ್ದರು. ''ಸರಿ ಹಾಗಾದರೆ ಕೆಳಗಡೆ ಪೆಟ್ಟಿಗೆಯಲ್ಲಿ ಐದುರೂಪಾಯಿ ಇದೆ. ನಿನ್ನ ಸ್ಕೂಲ್ ಹತ್ತಿರವೇ ನನ್ನ ಕಾಲೇಜು ಇದೆಯಲ್ಲ, ನನ್ನ ಫೀಸು ಕಟ್ಟಿಬಿಡು'' ಎಂದರು ಅಣ್ಣ. ''ಓ ಇದೂ ದೈವಸಹಾಯವೇ'' ಎಂದುಕೊಂಡ ಬಾಲಕ ಕೆಳಗಿಳಿದು ಆತುರ ಆತುರವಾಗಿ ಊಟಮಾಡಿ, ಐದುರೂಪಾಯಿ ತೆಗೆದುಕೊಂಡರು. ತಿರುವಣ್ಣಾಮಲೆ ಎಲ್ಲಿದೆ- ಎಂಬುದೂ ಅವರಿಗೆ ತಿಳಿದಿರಲಿಲ್ಲ. ಹಳೆಯ ಅಟ್ಲಾಸ್ ಸಹಾಯದಿಂದ 'ತಿಂಡಿವನಂ'- ಎಂಬ ರೈಲುನಿಲ್ದಾಣ ಅದಕ್ಕೆ ಹತ್ತಿರವಿದೆ ಎಂದು ಪತ್ತೆಮಾಡಿದರು. ವಾಸ್ತವದಲ್ಲಿ ಅವರು ಅಲ್ಲಿಯವರೆಗೆ ಹೋಗುವ ಅಗತ್ಯವೇ ಇರಲಿಲ್ಲ. 1892ರಲ್ಲಿಯೇ ವಿಲ್ಲುಪುರಂನಿಂದ ತಿರುವಣ್ಣಾಮಲೆಗೆ ನೇರವಾದ ರೈಲುಪ್ರಯಾಣಸೌಲಭ್ಯ ಏರ್ಪಟ್ಟಿತ್ತು. ಅದು ಬಾಲಕನಿಗೆ ತಿಳಿದಿರಲಿಲ್ಲ. ಸುಮಾರು ಮೂರು ರೂಪಾಯಿ ತನಗೆ ಸಾಕು -ಎಂದು ಏಕೋ ಲೆಕ್ಕ ಹಾಕಿದರು. ಎರಡು ರೂಪಾಯಿಗಳನ್ನು ಪೆಟ್ಟಿಗೆಯಲ್ಲಿಯೇ ಇರಿಸಿದರು. ಮನೆಗೆ ವಿದಾಯ ಹೇಳಬೇಕು- ತಮ್ಮ ಬಗೆಗೆ ಯಾರೂ ಆತಂಕಪಟ್ಟುಕೊಳ್ಳಬಾರದು ಎಂದು ಅಂತಿಮಪತ್ರವೊಂದನ್ನು ಬರೆದಿಟ್ಟರು. ಅದರ ಕನ್ನಡ ಅನುವಾದ ಇದು :

''ನಾನು ತಂದೆಯನ್ನು ಹುಡುಕಿ, ಅವನ ಆಜ್ಞೆಯ ಪ್ರಕಾರವೇ ಇಲ್ಲಿಂದ ಹೊರಟಿದ್ದೇನೆ. ಇದು ಮಹತ್ತ್ವದ ಸಾಹಸದ ಯಾತ್ರೆ. ಆದುದರಿಂದ ಯಾರೂ ಇದಕ್ಕಾಗಿ ಶೋಕಿಸಬಾರದು. ಇದನ್ನು ಹುಡುಕಲು ಯತ್ನಿಸಬಾರದು. ಇದಕ್ಕಾಗಿ ಹಣ ಖರ್ಚುಮಾಡಬಾರದು. ನನ್ನ ಕಾಲೇಜು ಫೀಸು ಕಟ್ಟಲಾಗಿಲ್ಲ. ಇದರೊಡನೆ ಎರಡು ರೂ. ಗಳನ್ನು ಇರಿಸಿದೆ.-''

ಮೇಲುನೋಟಕ್ಕೆ ರಮಣರು ಬರೆದಿರುವ ಪತ್ರ ಒಂದು ವಿದಾಯದ ಸಂದೇಶ ಎಂದು ಮಾತ್ರ ಪ್ರಾಪ್ತವಾಗುತ್ತದೆ. ಆದರೆ ಸೂಕ್ಷ್ಮಚಿಂತನೆಗೆ ಅದರ ಅರ್ಥದ ಒಳಪದರಗಳು ಸ್ಪಷ್ಟವಾಗುತ್ತವೆ. ಮೊದಲು ಗಮನಕ್ಕೆ ಬರುವದು ಪತ್ರದಲ್ಲಿ ವೆಂಕಟರಮಣನ ಸಹಿಯೇ ಇಲ್ಲ - ಎಂಬುದು. ಅದೇನು ರಹಸ್ಯ ಪತ್ರವಾಗಿರಲಿಲ್ಲ. ತಾನು ಮನೆಯಿಂದ ನಿರ್ಗಮಿಸುತ್ತಿರುವದನ್ನು ನೇರವಾಗಿ

ತಿಳಿಸುವದೇ ಆದರ ಉದ್ದೇಶವಷ್ಟೆ! ಅಲ್ಲದೆ ಅಣ್ಣನ ಕಾಲೇಜು ಶುಲ್ಕ ಕಟ್ಟಲಾಗಿಲ್ಲ ಎಂಬ ಸತ್ಯಸಂಗತಿಯನ್ನೂ ಅದು ಸಾರುತ್ತಿದೆ. ಹಾಗಾದರೆ ಪತ್ರಕ್ಕೆ ಸಹಿ ಹಾಕದಿರುವ ಉದ್ದೇಶವೇನು? ಅವರೇ ವಿವರಿಸುವಂತೆ ಆತ್ಮಾನುಭವದ ಆ ಕ್ಷಣದಲ್ಲೇ ನಾಮರೂಪದ ವೆಂಕಟರಮಣ ಸತ್ತುಹೋದ. ಕೇವಲ ಚೈತನ್ಯವೇ ತಾವಾಗಿದ್ದರು. ರಮಣರು ತಮ್ಮ ಮುಂದಿನ ಐವತ್ತನಾಲ್ಕು ವರ್ಷಗಳ ಜೀವಿತಾವಧಿಯಲ್ಲಿ ಯಾವ ಪತ್ರಕ್ಕೂ ಸಹಿ ಹಾಕಲಿಲ್ಲ. ಅವರ ಪಾಲಿಗೆ ವೆಂಕಟರಮಣ ಇನ್ನು ಇರಲಿಲ್ಲ.

ಪತ್ರದಲ್ಲಿನ ಮೊದಲ ವಾಕ್ಯ ತಾನು ಹೀಗೆ ಮನೆಯಿಂದ ಹೊರಟದ್ದು ಅರುಣಾಚಲ ಎಂಬ ದಿವ್ಯಶಕ್ತಿಯ ಆಜ್ಞೆಯನ್ನು ಪರಿಪಾಲಿಸಲು, ಅದು ಅವನದೇ ಇಚ್ಛೆ ಎಂಬ ಸೂಚನೆಯಿದೆ. ಹಾಗೆ ಆ ಮಹಾಶಕ್ತಿಗೆ ತಾನು ಶರಣಾದ ಮೇಲೆ ಈ ಶರೀರವನ್ನು ಹುಡುಕಲು ಯತ್ನಿಸುವದು, ಅದಕ್ಕಾಗಿ ಬಂಧುಗಳು ಹಣವನ್ನು ಖರ್ಚುಮಾಡುವದೂ ವ್ಯರ್ಥ- ಎಂಬ ಸ್ಪಷ್ಟ ಆದೇಶವೇ ಇದೆ. ಕಾಲೇಜು ಶುಲ್ಕ ಪಾವತಿ ಮಾಡದ- ಎರಡು ರೂ.ಗಳನ್ನು ಹಾಗೆಯೇ ಇರಿಸಿದ ವಾಕ್ಯದಲ್ಲಿಯೂ "ನಾನು" ಎಂಬ ಪದವೇ ಇಲ್ಲದೆ... ಹೀಗೆ ನಡೆದಿದೆ ಎಂಬ ಸಂಗತಿಯ ನಿರೂಪಣೆ ಮಾತ್ರವೇ ಇದೆ. ಅವರಲ್ಲಿ 'ಅಹಂ ಕರೋಮಿ' ಎಂಬ ಕರ್ತೃತ್ವಭಾವ ಸಂಪೂರ್ಣವಾಗಿ ಅಳಿದುಹೋಗಿದೆ.

ಪತ್ರವನ್ನು ಬರೆದಿಟ್ಟ ರಮಣರು ವೇಗವಾಗಿ ಮಧುರೆಯ ರೈಲುನಿಲ್ದಾಣಕ್ಕೆ ಹೋದರು. ರೈಲು ಹೊರಡುವ ವೇಳೆ ಬೆಳಗ್ಗೆ 11-45, ಆದರೆ ಆಗಲೆ 12 ಗಂಟೆಯೂ ಆಗಿತ್ತು, ರೈಲು ಬಂದದ್ದೇ ಅಂದು ತಡವಾಗಿ! ಎರಡು ರೂಪಾಯಿ ಹದಿಮೂರು ಅಣೆಗೆ ತಿಂಡಿವನಂ ಟಿಕೆಟ್ ದೊರಕಿತು. ಮೂರುಆಣೆ ಹಿಂತಿರುಗಿಸಲ್ಪಟ್ಟಿತು! ತಿರುವಣ್ಣಾಮಲೆ ಎಂಬ ನಿಲ್ದಾಣ ಇರುವದೇ ಅವರಿಗೆ ತಿಳಿದಿರಲಿಲ್ಲ. ಮಧುರೆ ದಾಟಿ ಒಂದೆರಡು ನಿಲ್ದಾಣ ಕಳೆಯುತ್ತಿದ್ದಂತೆಯೇ ಗಡ್ಡಧಾರಿಯಾದ ಮೌಲ್ವಿಯೊಬ್ಬರು ಅವರನ್ನು ಮಾತನಾಡಿಸಿ- "ಸ್ವಾಮಿ, ಎಲ್ಲಿಗೆ ಹೋಗುತ್ತಿದ್ದೀ?" ಎಂದು ಕೇಳಿದರು. "ತಿರುವಣ್ಣಾಮಲೆಗೆ-ನನ್ನ ಹತ್ತಿರ ತಿಂಡಿವನಂಗೆ ಟಿಕೆಟ್ ಇದೆ." "ಅರೆ, ನೀನೊಬ್ಬ ವಿಚಿತ್ರ ಪ್ರಯಾಣಿಕ. ತಿಂಡಿವನಂಗೆ ಯಾಕೆ ಹೋಗಬೇಕು? ನಾನೂ ತಿರುವಣ್ಣಾಮಲೆಗೇ ಹೋಗಬೇಕು.

ನಾವು ವಿಲ್ಲುಪುರಂನಲ್ಲಿ ರೈಲು ಬದಲಾಯಿಸಬೇಕು.'' ಸ್ವಲ್ಪ ಹೊತ್ತಾದ ನಂತರ ಈ ಮೌಲ್ವಿ ಎಲ್ಲಿ ಹೋದರೋ ಕಾಣಲೇ ಇಲ್ಲ.

ಸಂಜೆಯವರಿಗೂ ಧ್ಯಾನಸ್ಥರಾಗಿ ರಮಣರು ಕುಳಿತೇ ಇದ್ದರು. ತಿರುಚಿರಪಲ್ಲಿಗೆ ರೈಲು ಬಂದಾಗ ಅವರಿಗೆ ಹಸಿವು ತೋರಿತು. ಕೈಯಲ್ಲಿದ್ದುದು ಕೇವಲ ಮೂರು ಆಣೆ. ಎರಡು ಸೀಬೆಹಣ್ಣು ಕೊಂಡರು. ಆದರೆ ಒಂದು ಹಣ್ಣನ್ನು ಕೊಂಚವೇ ಕಚ್ಚಿ ತಿನ್ನುವಷ್ಟರಲ್ಲಿಯೇ ಅವರ ಹಸಿವು ಇಂಗಿಹೋಯಿತು. ಪುನಃ ಧ್ಯಾನಸ್ಥರಾಗಿಬಿಟ್ಟರು. ರೈಲು ವಿಲ್ಲುಪುರಂ ತಲುಪಿದಾಗ ಮೂರುಗಂಟೆ ಬೆಳಗಿನಜಾವ. ಕೆಳಗಿಳಿದು ತಿರುವಣ್ಣಾಮಲೆಯ ಹಾದಿ ಯಾವದಿರಬಹುದೆಂದು ಹುಡುಕಾಡಿದರು. ನಡೆದುಕೊಂಡೇ ಹಾದಿ ಸವೆಸಬೇಕಾದದ್ದು ಅನಿವಾರ್ಯವಾಗಿತ್ತು. ಮಾಂಬಲಪಟ್ಟು - ಎಂದು ಬರೆದ ಕೈಮರ ಕಂಡಿತು. ಆಯಾಸದಿಂದ ಬಸವಳಿದು ಸಮೀಪದ ಉಪಹಾರಗೃಹಕ್ಕೆ ಹೋದರೂ ಊಟ ದೊರೆಯಲು ಮಧ್ಯಾಹ್ನದವರೆಗೂ ಕಾಯಬೇಕಾಯಿತು. ಬಾಲಕನ ವಯಸ್ಸು, ಚೆಲುವಾದ ಮೈಕಾಂತಿ, ವೈರಾಗ್ಯವೇ ತುಂಬಿತುಳುಕುವಂತಿದ್ದ ಮುಖದ ನೋಟದಿಂದ ಆಕರ್ಷಿತನಾದ ಹೋಟೆಲ್ ಮಾಲೀಕ ಉಚಿತವಾಗಿಯೇ ಊಟವನ್ನು ಉಣಬಡಿಸಿದ. ಕೈಯಲ್ಲಿ ಉಳಿದ ಚಿಲ್ಲರೆಯಿಂದ ರಮಣರು ಮಾಂಬಲಪಟ್ಟುವಿಗೆ ಟಿಕೆಟ್‌ಕೊಂಡು ಮಧ್ಯಾಹ್ನ ಮೂರುಗಂಟೆಗೆ ಅಲ್ಲಿಗೆ ತಲುಪಿದರು. ತಿರುವಣ್ಣಾಮಲೆಗೆ ಇನ್ನೂ ಮೂವತ್ತು ಮೈಲುಗಳ ಹಾದಿ ಕ್ರಮಿಸಬೇಕಿತ್ತು. ರಾತ್ರಿಯವರೆಗೂ ಹಾದಿ ನಡೆದ ಹತ್ತು ಮೈಲುಗಳನ್ನು ಕ್ರಮಿಸಿ, ಅರಿಯಾಣಿ ನಲ್ಲೂರು ದೇವಾಲಯಕ್ಕೆ ಬಂದು ತಲುಪಿದರು. ಬಾಗಿಲ ತೆರೆಯುವವರೆಗೂ ಕಾದುನಿಂತರು. ಕೊಂಚವೇ ಬೆಳಕು ತೋರುತ್ತಿದ್ದ ಬಾಗಿಲು ಹಜಾರವನ್ನು ಪ್ರವೇಶಿಸಿ ಅಲ್ಲಿಯೇ ಕುಳಿತರು. ತಕ್ಷಣವೇ ಪ್ರಖರವಾದ ಬೆಳಕು ಇಡಿಯ ದೇವಾಲಯವನ್ನು ತುಂಬಿದುದನ್ನು ಕಂಡರು. ಗರ್ಭಗುಡಿಯಿಂದ ಅದು ಹೊರಹೊಮ್ಮುತ್ತಿರಲಿಲ್ಲ. ಕೊಂಚ ಹೊತ್ತಿನಲ್ಲೇ ಬೆಳಕು ಮರೆಯಾಯಿತು. ಪೂಜೆ-ಮಂಗಳಾರತಿಯ ನಂತರ, ತಮಗೆ ಏನಾದರೂ ಆಹಾರ ದೊರೆಯಬಹುದೆ ಎಂದು ಅರ್ಚಕನನ್ನು ಕೇಳಿದರು. ಸಮೀಪದ ಕೀಲೂರು ದೇವಾಲಯಕ್ಕೆ ಹೋಗುವಂತೆ ಅರ್ಚಕ ಸೂಚಿಸಿದ. ಆದರೆ ಅಲ್ಲಿಯ ಅರ್ಚಕ ಹಾದಿಹೋಕ

ಬಾಲಕನಿಗೆ ಪ್ರಸಾದನೀಡಲು ನಿರಾಕರಿಸಿದ. ಆದರೆ ದೇವಾಲಯದಲ್ಲಿ ನಗಾರಿಯ ಸೇವೆಯಲ್ಲಿ ಆಳು ತನ್ನ ಪಾಲಿನ ಪ್ರಸಾದವನ್ನೇ ಈ ಬಾಲಕನಿಗೆ ನೀಡಿಬಿಡಿ ಎಂದು ಪ್ರಾರ್ಥಿಸಿದ. ಹಾಗೆಯೇ ಆಯಿತು. ಬಾಯಾರಿದ ಬಾಲಕ ನೀರಿಗಾಗಿ ಕೋರಿದಾಗ ಹತ್ತಿರದಲ್ಲಿ ದೊರಕುತ್ತದೆ ಎಂದು ಸೂಚಿಸಲಾಯಿತು. ಪ್ರಸಾದ ತುಂಬಿದ ಎಲೆಯನ್ನು ಕೈಯಲ್ಲಿ ಹಿಡಿದು ಅತ್ತ ನಾಲ್ಕು ಹೆಜ್ಜೆ ನಡೆಯುತ್ತಿರುವಂತೆಯೇ ಆಯಾಸದಿಂದ ಬವಳಿಬಂದು ಬಿದ್ದು ಬಿಟ್ಟ. ಒಂದು ಪುಟ್ಟಗುಂಪೇ ಅವನ ಸುತ್ತ ಜಮಾಯಿಸಿತು. ಅವರು ನೀಡಿದ ನೀರು ಕುಡಿದು ನೆಲದ ಮೇಲೆ ಸೂರೆಯಾಗಿದ್ದ ಅನ್ನದ ಅಗುಳುಗಳನ್ನೇ ಆರಿಸಿ ತಿಂದ. ನೆಲದ ಮೇಲೆಯೇ ಮಲಗಿ ಗಾಢವಾಗಿ ನಿದ್ರಿಸಿಬಿಟ್ಟ. ಅವನ ಈ ತೀವ್ರವಿರಕ್ತಿ ಕಂಡವರನ್ನು ಬೆರಗುಗೊಳಿಸಿತು. ಅಂತಹ ಸ್ಥಿತಿಯಲ್ಲಿಯೂ ಅವನ ಸಮಚಿತ್ತ ಅವನ ವಿಸ್ಮಯವನ್ನು ಹೆಚ್ಚಿಸಿತು.

ಮರುದಿನ ಆಗಸ್ಟ್ 31ರಂದು ಗೋಕುಲಾಷ್ಟಮಿಯ ಸಂಭ್ರಮದ ಹಬ್ಬ! ಊರಿನಲ್ಲಿ ಅಡ್ಡಾಡುತ್ತಾ ಯಾವದೋ ಒಂದು ಮನೆಯ ಮುಂದೆ ಅನೈಚ್ಛಿಕವಾಗಿ ನಿಂತುಬಿಟ್ಟ. ಆಹಾರಕ್ಕಾಗಿ ಪ್ರಾರ್ಥಿಸಿದ. ಅದು ಮುತ್ತುಕೃಷ್ಣಭಾಗವತರ್ ಎಂಬ ಸಜ್ಜನ ಸದ್ಭಕ್ತರ ಮನೆಯಾಗಿತ್ತು. ತನ್ನ ಮುದ್ದುಮುಖ, ಪ್ರಕರವಾದ ಕಣ್ಣುಗಳಿಂದ ಸಾಕ್ಷಾತ್ ಕೃಷ್ಣನಂತೆಯೇ ಮನೆಯಬಾಗಿಲಿಗೆ ಬಂದು ನಿಂತ ಬಾಲಕನನ್ನು ಕಂಡು ಆ ಸಾತ್ವಿಕದಂಪತಿಗಳಿಗೆ ತುಂಬ ಹರ್ಷ ಉಂಟಾಯಿತು. ಮನೆಯ ಯಜಮಾನಿ ಆದರದಿಂದ ಸತ್ಕರಿಸಿ ಸಮೃದ್ಧವಾದ ಭೋಜನವನ್ನೇ ನೀಡಿದಳು. ತನ್ನ ಕಿವಿಗಳಲ್ಲಿ ಧರಿಸಿದ್ದ ಓಲೆಗಳನ್ನು ಬಾಲಕ ಆ ಭಾಗವತರಲ್ಲಿ ಅಡವಿರಿಸಿ ಮುಂದಿನ ಪ್ರಯಾಣಕ್ಕೆಂದು ನಾಲ್ಕು ರೂಪಾಯಿಗಳನ್ನು ಪಡೆದುಕೊಂಡ. ಭಾಗವತರು ಅದಕ್ಕಾಗಿ ಒಂದು ರಸೀತಿಯನ್ನೂ ತಮ್ಮ ವಿಳಾಸವನ್ನೂ ಒಳಗೊಂಡ ಚೀಟಿಯನ್ನು ಕೊಟ್ಟು ಯಾವಾಗ ಬೇಕಾದರೂ ಹಣವನ್ನು ಹಿಂದಿರುಗಿಸಿ, ಓಲೆಗಳನ್ನು ವಾಪಸು ಪಡೆಯಬಹುದು - ಎಂದು ಸೂಚಿಸಿದರು. ಆದರೆ ಬಾಲಕನ ಹಾದಿ ಮತ್ತೊಂದು ಲೌಕಿಕಜೀವನಕ್ಕೆ ಹಿಂದಿರುಗದ ನಿಶ್ಚಿತಹಾದಿ. ಸ್ವಲ್ಪದೂರ ಹೋಗಿ ಹಾದಿ ತಿರುಗುತ್ತಿದ್ದಂತೆಯೇ ಬಾಲಕ ಆ ಚೀಟಿಯನ್ನು ಹರಿದು ಎಸೆದ. ಮನೆಯ ಒಡತಿಯ ಮನಸ್ಸಿಗೆ ನೋವಾಗದಂತೆ, ಆಕೆ ಪ್ರೀತಿಯಿಂದ ನೀಡಿದ್ದ ಸಿಹಿತಿಂಡಿಯ

ಪೊಟ್ಟಣದೊಡನೆ ಮುಂದಕ್ಕೆ ನಡೆದ. ರೈಲು ಬರುತ್ತಿದ್ದುದು ಮರುಹಗಲಿನಲ್ಲಿಯೇ. ಆದುದರಿಂದ ರೈಲು ನಿಲ್ದಾಣದಲ್ಲಿಯೇ ರಾತ್ರಿಯನ್ನು ಕಳೆದ.

## 5. "ತಂದೇ ನಾನು ಬಂದೆ"

1896ರ ಸೆಪ್ಟೆಂಬರ್ ಮೊದಲ ದಿನಾಂಕ ಬಾಲಕ ರಮಣ, ತಿರುವಣ್ಣಾಮಲೆ ರೈಲು ನಿಲ್ದಾಣದಲ್ಲಿ ಬಂದಿಳಿದ. ನೇರವಾಗಿ ಅರುಣಾಚಲೇಶ್ವರ ದೇವಾಲಯಕ್ಕೆ ನಡೆದ. ಎಲ್ಲ ಬಾಗಿಲುಗಳೂ ತೆರೆದಿದ್ದವು. ಜನರ ಸುಳಿವೂ ಇರಲಿಲ್ಲ, ಗರ್ಭಗುಡಿಗೇ ಬಂದ ಬಾಲಕ, ಹರ್ಷಬಾಷ್ಪಗಳನ್ನು ಸುರಿಸುತ್ತಾ ಭಾವಗದ್ಗದನಾಗಿ. "ತಂದೆ ನಾನು ಬಂದೆ." ಎಂದು ಆ ಮಹಾಶಕ್ತಿಗೆ ಶರಣಾಗಿಬಿಟ್ಟ "ಅಮ್ಮನ ಮಡಿಲಿನಿಂದ ಅಪ್ಪನ ಬಳಿಗೆ ಸ್ಕಂದ ಚಿಮ್ಮಿ ನೆಗೆದಂತೆ" ಎಂದು ಕಾವ್ಯಕಂಠಮುನಿ ಈ ಘಟನೆಯನ್ನು ಕಾವ್ಯಮಯವಾಗಿ ಹಾಡಿದ್ದಾರೆ. ಮಧುರೆಯ ಮೀನಾಕ್ಷಿಯ ಸನ್ನಿಧಿಯನ್ನು ತೊರೆದು ಇದೀಗ ಅವನು ಅರುಣಾಚಲೇಶ್ವರನ ಆಶ್ರಯದಲ್ಲಿದ್ದಾನೆ.

ದೇವಾಲಯದಿಂದ ಹೊರಬರುತ್ತಿದ್ದಂತೆಯೇ ಅಪರಿಚಿತರೊಬ್ಬರು "ಏನೋ ಮಗು, ಮುಡಿ ಕೊಡಬೇಕಾ?" ಎಂದು ಕೇಳಿದರು. ಹೌದು ಎಂಬಂತೆ ಬಾಲಕ ತಲೆದೂಗಿದ. ಅವರೇ ಅವನನ್ನು ಸಮೀಪದ ಅಯ್ಯನಕುಲಂ ಕೊಳದ ಬಳಿಗೆ ಕರೆದುಕೊಂಡು ಹೋದರು. ಒಬ್ಬ ನಾಪಿತ, ಅವನ ತಲೆಯನ್ನು ಸಂಪೂರ್ಣವಾಗಿ ಮುಂಡನಮಾಡಿಬಿಟ್ಟ ನಂತರ ಬಾಲಕ ರಮಣ ತನ್ನ ಜನಿವಾರವನ್ನೂ, ಕೈಯಲ್ಲಿ ಉಳಿದಿದ್ದ ಹಣವನ್ನೂ ಭಾಗವತರ ಪತ್ನಿ ನೀಡಿದ ಸಿಹಿತಿಂಡಿಯ ಪೊಟ್ಟಣವನ್ನೂ ಎಸೆದುಬಿಟ್ಟ! ಮುಂದೆಂದೂ ರಮಣರು ಹಣವನ್ನು ಸ್ಪರ್ಶಮಾಡಲೂ ಇಲ್ಲ.

ನಂತರ ತಾನು ಧರಿಸಿದ್ದ ಮುಂಡಬಟ್ಟೆಯನ್ನು ಕಳಚಿ, ಅದರ ಒಂದು ಚೂರನ್ನೇ ಕೌಪೀನವಾಗಿ ಧರಿಸಿಬಿಟ್ಟ. ಇನ್ನೇನು ಸ್ನಾನಮಾಡುವದು ಸಹಜ ಕ್ರಿಯೆ. ಆದರೆ ಅದೇ ವೇಳೆಗೆ ಮಳೆ ಜೋರಾಗಿ ಸುರಿದು ಅವನ ಇಡಿಯ ಶರೀರವನ್ನು ತೋಯಿಸಿಬಿಟ್ಟಿತು. "ಓ ಇದೂ ಆಯಿತು" ಎಂದುಕೊಂಡ ಬಾಲಕ ಪುನಃ ದೇವಾಲಯಕ್ಕೆ ಬಂದ.

1896 ಸೆಪ್ಟೆಂಬರ್ 1ರ ಇಡೀ ದಿನ ಹಾಗೂ ಮುಂದಿನ ಕೆಲವು ದಿನಗಳು

ಮಳೆ ಧಾರಾಕಾರವಾಗಿ ಸುರಿದೇ ಸುರಿಯಿತು. ಅಂಥ ಮಳೆ ಬಹುಕಾಲದಿಂದ ಬಂದೇ ಇರಲಿಲ್ಲವಂತೆ. ಬಾಲಕನ ಮೈಮೇಲೆ ಒಂದು ಕೌಪೀನವಲ್ಲದೆ ಬೇರೆ ಏನೂ ಇರಲಿಲ್ಲ. ಚಳಿಗಾಳಿಯ ಅಬ್ಬರದ ನಡುವೆಯೂ ಅವನು ಆಬಾಧಿತ-ನೆಂಬಂತೆ ಇದ್ದುಬಿಟ್ಟ ಮುಂದಿನ ಒಂದೂವರೆ ವರ್ಷಗಳಲ್ಲಿ ಅವನ ತಲೆಗೂದಲು ಬೆಳೆದು ಜಡೆಗಟ್ಟಿತು. ಅದನ್ನು ನೋಡಲಾರದೆ ಯಾರೋ ತಲೆಗೂದಲನ್ನು ತೆಗೆಸಿದಾಗ "ಅದು ಕಪ್ಪುಕೂದಲ ರಾಶಿಯಾಗಿ ಜೊಂಪೆಬಿದ್ದಿತು" ಎಂದು ನಗುನಗುತ್ತಾ ರಮಣರು ಆ ದಿನಗಳನ್ನು ಸ್ಮರಿಸಿಕೊಳ್ಳುತ್ತಿದ್ದರು. ಹಾಗೆಯೇ ದೇವಾಲಯಕ್ಕೆ ಬಂದ ಮೊದಲ ನಾಲ್ಕು ತಿಂಗಳು ಅವರು ಸ್ನಾನವನ್ನೇ ಮಾಡಿರಲಿಲ್ಲವಂತೆ. ಪೊನ್ನುಸ್ವಾಮಿ ಎಂಬ ಭಕ್ತನ ಹೆಂಡತಿ ಹುಡುಗನಿಗೆ ಬಲಾತ್ಕಾರವಾಗಿ ಸೀಗೆ ಹಚ್ಚಿ ಮೈಯೆಲ್ಲ ಉಜ್ಜಿ ಉಜ್ಜಿ ಸ್ನಾನಮಾಡಿಸಿದಳಂತೆ!

ಸುಮಾರು ಒಂದು ವರ್ಷ ಹೀಗೆ ತೀವ್ರ ವಿರಕ್ತಿ ದೇಹಾಭಿಮಾನ ಶೂನ್ಯತೆಯ ಅವಧೂತಸ್ಥಿತಿಯಲ್ಲಿ ಬಾಲಕ ರಮಣರು ದೇವಾಲಯದ ಮಂಟಪ, ಸುತ್ತಲ ಬೀದಿಗಳು, ಕಂಬಗಳ ಮೂಲೆಗಳನ್ನು ಆಶ್ರಯಿಸಿಕೊಂಡು ಇದ್ದುಬಿಟ್ಟರು. ಸಂಪೂರ್ಣ ಮೌನದಲ್ಲಿದ್ದರು. ಪಳನಿಸ್ವಾಮಿ ಎಂಬ ಶ್ರದ್ಧಾವಂತಭಕ್ತರು ರಮಣರ ತೀವ್ರ ವಿರಕ್ತಿಯಿಂದ ಆಕರ್ಷಿತರಾಗಿ ಅವರ ಯೋಗಕ್ಷೇಮವನ್ನು ನೋಡಿಕೊಳ್ಳತೊಡಗಿದರು.

ಅರುಣಾಚಲೇಶ್ವರ ದೇವಾಲಯದ ಸಹಸ್ರ ಮಂಟಪದಲ್ಲಿ ತಮ್ಮಲ್ಲಿ ತಾವು ಮುಳುಗಿಹೋದಂತೆ ಕುಳಿತಿದ್ದ ಅವರು ತುಂಟ ಬಾಲಕರ ಕುಚೇಷ್ಟೆ- ಹಿಂಸೆಗೆ ಒಳಗಾದುದು ಸಹಜವೇ. ಹುಡುಗರು ಕಲ್ಲು ಇಟ್ಟಿಗೆ ಚೂರುಗಳನ್ನು ಎಸೆಯುತ್ತಿದ್ದರು. ಗದ್ದಲ ಹೂಡುತ್ತಿದ್ದರು. ಆದರೂ ರಮಣರಿಗೆ ಕೋಪವಾಗಲಿ ಪ್ರತೀಕಾರಬುದ್ಧಿಯಾಗಲಿ ಉಂಟಾಗುತ್ತಿರಲಿಲ್ಲ. ಮತ್ತಷ್ಟು ಏಕಾಂತದ ಸ್ಥಳವನ್ನು ಅರಸುತ್ತಾ ಅವರು ಮಂಟಪದ ಒಂದು ಕಗ್ಗತ್ತಲೆಯ ಗುಹೆಗೆ ಹೇಗೋ ಬಂದು ಕುಳಿತುಬಿಟ್ಟರು. ಪಾತಾಳಲಿಂಗವೆಂದೇ ಹೆಸರಾದ ಆ ಗವಿಯಲ್ಲಿ ಕಗ್ಗತ್ತಲು ಕವಿದಿತ್ತು, ನೆಲ ಒದ್ದೆಯಾಗಿತ್ತು. ಇರುವೆ- ಗೊದ್ದ ಮುಂತಾದ ಕೀಟಗಳು ಸಮೃದ್ಧವಾಗಿದ್ದವು. ಈ ಆಗಂತುಕ ಬಾಲಕನ ಮೇಲೆ ಅವ್ಯಾಹತವಾಗಿ ಅವು ಧಾಳಿ ಮಾಡತೊಡಗಿದವು. ದೇಹವೆಲ್ಲ ವ್ರಣವಾಗಿ ಅವುಗಳಿಂದ ರಕ್ತ-ಕೀವು ಒಸರ

ತೊಡಗಿತು. ಇಂಥ ಅಗೋಚರಗುಹೆಯನ್ನು ಹೇಗೋ ಪತ್ತೆ ಹಚ್ಚಿದ ತುಂಟರು ಅಲ್ಲಿಗೂ ಬಂದು ದೂರದಿಂದಲೇ ಕಲ್ಲುಗಳನ್ನು ಎಸೆದು ಹಿಂಸಿಸತೊಡಗಿದರು. ಆದರೆ ಬಾಲಕ ರಮಣ ಇದಾವುದರ ಪರಿವೆಯೇ ಇಲ್ಲದಂತೆ ಕಣ್ಣುಮುಚ್ಚಿ ಕುಳಿತುಬಿಟ್ಟಿದ್ದರು. ದಿನಗಳು ಉರುಳುರುಳಿ ಹೋಗುತ್ತಿದ್ದವು. ಒಮ್ಮೆ ವೆಂಕಟಾಚಲ ಮೊದಲಿ - ಎಂಬುವರು ಅತ್ತಬಂದು ಈ ಹಿಂಸೆಯನ್ನು ನೋಡಲಾರದೆ ಹುಡುಗನನ್ನು ಓಡಿಸಿ, ಗುಹೆಯಲ್ಲಿ ಬಗ್ಗಿ ನೋಡಿ ಚಕಿತರಾದರು. ಕಣ್ಣು ಕತ್ತಲಿಟ್ಟಿತು. ಹೇಗೋ ಸಾವರಿಸಿಕೊಂಡು ಸಮೀಪದ ತೋಟದಲ್ಲಿದ್ದ ಸಾಧು ಒಬ್ಬರನ್ನು ಕರೆದುಕೊಂಡು ಬಂದರು. ಇಬ್ಬರೂ ಸೇರಿ, ಬಾಲಕ ರಮಣರನ್ನು ಅನಾಮತ್ತು ಮೇಲೆತ್ತಿ ತಂದು ಪ್ರಾಂಗಣದಲ್ಲಿದ್ದ ಸುಬ್ರಮಣ್ಯಸ್ವಾಮಿ ದೇವಾಲಯದ ಎದುರು ಕುಳ್ಳಿರಿಸಿದರು. ತನ್ನ ಶರೀರದ ವ್ರಣಗಳ ಬಾಧೆಯಾಗಲಿ ಹೀಗೆ ಹೊರಗಡೆ ಎತ್ತಿ ತಂದುದಾಗಲೀ ಅರಿವೇ ಇಲ್ಲದಂತೆ ರಮಣರು ಸಮಾಧಿಯಲ್ಲಿ ಮುಳುಗಿಹೋಗಿದ್ದರು. ಮೌನಿಸ್ವಾಮಿ ಎಂಬ ಸಾಧು ಅವರ ದೈಹಿಕಅಗತ್ಯವನ್ನು ಸ್ವಲ್ಪಕಾಲ ನೋಡಿಕೊಂಡರು. ಕೊಂಚ ಕಾಲದ ನಂತರ ಹೇಗೋ ರಮಣರು ಮುಳ್ಳುಪೊದೆಗಳಿಂದ ತುಂಬಿದ್ದ ಅರಳೀಮರಗಳ ಗುಂಪಿನಲ್ಲಿ ಬಂದು ಕುಳಿತರು. ಆಗಾಗ ದೇವಾಲಯಪ್ರಾಂಗಣದಲ್ಲಿದ್ದ ಬಗೆಬಗೆಯ ವಾಹನಗಳ ಮಂಟಪದ ಮರೆಯಲ್ಲಿ ಕುಳಿತು ಧ್ಯಾನಸ್ಥರಾಗಿಬಿಡುತ್ತಿದ್ದರು. ತಾನು ತೆವಳಿಕೊಂಡು ಆ ವಾಹನಗಳ ಬಳಿಗೆ ಬರುತ್ತಿದ್ದುದನ್ನು ಅವರು ಮುಂದೆ ಸ್ಮರಿಸಿಕೊಂಡಿದ್ದಾರೆ.

ನವೆಂಬರ್ - ಡಿಸೆಂಬರ್ ತಿಂಗಳುಗಳಲ್ಲಿ ಬರುವ ದೀಪಂ ಉತ್ಸವ, ತಿರುವಣ್ಣಾಮಲೆಯಲ್ಲಿ ಸುಪ್ರಸಿದ್ಧ. ಸಾವಿರಾರು ಮಂದಿ ಈ ಕಾರ್ತಿಕಮಾಸದ ದೀಪದರ್ಶನಕ್ಕೆ ಬಂದು ಸೇರುತ್ತಾರೆ. 1896ರ ಉತ್ಸವಕ್ಕೆ ಬಂದವರಲ್ಲಿ ಉದ್ದಂಡಿ ನಾಯನಾರ್ ಎಂಬ ಸದ್ಭಕ್ತರೂ ಒಬ್ಬರು. ಸಮೀಪದ ತಿರುವಣಿ ಅವರ ಊರು. ಬಂಡಿ ಓಡಿಸುತ್ತಾ ಜೀವನ ಸಾಗಿಸುತ್ತಿದ್ದ ಗಟ್ಟಿಮುಟ್ಟಾದ ಆಳು. ಜ್ಞಾನವಾಶಿಷ್ಠಂ ಹಾಗೂ ಕೈವಲ್ಯ ನವನೀತಂ ಎಂಬ ತಮಿಳು ಗ್ರಂಥಗಳಲ್ಲಿ ಅವರ ಒಲವು ಅಪಾರ. ರಮಣರ ತೀವ್ರವೈರಾಗ್ಯದಿಂದ ಆಕರ್ಷಿತರಾಗಿ ಉದ್ದಂಡಿನಾಯನರ್ ಅವರ ಸೇವೆಯಲ್ಲಿ ತೊಡಗಿದರು. ಆದರೂ ಹೊಟ್ಟೆಪಾಡಿಗಾಗಿ ಅವರು ಬಹುಕಾಲ

ಬಾಲಕನಿಂದ ದೂರವೇ ಇರಬೇಕಿತ್ತು. ಅಂಥ ಸಮಯವನ್ನು ಸಾಧಿಸಿ ಬಹಳ ಬಾಲಕರು ರಮಣರಿಗೆ ನಾನಾ ಬಗೆಯ ಉಪದ್ರವ ಕೊಡುತ್ತಿದ್ದರು. ಒಮ್ಮೆ ಅವರು ಹಿಪ್ಪೆಮರದ ಕೆಳಗೆ ಸಮಾಧಿಯಲ್ಲಿ ಕುಳಿತಿದ್ದಾಗ ಅವರ ಮೈಮೇಲೆಲ್ಲ ಒಬ್ಬ ತುಂಟ ಬಾಲಕ ಮೂತ್ರ ಮಾಡಿಬಿಟ್ಟನಂತೆ. ಆದರೂ ರಮಣರಿಗೆ ಅದರ ಅರಿವೇ ಇರಲಿಲ್ಲ, ಎಚ್ಚರಗೊಂಡಾಗಲೂ ಯಾವ ಬೇಸರವೂ ಆಗಲಿಲ್ಲ.

ಇಂತಹ ಸಂದರ್ಭಗಳಿಂದ ರಮಣರನ್ನು ರಕ್ಷಿಸಲೋ ಎಂಬಂತೆ ಅಣ್ಣಾಮಲೆ ತಂಬಿರಾನ್ ಎಂಬ ಸದ್ಭಕ್ತರು ಅಲ್ಲಿಗೆ ಬಂದರು. ಉದ್ದಂಡಿನಾಯಾರ್ ಹಾಗೂ ಅವರು ತುಂಬ ಸುರಕ್ಷಿತವೆನಿಸಿದ್ದ ಗುರುಮೂರ್ತಂ ಎಂಬ ದೇವಾಲಯಕ್ಕೆ ಕರೆದುಕೊಂಡು ಹೋಗಿ ಉಪಚರಿಸಿದರು. ಆದರೆ ರಮಣರ ವಿರಕ್ತಿ ಊಹಾತೀತವಾಗಿತ್ತು. ಸ್ನಾನವಾಗಲಿ, ಮುಖ ತೊಳೆಯುವದಾಗಲಿ ಮಾಡದೆಯೇ ದಿನಗಳು ಉರುಳುತ್ತಿದ್ದವು. ಕೂದಲು ಒರಟಾಗಿ ಜಡೆಗಟ್ಟಿ ಹೋಯಿತು. ಉಗುರುಗಳು ಉದ್ದವಾಗಿ ಬೆಳೆದವು. ಕೈಗಳು ನಿಷ್ಕ್ರಿಯವಾದವು. ಯಾರಾದರೂ ಆಹಾರಪದಾರ್ಥವನ್ನು ಹಿಡಿದು ನಿಂತರೆ ಹೇಗೋ ಕೈಚಾಚಿ ಅದನ್ನು ಹಿಡಿಯುತ್ತಿದ್ದರು. ಅದು ಏನೇ ಆಗಿರಲಿ ತಿಂದು, ತಲೆಗೆ ಕೈ ಒರಸಿಕೊಂಡು ಬಿಡುತ್ತಿದ್ದರು. ತಕ್ಷಣ ಸಮಾಧಿಯಲ್ಲಿ ಮುಳುಗಿಬಿಡುತ್ತಿದ್ದರು. ಹತ್ತಾರು ಕುತೂಹಲಗಳು ಬಂದು ತಾವು ತಂದದ್ದನ್ನು ತಿನ್ನಬೇಕೆಂದು ಬಯಸಿದರೆ ಯಾರೋ ಅದೆಲ್ಲವನ್ನೂ ಒಂದು ಪಾತ್ರೆ ನೀರಿನಲ್ಲಿ ಕದಡಿ ಬಾಲಕನಿಗೆ ಕುಡಿಸಿಬಿಡುತ್ತಿದ್ದರು. ಉಪ್ಪೋ, ಸಿಹಿಯೋ, ಕಾರವೋ ಯಾವದನ್ನೂ ಗಮನಿಸದೇ ಆ ದ್ರವವನ್ನು ಗಂಜಿಯಂತೆ ಸೇವಿಸಿ, ಧ್ಯಾನದಲ್ಲಿ ಮುಳುಗಿಬಿಡುತ್ತಿದ್ದರು. ಅವರ ಈ ವಿರಕ್ತಿ, ಬೆಳೆದ ಉಗುರುಗಳು, ಜಟೆ ಜೀರ್ಣಶರೀರವನ್ನು ಕಂಡವರು ಇವರು ಸಾಕಷ್ಟು ವೃದ್ಧರಿರಬೇಕು, ತಪಸ್ಸಿನಿಂದ ಹೀಗಾಗಿದ್ದಾರೆ ಎಂದುಕೊಂಡರು. ಬಾಲಕಸ್ವಾಮಿಯಲ್ಲಿ ಅವರ ಭಕ್ತಿ ಅಧಿಕ ವಾಯಿತು. ಸ್ವತಃ ತಂಬಿರಾನ್ ಅವರಲ್ಲಿ ಈ ಭಕ್ತಿ ಅತಿರೇಕಕ್ಕೇ ಹೋಯಿತು. ಒಂದು ದಿನ ಅವರು ಸ್ವಾಮಿಗೆ ಅಭಿಷೇಕ ಮಾಡಲೆಳಿಸಿ ಅದಕ್ಕೆ ಬೇಕಾದ ಎಣ್ಣೆ ಗಂಧ, ನೀರು ಎಲ್ಲವನ್ನೂ ಸಿದ್ಧಪಡಿಸತೊಡಗಿದರು. ಇದನ್ನು ಗಮನಿಸಿದ ರಮಣರು ಒಂದು ಇದ್ದಲು ಚೂರನ್ನು ತೆಗೆದುಕೊಂಡು ತಿನ್ನುವ ಆಹಾರವೊಂದೇ ಈ ದೇಹಕ್ಕೆ ಬೇಕಾದ ಸೇವೆ ಎಂದು ಶುದ್ಧವಾದ ತಮಿಳಿನಲ್ಲಿ ಗೋಡೆಯ ಮೇಲೆ

ಬರೆದರು. ಈ ಬಾಲಕ ಸಾಕಷ್ಟು ವಿದ್ಯಾವಂತ ಎಂಬ ಸಂಗತಿ ಅದರಿಂದ ಜನಕ್ಕೆ ತಿಳಿಯಿತು. ಹಾಗೆ ತಿಳಿದವರಲ್ಲಿ ತಾಲ್ಲೂಕು ಕಛೇರಿಯ ಮುಖ್ಯ ಗುಮಾಸ್ತ ವೆಂಕಟರಾಮ ಅಯ್ಯರ್ ಒಬ್ಬರು. ಬಾಲಕನ ಬಗೆಗೆ ಮತ್ತಷ್ಟು ವಿವರಗಳನ್ನು ತಿಳಿಯುವ ಬಯಕೆಯಿಂದ ಮತ್ತೆ ಮತ್ತೆ ಅವರು ಗುರುಮೂರ್ತಂಗೆ ಬಂದು ಒತ್ತಾಯಿಸುತ್ತಿದ್ದುದಲ್ಲದೆ ಒಮ್ಮೆ ಉಪವಾಸಸತ್ಯಾಗ್ರಹ ಹೂಡಿಬಿಟ್ಟರು. ಅವರ ಮೇಲಿನ ಅನುಕಂಪದಿಂದ ರಮಣರು ಗೋಡೆಯ ಮೇಲೆ "ವೆಂಕಟರಾಮನ್, ತಿರುಚುಳಿ" ಎಂದು ಬರೆದರು. ಆ ಊರಿನ ಹೆಸರು ಕೇಳಿಯೂ ತಿಳಿಯದ ಅಯ್ಯರ್ ಅವರಿಗೆ ಪೆರಿಯ ಪುರಾಣದ ಭೂಮಿನಾಥ ಕ್ಷೇತ್ರ ಹಾಗೂ ಅಲ್ಲಿಗೆ ಬಂದಿದ್ದ ಸುಂದರಮೂರ್ತಿ ಸಂತರ ಪ್ರಸಂಗವನ್ನು ತೋರಿಸಿದರು. ಇನ್ನು ತಾನು ಅಲ್ಲಿರುವದು ತಾಯಿಗೂ-ಸೋದರರಿಗೂ ಅವರ ಕಳವಳ ಕಡಿಮೆಯಾಗಲಿ ಎಂಬ ಕರುಣೆಯೂ ಅದಕ್ಕೆ ಕಾರಣವಿರಬಹುದು.

ಗುರುಮೂರ್ತಂನಲ್ಲಿ ರಮಣರು ನೆಲೆಸಿ ನಂತರ 1917ರಲ್ಲಿ ಅವರು ಸ್ಕಂದಾಶ್ರಮದಲ್ಲಿ ವಾಸಿಸಲು ತೊಡಗುವವರೆಗೂ ಪಳನಿಸ್ವಾಮಿ ಅವರ ಸಾಮೀಪ್ಯದಲ್ಲಿದ್ದು ಕೆಲವೊಮ್ಮೆ ಅವರಿಗಾಗಿ ಭಿಕ್ಷೆ ನೀಡಿ ತಂದು ತನಗೂ ಸ್ವಾಮಿಗಳಿಗೂ ಅಡಿಗೆ ಮಾಡುತ್ತಿದ್ದುದೂ ಉಂಟು. ಬಹಳ ಎಚ್ಚರದಿಂದ ರಮಣ ದೇಹವನ್ನು ರಕ್ಷಿಸಿಕೊಂಡಿದ್ದರು. ಸ್ವಾಮಿಯಂತೂ ಆತ್ಮನ ಆನಂದದಲ್ಲಿ ಮುಳುಗಿಬಿಟ್ಟಿದ್ದರು. ಪಳನಿಸ್ವಾಮಿ ಕೇರಳ ಪ್ರಾಂತ್ಯದವರು. ಗಣಪತಿ ಉಪಾಸಕ. ಒಮ್ಮೆ ಅವರು ಹಾಗೆ ಗಣಪತಿ ವಿಗ್ರಹದ ಮುಂದೆ ಕುಳಿತಿದ್ದಾಗ, ಶ್ರೀನಿವಾಸಅಯ್ಯರ್ ಎಂಬವರು "ಈ ಕಲ್ಲು ವಿಗ್ರಹವನ್ನು ಅದೆಷ್ಟು ಪೂಜೆಮಾಡುತ್ತಿ? ಅಗೋ ಅಲ್ಲಿ ಒಬ್ಬರು ಜೀವಂತಸ್ವಾಮಿ ಬಾಲಕ ಧ್ರುವನಂತೆ ತಪಸ್ಸಿಗೆ ತೊಡಗಿದ್ದಾನೆ. ಅವನ ಸೇವೆ ಮಾಡು ಹೋಗು" ಎಂದರಂತೆ. ಅಲ್ಲಿಗೆ ಧಾವಿಸಿಬಂದ ಪಳನಿಗೆ, ರಮಣರೇ, ತನ್ನ ಗುರು ಎನಿಸಿಬಿಟ್ಟಿತು. ತಮ್ಮ ಬದುಕಿನ ಕೊನೆಯ ಕ್ಷಣದವರೆಗೂ ತನ್ಮಯತೆಯಿಂದ ಗುರುಸೇವೆಯಲ್ಲಿ ನಿಂತುಬಿಟ್ಟರು. ತಮ್ಮ ಬದುಕನ್ನು ಯಾವದೋ ಮಹಾಶಕ್ತಿಯೇ ಅಡಿಗಡಿಗೆ ರೂಪಿಸಿ ನಡೆಸುತ್ತಿದೆ ಎಂದು ರಮಣರು ಹೇಳುತ್ತಿದ್ದುದು ಸತ್ಯವೇ ಆಗಿತ್ತು.

ರಮಣರು ಮಧುರೆಯನ್ನು ತೊರೆದು ಅರುಣಾಚಲಕ್ಕೆ ಬಂದು ಎರಡು

ವರ್ಷಗಳೇ ಉರುಳಿದವು. ಅವರನ್ನು ಹುಡುಕಲು ಬಂಧುಗಳು ಮಾಡಿದ ಎಲ್ಲ ಪ್ರಯತ್ನಗಳೂ ವಿಫಲವಾಗಿದ್ದವು. ತಾಯಿ ಅಳಗಮ್ಮಾಳ್‌ರ ವ್ಯಥೆಗೆ ಪಾರವೇ ಇರಲಿಲ್ಲ. ಸಾಲದುದಕ್ಕೆ 1898ರ ಮೇ ಒಂದನೇ ದಿನಾಂಕ ರಮಣರ ಚಿಕ್ಕಪ್ಪ ಸುಬ್ಬಯ್ಯರ್ ವಿಧಿವಶರಾದರು. ಅವರ ಅಂತ್ಯಕರ್ಮದ ಸಂದರ್ಭದಲ್ಲಿ ಮಧುರೆಗೆ ಬಂದಿದ್ದ ತಿರುಚುಳಿಯ ಒಬ್ಬ ತರುಣನಿಂದ "ನಮ್ಮ ವೆಂಕಟರಾಮನ್ ಈಗ ಗೌರವಾನಿತ್ವ ಸಾಧುವಾಗಿ ತಿರುವಣ್ಣಾಮಲೆಯಲ್ಲಿದ್ದುಬಿಟ್ಟಿದ್ದಾನೆ" ಎಂಬ ಸಂತಸದ ಸುದ್ದಿ ಬಂಧುಗಳಿಗೆ ತಿಳಿಯಿತು. ಯಾವದೋ ಒಂದು ಮಠದಲ್ಲಿ ಅಣ್ಣಾಮಲೈತಂಬಿರಾನ್ ಎಂಬುವರು ಈ ಸುದ್ದಿಯನ್ನು ಅಚ್ಚರಿಯಿಂದ ವಿವರಿಸಿ ಹೇಳುತ್ತಿದ್ದುದನ್ನು ಈ ತರುಣ ಕೇಳಿದ್ದನಂತೆ. ಅದನ್ನು ಹೇಳಲೆಂದೇ ತರಾತುರಿಯಾಗಿ ಮಧುರೆಗೆ ಬಂದನಂತೆ.

ಗುರುಮೂರ್ತಂನಲ್ಲಿ ಜನಜಂಗುಳಿ ಹೆಚ್ಚಾದುದರಿಂದ ಸಮೀಪದ ಮಾವಿನಮರದ ತೋಪಿನಲ್ಲಿ ರಮಣರು ಇರುತ್ತಿದ್ದರು. ರಾಮನಾಯಕರ್ ಎಂಬ ಸೇವಕ ತೋಟದ ಯಜಮಾನರ ಅಪ್ಪಣೆಯಂತೆ ಯಾರನ್ನೂ ಒಳಗೆ ಬಿಡದಂತೆ ಕಾಯುತ್ತಿದ್ದ. ಮಧುರೆಯಲ್ಲಿ ಸುದ್ದಿ ತಿಳಿದ ಚಿಕ್ಕಪ್ಪನೆಲ್ಲಿಯಪ್ಪರ್ ಹೇಗೋ ಅವನನ್ನು ಒಪ್ಪಿಸಿ ರಮಣರ ಬಳಿಗೆ ಬಂದರು. ಬೇವಿನಕಡ್ಡಿಯನ್ನು ಸೀಟಿ ಗಿಡದ ಕೆಂಪುರಸದಲ್ಲಿ ಅದ್ದಿ ಒಂದು ಚೀಟಿಯ ಮೇಲೆ ತಾವು ಬಂದ ಸುದ್ದಿಯನ್ನು ಬರೆದು ತಿಳಿಸಿದರು. ಧೂಳು ತುಂಬಿದ ಮೈ, ಜಡೆಗಟ್ಟಿದ ಕೂದಲಿನ, ಕೌಪೀನಧಾರಿ ಬಾಲಕನನ್ನು ಕಂಡು ಅವರು ಹೌಹಾರಿದರು. ಅವರ ಬಲಪಾದದ ಮೇಲಿನ ಕೆಂಪು ಮಚ್ಚೆಯಿಂದ ಮಾತ್ರ ತಮ್ಮ ಅಣ್ಣನ ಮಗ ವೆಂಕಟರಾಮನ್ ಎಂದು ಗುರುತುಹಿಡಿಯಲು ಸಾಧ್ಯವಾಯಿತು. ಮನೆಗೆ ಹಿಂತಿರುಗುವಂತೆ ಬಗೆಬಗೆಯಾಗಿ ವಾದಮಾಡಿದರು. (ಅವರೂ ಒಬ್ಬ ವಕೀಲರೇ!) ಅಲ್ಲಿಯೇ ತಪಸ್ಸನ್ನು ಮುಂದುವರೆಸಬಹುದು, ಯಾರೂ ಅಡ್ಡಿಬರದಂತೆ ಎಲ್ಲ ವ್ಯವಸ್ಥೆ ಮಾಡಲಾಗುವದು ಎಂದು ಪುಸಲಾಯಿಸಿದರು. ಆದರೆ ರಮಣರು ಬಂಡೆಯಂತೆ ಅವಿಚಲರಾಗಿ, ಅಚಲರಾಗಿ ಇದ್ದುಬಿಟ್ಟರು. ಮಗ ಮನೆಗೆ ಬರುವಂತಿಲ್ಲ ಎಂಬ ಸುದ್ದಿಯನ್ನು ಆಗಲೇ ಪತಿಯನ್ನೂ ಮೈದುನನನ್ನೂ ಕಳೆದುಕೊಂಡು ದುಃಖಿತಳಾದ ತಾಯಿಗೆ ಹೇಗೆ ತಿಳಿಸುವದು ಎಂಬ

ಚಿಂತೆಯಿಂದಲೇ ನೆಲ್ಲಿಯಪ್ಪಯ್ಯರ್ ಹಿಂತಿರುಗಿದರು. "ಮತ್ತೊಬ್ಬ ಚಿಕ್ಕಪ್ಪ ಸುಬ್ಬಯ್ಯರ್ ಆಗಿದ್ದರೆ ಬಲವಂತವಾಗಿಯಾದರೂ ತನ್ನನ್ನು ಕರೆದೊಯ್ಯುತ್ತಿದ್ದರು. ಅವರು ಅಂತಹ ಸ್ವಾಭಿಮಾನಿ ಗಟ್ಟಿಮನುಷ್ಯ. ನಾನು ಅರುಣಾಚಲದಲ್ಲೇ ನೆಲೆಸಬೇಕೆಂಬುದು ದೈವಚಿತ್ತವಾದುದರಿಂದಲೇ ಅವರು ಬದುಕಿರುವವರೆಗೂ ನನ್ನ ಸುದ್ದಿ ಯಾರಿಗೂ ತಿಳಿಯಲೇ ಇಲ್ಲ." ಎಂದು ಮುಂದೆ ರಮಣರು ಹೇಳಿದರು. ಕೆಲವೇ ದಿನಗಳಲ್ಲಿ ಈ ನೆಲ್ಲಿಯಪ್ಪಯ್ಯರ್ ಸಹಾ ತೀರಿಹೋದರು.

## 6. ಮಗೂ ಮನೆಗೆ ಬಾರೋ !

ತಾನೇ ಮಗನ್ನು ಕರೆತರುತ್ತೇನೆ ಎಂದು ಅಳಗಮ್ಮಾಳ್, ಹಿರಿಯ ಮಗ ನಾಗಸ್ವಾಮಿಯನ್ನು ಕರೆದುಕೊಂಡು ತಿರುವಣ್ಣಾಮಲೆಗೆ ಬಂದರು. ಆ ವೇಳೆಗೆ ಮಾವಿನ ತೋಪಿನಿಂದ, ರಮಣರು ಪವಳಕುನ್ರು ಎಂಬ ಪುಟ್ಟಗುಡ್ಡದ ಮೇಲಿನ ದೇವಾಲಯಕ್ಕೆ ಬಂದುಬಿಟ್ಟಿದ್ದರು. ಆಯಾಸವನ್ನು ಲೆಕ್ಕಿಸದೇ ತಾಯಿ ಆ ಗುಡ್ಡಹತ್ತಿ ಮಗನ ಬಳಿಗೆ ಬಂದರು. ಇಪ್ಪತ್ತೆಂಟು ತಿಂಗಳುಗಳ ನಂತರ ಇಂತಹ ಸ್ಥಿತಿಯಲ್ಲಿ ಮುದ್ದುಮಗನನ್ನು ಕಂಡು ಆಕೆಯ ಕಂಬನಿ ಉಕ್ಕಿಹರಿಯಿತು. ಸುತ್ತ ಇದ್ದವರನ್ನೆಲ್ಲ ಗೋಗರೆಯುತ್ತಾ ಹೇಗಾದರೂ ಮಗನನ್ನು ಒಪ್ಪಿಸಿ ತನ್ನೊಡನೆ ಕಳುಹಿಸಿಬಿಡಿ ಎಂದು ಅಂಗಲಾಚುತ್ತಾ ತಾಯಿ ರೋದಿಸಿದರು. ಆದರೆ ಮೌನವಾಗಿ, ಅಚಲವಾಗಿ ಮಗ ಕುಳಿತುಬಿಟ್ಟಿದ್ದ. ಮನಸ್ಸು ಕರಗಿದ ಉಚ್ಚೈಯಪ್ಪ ಪಿಳ್ಳೈ ಎಂಬ ಸಜ್ಜನರು ರಮಣರನ್ನು ಕುರಿತು : "ಅಮ್ಮ ಅಷ್ಟು ಅಳುತ್ತಿದ್ದಾರೆ. ಉಂಟು-ಇಲ್ಲ ಎಂದಾದರೂ ಹೇಳು ಸ್ವಾಮಿ. ಮೌನ ಮುರಿಯೋದು ಬೇಡ ಎನಿಸಿದರೆ, ಇಗೋ ಈ ಚೀಟಿಯ ಮೇಲೆ ಈ ಪೆನ್ನಿನಲ್ಲಿ ಬರೆದಾದರೂ ತಿಳಿಸು" ಎಂದರು. ಆಗ ಯಾವ ಉದ್ವೇಗವೂ ಇಲ್ಲದೆ, ಶಾಂತಚಿತ್ತದಿಂದಲೇ ರಮಣರು ಬರೆದರು : "ಸರ್ವವ್ಯಾಪಿಯಾಗಿರುವ ಸೃಷ್ಟಿಕರ್ತನು, ಪ್ರತಿಯೊಬ್ಬನೂ ಅವನವನ ಪೂರ್ವಕರ್ಮಕ್ಕೆ ಅನುಸಾರವಾಗಿ, ಜೀವನದಲ್ಲಿ ತನ್ನ ಪಾತ್ರವನ್ನು ನಿರ್ವಹಿಸುವಂತೆ ಮಾಡುತ್ತಾನೆ. ಏನು ಆಗಬಾರದು ಎಂಬ ವಿಧಿಯಿದೆಯೋ ಅದು, ಏನೇ ಪ್ರಯತ್ನಮಾಡಿದರೂ ಆಗುವದಿಲ್ಲ. ಯಾವದು ಆಗಬೇಕೆಂದಿದೆಯೋ ಅದು ಆಗಿಯೇ ತೀರುತ್ತದೆ

ಇದು ನಿಶ್ಚಯ. ಆದುದರಿಂದ ಅತ್ಯುತ್ತಮಮಾರ್ಗವೆಂದರೆ ಮೌನವಾಗಿ ಸುಮ್ಮನೆ ಇದ್ದುಬಿಡುವದು."

ಈ ಲಿಖಿತ ಸಂದೇಶವೇ ರಮಣರ ಪ್ರಥಮ ಉಪದೇಶ. ಅದು ದೊರೆತದ್ದು ಅವರ ತಾಯಿಗೆ, ಎಂದು ಭಾವಿಸಲಾಗಿದೆ (ಕಪಿಲ ಮಹರ್ಷಿಗಳು ತಮ್ಮ ತಾಯಿ ದೇವಹೂತಿಗೇ ತತ್ತ್ವಬೋಧೆ ಮಾಡಿದಂತೆ). ಅತ್ಯಂತ ಅರ್ಥಗರ್ಭಿತವಾದ ಈ ಸಂದೇಶ ಸಂದರ್ಭೋಚಿತವೂ ಆಗಿದೆ. ಸಾರ್ವಕಾಲಿಕವೂ ಆಗಿದೆ. ತಾಯಿ ಬಂದದ್ದು ತನ್ನನ್ನು ಕರೆದೊಯ್ಯಲು. ವೆಂಕಟರಮಣ ಅರುಣಾಚಲಕ್ಕೆ ಬಂದದ್ದು ಅರುಣಾಚಲನ ಅದಮ್ಯ ಕರೆಗೆ ತಲೆಬಾಗಿ. ಇನ್ನು ಹಿಂದಡಿಯಿಡುವಂತೆಯೇ ಇಲ್ಲ, ಲೌಕಿಕಜಗತ್ತಿನ ಬದುಕು ಇನ್ನು ಇಲ್ಲ, ತಾಯಿ ಇದನ್ನು ಅರಿತು ಒಪ್ಪಿಕೊಳ್ಳುವದು ಅನಿವಾರ್ಯ. ಇದು ರಮಣರ ಕಾಠಿಣ್ಯವಲ್ಲ. ಮುಂದೆ ತಾಯಿ ಎಲ್ಲ ಬಂಧುಗಳನ್ನೂ ಹಿರಿಯ ಮಗನನ್ನೂ ಕಳೆದುಕೊಂಡು "ಅನ್ಯಥಾ ಶರಣಂ ನಾಸ್ತಿ" ಎಂದು ಬಂದಾಗ, ಅವರಂತೆ ಮಾತೃಸೇವೆಯನ್ನು ಮಾಡಿದವರಾರು? ಆಕೆ ಟೈಫಾಯ್ಡ್‌ಜ್ವರದಿಂದ ಬಳಲುತ್ತಿದ್ದಾಗ ಆಕೆಗಾಗಿ ಉತ್ಕಟವಾದ ಪ್ರಾರ್ಥನೆ ಸಲ್ಲಿಸಿದರು. ಕಡೆಯ ವರ್ಷಗಳನ್ನು (1916-22) ಕಳೆದರು. ಅಜ್ಞಾನನಿವಾರಣೆ ಮಾಡಿದರು. ಪೂರ್ವವಾಸನೆಗಳೆಲ್ಲವನ್ನೂ ಅಡಗಿಸಿ ಆಕೆಗೆ ಆತ್ಮಸಾಕ್ಷಾತ್ಕಾರವನ್ನು ಅನುಗ್ರಹಿಸಿದರು. ಮುಕ್ತಳಾದ ಆಕೆಯ ದೇಹವನ್ನು ದಹಿಸಬೇಕಿಲ್ಲವೆಂದೂ ಸಮಾಧಿಯನ್ನೇ ಮಾಡಬೇಕೆಂದೂ ಸೂಚಿಸಿದರು. ಅಂತಹ ಪದ್ಧತಿ ಸ್ತ್ರೀಯರ ವಿಷಯದಲ್ಲಿ ಸಲ್ಲದು ಎಂಬ ಸಂಪ್ರದಾಯವನ್ನೂ ಮೀರಿ, ಆತ್ಮಜ್ಞಾನಿಯಲ್ಲಿ ಲಿಂಗಭೇದ ಸಲ್ಲದು ಎಂದು ಘೋಷಿಸಿದರು. "ಮಾತೃಭೂತೇಶ್ವರಲಿಂಗವನ್ನು ಆಕೆಯ ಸಮಾಧಿಯ ಮೇಲೆ ಪ್ರತಿಷ್ಠಾಪಿಸಿ" ನಿತ್ಯನಮನ ಸಲ್ಲಿಸಿದರು. "ನನ್ನ ದೇಹವನ್ನು ಈ ಬೆಟ್ಟದ ಮುಳ್ಳು ಪೊದೆಗಳಲ್ಲಿ ಎಸೆದರೂ ಸರಿಯೇ, ನಾನು ನಿನ್ನ ತೋಳುಗಳಲ್ಲಿ ಸಾಯಬೇಕು" ಎಂಬ ಉತ್ಕಟ ಬಯಕೆ ತಾಯಿಯದು. ಅರುಣಾಚಲದಲ್ಲಿ ರಮಣರ ಸನ್ನಿಧಿಯಲ್ಲಿ ಆಕೆ ವಿನೀತಭಕ್ತೆಯಂತೆ ಇದ್ದುಬಿಟ್ಟರು. ಅಲ್ಲಿಂದ ಬೇರೆಲ್ಲಿಗೂ ಹಿಂತಿರುಗಲಿಲ್ಲ. ಮಗಳು ಅಲಮೇಲುವಿನ ನೂತನ ಗೃಹಪ್ರವೇಶಕ್ಕೆ ಹೋಗಲೂ ಒಲ್ಲೆ ಎಂಬ ನಿಷ್ಠೆ ಆಕೆಯದು. 19, ಮೇ 1922ರಲ್ಲಿ ಕೊನೆಯುಸಿರೆಳೆದ ಆಕೆಗಾಗಿ ಅರುಣಾಚಲದ ದಕ್ಷಿಣದ ತಪ್ಪಲಿನಲ್ಲಿ ಸಮಾಧಿ - ನಂತರ ದೇವಾಲಯ ನಿರ್ಮಾಣವಾಯಿತು. ಮುಂದೆ ಚಾಡವಿಕ್ ಎಂಬ ಭಕ್ತರ

ಕೋರಿಕೆ ಹಾಗೂ ನೆರವಿನಿಂದ (ಸಾಧು ಅರುಣಾಚಲ ಎಂದು ಚಾಡ್‌ವಿಕ್ ಪ್ರಸಿದ್ಧರು) ಶ್ರೀ ಚಕ್ರ ಸ್ಥಾಪನೆ, ಲಲಿತಾಸಹಸ್ರನಾಮಾರ್ಚನೆ, ಅಭಿಷೇಕದ ವ್ಯವಸ್ಥೆಯೂ ಆಗಿ ಅದು ಇಂದಿಗೂ ಸಹಸ್ರಾರು ಭಕ್ತರನ್ನು ಅನುಗ್ರಹಿಸುವ ಅನ್ನಪೂರ್ಣಾಕ್ಷೇತ್ರವೆನಿಸಿದೆ.

## 7. ಇಳಿದು ಬಂದ ಲೋಕಕಾರುಣ್ಯ

ಈ ವಿಶಿಷ್ಟಸಂದರ್ಭದಲ್ಲಿ ರಮಣಮಹರ್ಷಿಗಳು ಬೆಟ್ಟದ ಮೇಲಿನ ಸ್ಕಂದಾಶ್ರಮದಿಂದ ದಕ್ಷಿಣದ ತಪ್ಪಲಿಗೆ ಇಳಿದುಬಂದರು. ಭಕ್ತರ ನಿರಂತರ ಪ್ರಾರ್ಥನೆಯನ್ನು ಅನುಗ್ರಹಿಸಲು ಅಲ್ಲಿಯೇ ನೆಲೆನಿಂತರು. ಅವರ ಸುತ್ತ ರಮಣಾಶ್ರಮ ಬೆಳೆಯಿತು. ಆರಂಭದಲ್ಲಿ ಕೇವಲ ಕುಟೀರವಾದದ್ದು ಈಗ ಪವಾಡಸದೃಶವಾಗಿ ಬೃಹದಾಕಾರದಲ್ಲಿ ಬೆಳೆದು ದೇಶವಿದೇಶಗಳಿಂದ ಭಕ್ತರನ್ನು ಆಕರ್ಷಿಸುವ ಆಶ್ರಯಧಾಮವಾಗಿದೆ. ಪುರಾಣಪ್ರಸಿದ್ಧವಾಗಿದ್ದ ಅರುಣಾಚಲ ವರ್ತಮಾನದಲ್ಲೂ ಸಿದ್ಧಕ್ಷೇತ್ರವೆನಿಸಿದೆ. ಹೀಗೆ ಪರ್ವತದ ತಪ್ಪಲಿನಲ್ಲಿ ನೆಲೆಸುವ ಪೂರ್ವದಲ್ಲಿ ಪರ್ವತದ ಮಧ್ಯದಲ್ಲಿನ ವಿರೂಪಾಕ್ಷಗುಹೆಯಲ್ಲಿ ಹದಿನೇಳು ವರ್ಷಗಳು, ನಂತರ ಇನ್ನೂ ಎತ್ತರದ ಸ್ಕಂದಾಶ್ರಮದಲ್ಲಿ ಆರು ವರ್ಷಗಳು ಭಕ್ತರನ್ನು ಅನುಗ್ರಹಿಸುತ್ತಾ ಇದ್ದರು. ಅವರ ಅಧ್ಯಾತ್ಮಜೀವನದ ಮಹತ್ತರ ಘಟನೆಗಳು ನಡೆದದ್ದು ಅವರು ವಿರೂಪಾಕ್ಷಗುಹೆಯಲ್ಲಿದ್ದ ಕಾಲದಲ್ಲಿಯೇ (1899-1922). ಬ್ರಾಹ್ಮಣಸ್ವಾಮಿ ಎಂದು ಕರೆಯಲ್ಪಡುತ್ತಿದ್ದ ತಿರುಚುಳಿಯ ವೆಂಕಟರಮಣ ಎಂಬ ಈ ಬ್ರಹ್ಮನಿಷ್ಠ ಜ್ಞಾನಿಯನ್ನು ಭಗವಾನ್ ರಮಣಮಹರ್ಷಿ ಎಂದು ಕಾವ್ಯಕಂಠಮುನಿ ಗಣಪತಿಶಾಸ್ತ್ರಿಗಳು ಜಗತ್ತಿಗೆ ಘೋಷಿಸಿ ಶರಣಾದದ್ದು ಅಲ್ಲಿಯೇ. ಗಂಭೀರಂ ಶೇಷಯ್ಯರ್, ಶಿವಶಂಕರಂ ಪಿಳ್ಳೆ, ಎಫ್.ಹೆಚ್. ಹಂಫ್ರಿಸ್, ಮುಂತಾದ ಅಧ್ಯಾತ್ಮಜೀವಿಗಳನ್ನು ಅನುಗ್ರಹಿಸಿದ್ದು, ತಾಯಿ ಅಳಗಮ್ಮಾಳ್ ಅವರ ಆಶ್ರಯಕ್ಕೆ ಬಂದದ್ದು ಅಲ್ಲಿಯೇ ಅಕ್ಷರಮಣಮಾಲೈ, ಅರುಣಾಚಲಪಂಚರತ್ನಂ, ಪ್ರದೇಶಉಂದಿಯಾರ್, ನಾನ್ ಯಾರ್-ಮುಂತಾದ ಕೃತಿಗಳಿಗೆ ಪ್ರೇರಣೆ ಒದಗಿದುದೂ ವಿರೂಪಾಕ್ಷಗುಹೆಯಲ್ಲಿ ರಮಣರು ಇದ್ದಕಾಲದಲ್ಲಿಯೇ.

ವಿರೂಪಾಕ್ಷಗುಹೆಯ ಅರುಣಾಚಲ ಹೃದಯವಾಸಿಗಳನ್ನು ರಕ್ಷಿಸುವ ತಾಯಿ

ಎಂದು ರಮಣರು ಕರೆದಿದ್ದಾರೆ. ಪರ್ವತದ ಪೂರ್ವದ ಇಳಿಜಾರಿನಲ್ಲಿರುವ ಈ ಗುಹೆಗೆ ರಮಣರು ಬಂದಾಗ, ಇವರು 20 ವರ್ಷದ ತರುಣ. ಓಂಕಾರದ ಆಕೃತಿಯನ್ನು ಹೋಲುವ ಈ ಗುಹೆಯ ಆಧ್ಯಾತ್ಮಿಕಮಹತ್ವವನ್ನು ಅವರು ನೋಡುತ್ತಿದ್ದಂತೆ ಗುರುತಿಸಿದರು. ಕರ್ನಾಟಕದ ಶೈವಸಂತ ವಿರೂಪಾಕ್ಷ ಹದಿಮೂರನೆಯ ಶತಮಾನದಲ್ಲಿ ಅಲ್ಲಿಗೆ ಬಂದು ತಪಸ್ಸಿಗೆ ಕುಳಿತನಂತೆ. ಅವನು ಸಮಾಧಿಯಾದ ಸ್ಥಳವೂ ಆ ಗುಹೆಯೇ. ರಮಣರು ಅಲ್ಲಿಗೆ ಬಂದಾಗ ಅದು ದಟ್ಟವಾದ ಕಾಡೇ ಆಗಿ ಹುಲಿಕರಡಿಗಳ ಆವಾಸವೇ ಆಗಿತ್ತು. ಸಮೀಪದ ಕೊಳದಲ್ಲಿ ನೀರುಕುಡಿದು ಹಾವು ಆಟವಾಡುತ್ತಿದ್ದರೆ, ಯಾವ ಭಯವೂ ಇಲ್ಲದೆ ರಮಣರು ಸ್ನೇಹದಿಂದಲೇ ಅವುಗಳೊಡನೆ ಇರುತ್ತಿದ್ದರು. 'ಅಭಯಂ ಸರ್ವಭೂತೇಭ್ಯಃ' ಎಂಬ ಸಂನ್ಯಾಸಧರ್ಮ ಅವರಿಗೆ ಸಹಜವಾಗಿಬಿಟ್ಟಿತು. ದಕ್ಷಿಣಾಮೂರ್ತಿಯಂತೆ ಮೌನದಲ್ಲಿಯೇ ಮುಳುಗಿದ್ದ ಅವರ ಬಳಿಗೆ ತತ್ತ್ವಜಿಜ್ಞಾಸುಗಳು ಬಂದದ್ದು ಅವರು ವಿರೂಪಾಕ್ಷಗುಹೆಯಲ್ಲಿದ್ದ ಅಡಿಯಲ್ಲಿಯೇ. ಗಂಭೀರಂ ಶೇಷಯ್ಯರ್ ಅಂಥವರಲ್ಲಿ ಮೊದಲಿಗರು. ಪುರಸಭಾಕಛೇರಿಯಲ್ಲಿ ಅಧಿಕಾರಿಯಾಗಿದ್ದ ಅವರು ಸ್ವಾಮಿವಿವೇಕಾನಂದರ ಭಕ್ತರು. ರಾಮಗೀತೆ, ಯೋಗವಾಸಿಷ್ಠ- ಮುಂತಾದ ಆಧ್ಯಾತ್ಮಿಕಕೃತಿಗಳನ್ನು ಆಳವಾಗಿ ಅಭ್ಯಾಸಮಾಡಿದ್ದರು. ಈ ಕೃತಿಗಳ ಆಧಾರದ ಮೇಲೆಯೇ ಅವರ ಪ್ರಶ್ನೆಗಳಿಗೆ ಚುಟುಕುತ್ತರ ದೊರೆಯುತ್ತಿತ್ತು. ವಿಶೇಷವಾಗಿ ಆತ್ಮವಿಚಾರವನ್ನು ರಮಣರು ಒತ್ತಿ ಹೇಳುತ್ತಿದ್ದರು. ತಮ್ಮ ಪ್ರಶ್ನೆಗಳು ಹಾಗೂ ರಮಣರ ಉತ್ತರದ ಚೀಟಿಗಳನ್ನು ಅವರು ಸಂಗ್ರಹಿಸಿದ್ದು "ವಿಚಾರಸಂಗ್ರಹ" ಎಂಬ ಹೆಸರಿನಲ್ಲಿ ಅದು ಮುಂದೆ ಪ್ರಕಟವಾಯಿತು. ರಮಣಚಿಂತನದ ಪ್ರಥಮಪ್ರಕಟಿತ ಕೃತಿ- ಎಂಬ ಖ್ಯಾತಿ ಈ ಕಿರುಕೃತಿಗೆ ಇದೆ. ಮನಸ್ಸು- ಅದರ ಸ್ವರೂಪ-ಅಮನಸ್ಕಸ್ಥಿತಿ-ಆತ್ಮಪ್ರಕಾಶ- ಮುಂತಾದ ಮಹತ್ತ್ವದ ಚಿಂತನಗಳನ್ನು ಈ ಕೃತಿ ಒಳಗೊಂಡಿದೆ.

"ನಾನ್‌ಯಾರ್?" ಎಂಬುದು ರಮಣರ ಪ್ರಸಿದ್ಧವಾದ ಗದ್ಯಕೃತಿ. ಅತ್ಯಂತ ಸ್ಪಷ್ಟವಾದ ಆತ್ಮವಿಚಾರವಿವರಣೆ ಈ ಕೃತಿಯಲ್ಲಿದೆ. ಅದು ಹೊರಬರಲು ಕಾರಣರಾದವರು ಶಿವಪ್ರಕಾಶಂ ಪಿಳ್ಳೆ ಎಂಬ ಸದ್ಭಕ್ತರು. ತಮಿಳುನಾಡಿನ ಸುಪ್ರಸಿದ್ಧಕ್ಷೇತ್ರ ಚಿದಂಬರ್ ಅವರ ಜನ್ಮಕ್ಷೇತ್ರ. ಕಾಲೇಜಿನಲ್ಲಿ ಓದುತ್ತಿದ್ದ

ದಿನಗಳಿಂದಲೂ ಅವರಿಗೆ ಅಧ್ಯಾತ್ಮದ ಕುತೂಹಲ. ಪದವಿಪರೀಕ್ಷೆ ಮುಗಿಸಿ 1900ರಲ್ಲಿ ಅವರು ರೆವೆನ್ಯೂ ಇಲಾಖೆಯಲ್ಲಿ ಉದ್ಯೋಗಸ್ಥರಾದರು. ಬೆಟ್ಟದ ಮೇಲೆ ವಾಸವಿದ್ದ ಕೌಪೀನಧಾರಿ ವಿರಕ್ತಅವಧೂತನ ಬಗೆಗೆ ಕೇಳಿ ತಿಳಿದು ಕುತೂಹಲದಿಂದ 1902ರಲ್ಲಿ ಅವರನ್ನು ಹುಡುಕಿಕೊಂಡುಬಂದರು. ಸದಾ ತನ್ನನ್ನು ಕಾಡುತ್ತಿದ್ದ 'ನಾನು ಯಾರು?' ಎಂಬ ಪ್ರಶ್ನೆಯನ್ನೇ ನೇರವಾಗಿ ಮೊದಲಿಗೆ ಕೇಳಿದರು. ಮುಂದಿನ ದಿನಗಳಲ್ಲಿ ಹದಿಮೂರು ಪ್ರಶ್ನೆಗಳನ್ನು ಅವರೆದುರಿಟ್ಟರು. ರಮಣರು ಆಗ ಸಂಪೂರ್ಣಮೌನದಲ್ಲಿದ್ದುದರಿಂದ ಮರಳಿನ ಮೇಲೆ ತಮ್ಮ ತೋರುಬೆರಳಿನಿಂದ ಉತ್ತರಗಳನ್ನು ಬರೆಯುತ್ತಲಿದ್ದರು. ಅಥವಾ ಸ್ಲೇಟು, ಸೀಮೆಸುಣ್ಣ ಲಭ್ಯವಿದ್ದರೆ ಬರೆದು ತೋರಿಸುತ್ತಿದ್ದರು. ಮುಂದೆ ಇವು ಇಪ್ಪತ್ತೆಂಟು ಪ್ರಶ್ನೆಗಳ ಉತ್ತರವಾಗಿ ಪರಿಷ್ಕೃತವಾಗಿ ಪ್ರಕಟವಾಯಿತು. ರಮಣರ ಗಮನಕ್ಕೆ ಬಂದಮೇಲೆ ರಮಣರು ತಾವೇ ಇದೆಲ್ಲವನ್ನೂ ಒಂದು ದೀರ್ಘಪ್ರಬಂಧವಾಗಿ ರೂಪಿಸಿದರು. ರಮಣಚಿಂತನೆಯ ಅಧಿಕೃತದಾಖಲೆ ಇದು.

ಸಕಲಜೀವಿಗಳು ಬಯಸುವದೂ ದುಃಖಮಿಶ್ರಿತವಲ್ಲದ ನಿರ್ಮಲ ಆನಂದವನ್ನು. ಎಲ್ಲರಿಗೂ ತುಂಬ ಪ್ರಿಯವಾದದ್ದು ತಮ್ಮ ಆತ್ಮವೇ. ಆದರೆ ಆನಂದವೇ ತನ್ನ ನಿಜಸ್ವರೂಪ. ಗಾಢವಾದ ನಿದ್ರೆಯಲ್ಲಿ ಮನಸ್ಸು ಆತ್ಮನಲ್ಲಿ ಮುಳುಗಿದಾಗ ಅಂತಹ ಆನಂದದ ಅನುಭವ ಪ್ರತಿಯೊಬ್ಬ ಜೀವಿಗೂ ಆಗುತ್ತಲೇ ಇದೆ. ಅದು ಎಚ್ಚರದ ಅನುಭವವಾಗಿ ಆಗಬೇಕಾದರೆ ತನ್ನ ನೈಜಸ್ವರೂಪವನ್ನು ಶೋಧಿಸಿ ಅಲ್ಲಿ ನೆಲೆನಿಲ್ಲುವದೊಂದೇ ದಾರಿ. ಅದು 'ನಾನು ಯಾರು?' ಎಂಬ ಶೋಧನೆ. ನಮ್ಮೆಲ್ಲರ ಚಟುವಟಿಕೆಗಳ ಮೂಲವಾದ ಮನಸ್ಸು ಮುಳುಗಿ ಹೋದಾಗ ಬಾಹ್ಯದ ದೃಶ್ಯಪ್ರಪಂಚವೂ ಇಲ್ಲವಾಗುತ್ತದೆ. ಈ ಪ್ರಪಂಚದ ಭ್ರಮೆಯು ಯಾವದರ ಮೇಲೆ ಆರೋಪಿತವಾಗಿದೆಯೋ ಆ ಆತ್ಮವೇ ಪರಿಶುದ್ಧಸ್ವರೂಪದಲ್ಲಿ ಅನುಭವಸಿದ್ಧವಾಗುತ್ತದೆ. ಮನಸ್ಸು ಚಿಂತನೆಗಳ ಮೊತ್ತ. ಎಲ್ಲ ಚಿಂತನೆಗಳಿಗೂ ಮೂಲಚಿಂತನೆ ನಾನು (ಅಹಂ) ಎಂಬುದು. ಅದು ಪೂರ್ಣವಾಗಿ ಅಳಿದರೆ ಚಿಂತಾರಹಿತವಾದ ಆತ್ಮವೊಂದೇ ಉಳಿಯುತ್ತದೆ. ಆತ್ಮಚಿಂತನೆಯ ವಿನಹ ಉಳಿದೆಲ್ಲ ಚಿಂತನೆಗಳನ್ನೂ ಮುಳುಗಿಸಿದಾಗ, ಪರಮಾತ್ಮನಲ್ಲಿ ಪರಿಪೂರ್ಣಶರಣಾಗತಿಯು - ಸಾಧ್ಯವಾಗುತ್ತದೆ. ಆಗ ಜಗತ್ತು- ಸಂಸಾರ-ಹೊರೆ

ಎನಿಸುವದೇ ಇಲ್ಲ. ಎಲ್ಲವೂ ಪರಮತತ್ತ್ವದ ಯೋಜನೆಯಂತೆಯೇ ಸಹಜವಾಗಿ ನಡೆಯುತ್ತವೆ. ಆಲೋಚನೆಗಳ ಒತ್ತಡವಾಗಲಿ ಅದರ ಪರಿಣಾಮದ ಸುಖ- ದುಃಖ ದ್ವಂದ್ವವಾಗಲಿ ಆಗ ಇರುವದಿಲ್ಲ. ರೈಲು ನಮ್ಮನ್ನೂ ನಮ್ಮ ಪದಾರ್ಥಗಳ ಹೊರೆಯನ್ನೂ ಸುರಕ್ಷಿತವಾಗಿ ಸಾಗಿಸುತ್ತಿರುವಾಗ, ಅಂತಹ ರೈಲಿನಲ್ಲೇ ಕುಳಿತು ಮೂಟೆಯನ್ನು ತಲೆಯಮೇಲೆ ಇರಿಸಿಕೊಳ್ಳುವುದು ವಿವೇಕವೆ? ಅದನ್ನು ಪಕ್ಕದಲ್ಲಿರಿಸಿ, ನಿರಾತಂಕವಾಗಿ ಪ್ರಯಾಣಿಸಬಾರದೇಕೆ? ಎಲ್ಲ ಚಿಂತನೆಗಳನ್ನೂ ಕೊಡವಿಹಾಕಿದ ಮೇಲೆ, ಚಿಂತನೆಗಳ ಮೊತ್ತವಾದ ಮನಸ್ಸು ಎಂಬುದೆಲ್ಲಿದೆ ? ಅದು ಆತ್ಮನಲ್ಲಿ ಮುಳುಗಿ, ಕೇವಲ ಆನಂದಾನುಭವವೇ ಆಗುತ್ತದೆ. ಈ ಆನಂದಸ್ವರೂಪವೇ ನಾನು- ಎಂಬುದರ ನೈಜಸ್ವರೂಪ. ಅಹಂ ಎಂಬ ವೃತ್ತಿಯಲ್ಲ- ಅಹಂಸ್ಫುರಣ.

ಹೀಗೆ ಹರಿಯುತ್ತದೆ, ರಮಣರ ವಿಚಾರಲಹರಿ. ಈ ಪ್ರಬಂಧದಲ್ಲಿ, "ವಿಚಾರಸಂಗ್ರಹ" ಹಾಗೂ "ನಾನು ಯಾರು" ಕೃತಿಗಳ ಕಾಲದಲ್ಲಿ ರಮಣರು ಮೌನಿಸ್ವಾಮಿಯೇ ಆಗಿದ್ದರಷ್ಟೆ? ಹಾಗೆಂದರೆ ಅವರೇನೂ ಮೌನವನ್ನು ವ್ರತವಾಗಿ ಆಚರಿಸುತ್ತಿರಲಿಲ್ಲ. ಮಾತನಾಡುವ ಇಚ್ಛೆಯೇ ಅವರಲ್ಲಿ ಉಂಟಾಗಿರಲಿಲ್ಲ. ಅವರನ್ನು ಮಾತನಾಡಿಸುವ ಪ್ರಯತ್ನಕ್ಕೂ ಯಾರೂ ಹೋಗಿರಲಿಲ್ಲ. ಮೌನವೇ ಆ ತಪಸ್ವಿಯ ಸಹಜ ಸ್ಥಿತಿ- ಎಂದು ಎಲ್ಲರೂ ಅಂಗೀಕರಿಸಿ□ಟ್ಟಿದ್ದರು.

ರಮಣರ ಮೌನವನ್ನು ಮಾತನಾಡಿಸಿದ ಯಶಸ್ಸು ಹಾಗೂ ಆ ಅವಧೂತ ಆತ್ಮನಿಷ್ಠನನ್ನು ಭಗವಾನ್ ರಮಣಮಹರ್ಷಿ ಎಂದು ಜಗತ್ತಿಗೆ ಘೋಷಿಸಿದ ಕೀರ್ತಿ ಕಾವ್ಯಕಂಠಗಣಪತಿಮುನಿಗಳಿಗೆ ಸಲ್ಲುತ್ತದೆ. ಅಂತಹ ಶುಭಪ್ರಸಂಗ ಒದಗಿದುದು 1907ರಲ್ಲಿ. ಅದೂ ವಿರೂಪಾಕ್ಷಗುಹೆಯ ಪರಿಸರದಲ್ಲಿಯೇ.

## 8. ಇವರೇ ನನ್ನ ಗುರು

ವಾಸಿಷ್ಠಗಣಪತಿಮುನಿ ವಿದ್ವತ್ಪ್ರಪಂಚದಲ್ಲಿ ಸುವಿಖ್ಯಾತವಾದ ಹೆಸರು. 1878ರಲ್ಲಿ ಆಂಧ್ರದ ಬ್ರಾಹ್ಮಣಕುಟುಂಬದಲ್ಲಿ ಅವರ ಜನನ. ತಂದೆ

ನರಸಿಂಹಶಾಸ್ತ್ರಿಗಳ ಮೂವರು ಗಂಡುಮಕ್ಕಳಲ್ಲಿ ಗಣಪತಿ ಎರಡನೆಯವರು. ದೈವಾನುಗ್ರಹದಿಂದಲೇ ಅವರು ಜನಿಸಿದ್ದರೂ ಬಾಲ್ಯದಲ್ಲಿ ಕೇವಲ ಮೂಕಬಧಿರ ನಂತೆ ಇದ್ದರು. ಆಗಾಗ ಮೂರ್ಛೆರೋಗದಿಂದ ಬಳಲಿ ಕೃಶರಾಗಿದ್ದರು. ಅಲ್ಲದೆ ಒಂದಲ್ಲ ಒಂದು ರೋಗ. ಆದರೆ ಆರನೆಯ ವಯಸ್ಸಿನಲ್ಲಿ ನಾಟೀವೈದ್ಯ ಪದ್ಧತಿಯಂತೆ ಯಾರೋ ಕಬ್ಬಿಣದ ಬರೆಯಿಡುತ್ತಿದ್ದಂತೆಯೇ ಅವರ ಸುಪ್ತಪ್ರತಿಭೆಗಳೆಲ್ಲ ಹೊರಹೊಮ್ಮಿಬಿಟ್ಟವು ! ಅವರು ಕೆಲವೇ ವರ್ಷಗಳಲ್ಲಿ ಆಯುರ್ವೇದ, ಮಂತ್ರಶಾಸ್ತ್ರ ಜ್ಯೋತಿಶ್ಶಾಸ್ತ್ರಗಳಲ್ಲಿ ಅದ್ಭುತಪಾಂಡಿತ್ಯವನ್ನು ಗಳಿಸಿಬಿಟ್ಟರು. ತಮ್ಮ ಹನ್ನೆರಡನೆಯ ವಯಸ್ಸಿನಲ್ಲಿ ಕೇವಲ ಎಂಟುವರ್ಷದ ವಿಶಾಲಾಕ್ಷಿ ಎಂಬ ಬಾಲೆಯನ್ನು ವಿವಾಹವಾದರು. ಆಕೆ ಜೀವನದುದ್ದಕ್ಕೂ ಅವರ ಅಧ್ಯಾತ್ಮಸಖಿಯಾಗಿ ಸಹಧರ್ಮಚಾರಿಣಿಯಾದಳು.

ಗಣಪತಿಮುನಿಯ ತಪೋನಿಷ್ಠೆ ತುಂಬ ತೀವ್ರವಾಗಿತ್ತು. ರಾಜಮಹೇಂದ್ರಿ ಸಮೀಪದ ಕೌಶಿಕೀನದಿಯ ತೀರ ಅವರ ತಪೋರಂಗವಾಗಿತ್ತು. ಒಮ್ಮೆ ನಲವತ್ತೈದು ದಿನಗಳವರೆಗೂ ಅವರು ಮನೆಗೇ ಬಂದಿರಲಿಲ್ಲ. ಇಪ್ಪತ್ತನೆಯ ವಯಸ್ಸಿನಲ್ಲಿ- ಹುಟ್ಟುಹಬ್ಬದ ದಿನವೇ ಅವರು ತಪಸ್ಸಿಗೆಂದು ವಾರಣಾಸಿಗೆ ಹೊರಟುಬಿಟ್ಟರು. ಆ ವೇಳೆಗೆ ಅವರ ಕಾವ್ಯರಚನಾಸಾಮರ್ಥ್ಯವೂ ಅದ್ಭುತವಾಗಿದ್ದು ವಿದ್ವಾಂಸರ ಮನ್ನಣೆಗೆ ಪಾತ್ರವಾಗಿತ್ತು. ಬಂಗಾಳದ ನವದ್ವೀಪದ ವಿದ್ವತ್‌ಪರಿಷತ್ತಿನಲ್ಲಿ ಭಾಗವಹಿಸಲು ಅವರನ್ನು ಆರಿಸಿ ಕಳುಹಿಸಲಾಯಿತು. ಅಲ್ಲಿಯ ಪಂಡಿತಮಂಡಲಿಯನ್ನು ತಮ್ಮ ಆಶುಕವಿತ್ವದಿಂದ ಬೆರಗುಗೊಳಿಸಿ ಅವರು "ಕಾವ್ಯಕಂಠ" ಎಂಬ ಬಿರುದನ್ನು ಗಳಿಸಿಬಿಟ್ಟರು.

ಕಾವ್ಯಕಂಠ ಗಣಪತಿಮುನಿಗಳ ತಪಸ್ಸು ಸಿದ್ಧಿಸುವ ಅಮೃತಕ್ಷಣ ಬಂದಿತು. ದಕ್ಷಿಣಕ್ಕೆ ಹಿಂತಿರುಗಿ ಅವರು ಯಾಕೋ ಏನೋ ಅರುಣಾಚಲದಲ್ಲಿ ನೆಲಸಲು ನಿಶ್ಚಯಿಸಿಬಿಟ್ಟರು. ಅಲ್ಲಿಯ ಸಾಮಾಜಿಕಜೀವನದಲ್ಲೂ ಬೆರೆತರು. "ಹರ ಸಹಸ್ರ ಶ್ಲೋಕಾವಳಿ" ಎಂಬ ಸುದೀರ್ಘಕವನವನ್ನು ರಚಿಸಿ ಖ್ಯಾತರಾದರು. ಒಂದು ಸಹಸ್ರ ಶ್ಲೋಕಗಳ ಕೃತಿ ಇದು. ಜಪನಿಷ್ಣಾತರಾದ ಈ ಮಂತ್ರದ ದ್ರಷ್ಟಾರರು ಅತ್ಯಂತ ಗಂಭೀರ ವೃತ್ತಿಯ ಆಕರ್ಷಕವ್ಯಕ್ತಿಯಾಗಿದ್ದರು. ಸದಾ ಆನಂದತುಂದಿಲರಾಗಿ, ಪ್ರಖರಕಣ್ಣುಗಳ ಕಾಂತಿಯಿಂದ ವೇದಯುಗದ ಋಷಿಯಂತೆಯೇ ತೋರುತ್ತಿದ್ದರು.

ಆದರೆ ಅಂಥವರಲ್ಲೂ ಅಧ್ಯಾತ್ಮತೃಷೆಯ ಮೂಕಶೋಕ. ಈ ಮುಮುಕ್ಷುತ್ವವೇ ಅವರನ್ನು ರಮಣರ ಬಳಿಗೆ ಸೆಳೆಯಿತು. ಆ ಪುಣ್ಯಕ್ಷಣ ಒದಗಿದುದು 1907, ನವೆಂಬರ್ 18ರಂದು. ಆ ಮೊದಲು ರಮಣರನ್ನು ಕಂಡದ್ದುಂಟು. 1903ರಲ್ಲಿ ವಿಶ್ವನಾಥ ಅಯ್ಯರ್ ಅವರ ಸೂಚನೆಯಂತೆ ರಮಣರ ದರ್ಶನಕ್ಕೆಂದು ಅವರೊಡನೆಯೇ ವಿರೂಪಾಕ್ಷಗುಹೆಗೆ ಬಂದರು. ಸಮೀಪದ ಪದ್ಮನಾಭಸ್ವಾಮಿಯ ಆಶ್ರಮದಲ್ಲಿ ರಮಣರನ್ನು ಕಂಡರು. ತಕ್ಷಣ ಆಕರ್ಷಿತರಾಗಿ 'ಇವರೊಬ್ಬ ಮಹರ್ಷಿಯೇ ಸರಿ' ಎಂದು ಗುರುತಿಸಿಬಿಟ್ಟರು. ಅದೇ ವೇಳೆಗೆ "ಶುಕ್ಲಾಂಬರಧರಂ" ಎಂಬ ಪ್ರಸಿದ್ಧಶ್ಲೋಕದ ಅರ್ಥವನ್ನು ವಿವರಿಸುವಂತೆ ಪದ್ಮನಾಭಸ್ವಾಮಿ, ಮುನಿಯನ್ನು ಕೋರಿದರು. ಮುನಿ ತುಂಬ ಸಂತೋಷದಿಂದಲೇ ಶ್ಲೋಕವನ್ನು ಪದಶಃ ವಿವರಿಸುತ್ತಾ : "ಇಲ್ಲೊಬ್ಬ ಮಹಾನ್ ಸ್ವಾಮಿಯೇ ಇದ್ದಾರಲ್ಲಾ, ಅವರ ಪರವಾಗಿಯೂ ಈ ಶ್ಲೋಕವನ್ನು ವಿವರಿಸುತ್ತೇನೆ ಎಂದು- "ಬ್ರಾಹ್ಮಣಸ್ವಾಮಿ ಕೇವಲ ಬಿಳಿಯ ಕೌಪೀನಧಾರಿಯಾಗಿದ್ದಾನೆ. ಆದುದರಿಂದ ಈತ ಶುಕ್ಲಾಂಬರಧರಃ ಈತನ ಪ್ರಜ್ಞೆ ಆಕಾಶದಷ್ಟು ವ್ಯಾಪಕ. ಹೀಗಾಗಿ ಈತ ವಿಷ್ಣುವೇ. ಈತ ಶುಭ್ರಧವಳದ ಮನೋಹರ ದೇಹಕಾಂತಿಯವನು- ಆದುದರಿಂದ ಶಶಿವರ್ಣ. ಮನಸ್ಸು ಚಿತ್ತ ಬುದ್ಧಿ ಅಹಂಕಾರವೆಂಬ ನಾಲ್ಕು ಅಂತಃಕರಣಗಳನ್ನೂ ಅನ್ನವಾಗಿಸಿ ನುಂಗಿಬಿಟ್ಟಿದ್ದಾನೆ- ಆದುದರಿಂದ ಇವನು ಚತುರ್ಭುಜ" ಎಂದುಬಿಟ್ಟರು. ಹೀಗೆ ಮೊದಲ ನೋಟದಲ್ಲೇ ರಮಣರ ವಿಶಿಷ್ಟತೆಯನ್ನು ಗುರುತಿಸಿಕೊಂಡರೂ "ಆ ಅಮೃತಕ್ಷಣ" ಇನ್ನೂ ಒದಗಿಬಂದಿಲ್ಲ.

ಮತ್ತೆ ನಾಲ್ಕುವರ್ಷಗಳು ಉರುಳಿದವು. ಅರುಣಾಚಲದಲ್ಲಿ ಪ್ರಸಿದ್ಧವಾದ ಕಾರ್ತಿಕದ ಉತ್ಸವದ ಸಿದ್ಧತೆಗಳು ನಡೆದಿದ್ದವು. ಬೆಳಗಿನ ಪೂಜಾದಿಗಳು ಮುಗಿದು ಮುನಿಯು ಕೊಂಚ ಬಳಲಿದ್ದರು. ಎಂದಿನಂತೆ ತಪಸ್ಸಿಗೆ ತೆರಳದೆ, ಭೋಜನಕ್ಕೆಂದು ವಿಶ್ವನಾಥಅಯ್ಯರ್ ಮನೆಗೆ ಹೋದರು. ಯಾಕೋ ತಮ್ಮ ತಪಸ್ಸನ್ನೇ ಕುರಿತು ತುಂಬ ಚಿಂತಿತರಾಗಿದ್ದರು. ಶೋಕತಪ್ತರೂ ಆದಂತೆ ತೋರುತ್ತಿತ್ತು. ಶಿವಪಂಚಾಕ್ಷರಿ ಜಪವನ್ನು ಆ ವೇಳೆಗೆ ಕೋಟಿಗಟ್ಟಲೆ ಮಾಡಿಯಾಗಿತ್ತು. ಶ್ರೀವಿದ್ಯಾಮಂತ್ರಜಪವೂ ಮುಗಿದಿತ್ತು. ಹಲವಾರು ಬಗೆಯಲ್ಲಿ ತಪಸ್ಸು-ಉಪವಾಸವ್ರತಗಳೂ ನಡೆದಿದ್ದವು. ಆದರೂ ತಪಸ್ಸು ಫಲಿಸಿದಂತೆ ತೋರುತ್ತಿಲ್ಲ. ಮನಸ್ಸು ಉದ್ವಿಗ್ನವಾಗಿದೆ,

ಅತೃಪ್ತವಾಗಿದೆ, ಶೋಕಸಂವಿಗ್ನವಾಗಿಯೇ ಇದೆ. ಶಾಸ್ತ್ರಗಳ ಬೋಧನೆಯಲ್ಲಾಗಲಿ, ತಮ್ಮ ಆಚರಣೆಯಲ್ಲಿ ಆಗಲಿ ಯಾವ ಲೋಪವೂ ಇದ್ದಂತಿಲ್ಲ. ತಾವು ತಪಸ್ಸಿನ ಅರ್ಥವನ್ನೇ ಸರಿಯಾಗಿ ಅರಿತಿಲ್ಲವೆ? ಈ ಚಿಂತನೆ- ಆ ವೇಗದ ಸುಳಿಯಲ್ಲಿ ತತ್ತರಿಸುತ್ತಿದ್ದ ಮುನಿಗೆ ಥಟಕ್ಕನೆ, ವಿರೂಪಾಕ್ಷಗುಹೆಯ ಬ್ರಾಹ್ಮಣಸ್ವಾಮಿಯ ನೆನಪಾಯಿತು. ತಮ್ಮ ಬದುಕಿನ ಸಾರ್ಥಕತೆಗೆ ಅವರನ್ನೇ ಆಶ್ರಯಿಸಬೇಕು-ಎಂದು ತೀವ್ರವಾಗಿ ಎನಿಸಿಬಿಟ್ಟಿತು. ತಕ್ಷಣ ಎದ್ದು ಬೆಟ್ಟದತ್ತ ನಡೆದೇ ಬಿಟ್ಟರು. ಉರಿಬಿಸಿಲನ್ನೂ ಲೆಕ್ಕಿಸದೆ ಏರೇರಿ ನಡೆದರು. ಆಗ ಮಧ್ಯಾಹ್ನ ಎರಡುಗಂಟೆ. ಗುಹೆಯ ಹೊರಗೆ ಬ್ರಾಹ್ಮಣಸ್ವಾಮಿ ಆನಂದಮಯರಾಗಿ ತೇಜೋರಾಶಿಯಾಗಿ ಮೌನದ ಮಹಾಪರ್ವತವೇ ಆಗಿ ಕುಳಿತುಬಿಟ್ಟಿದ್ದರು, ದಕ್ಷಿಣಾಮೂರ್ತಿಯಂತೆ!

ಸಾಮಾನ್ಯವಾಗಿ ಜನಜಂಗುಳಿ ಹೆಚ್ಚಿರುವ ದಿನಗಳು ಅವು. ಆದರೆ ಅಂದು ಏಕೋ ರಮಣರ ಸನ್ನಿಧಿಯಲ್ಲಿ ಬೇರೆ ಯಾರೂ ಇರಲಿಲ್ಲ. ಭಾವೋದ್ವೇಗದಿಂದ ಕಂಪಿಸುತ್ತಾ ಗಣಪತಿಮುನಿಗಳು ರಮಣರ ಬಲಪಾದವನ್ನು ಬಲಗೈಯಿಂದಲೂ ಎಡಪಾದವನ್ನು ಎಡಗೈಯಿಂದಲೂ ಗಟ್ಟಿಯಾಗಿ ಹಿಡಿದು ದೀರ್ಘದಂಡ ನಮಸ್ಕಾರಮಾಡಿದರು. ಎದ್ದು ನಿಂತು ಹೀಗೆ ಪ್ರಾರ್ಥಿಸಿದರು : "ಸ್ವಾಮಿ, ನಾನು ಶಾಸ್ತ್ರಗ್ರಂಥಗಳನ್ನು ಅಭ್ಯಾಸಮಾಡಿ ಅವುಗಳ ಸಾರವನ್ನು ತಿಳಿದಿದ್ದೇನೆ. ಮಹಾಮಂತ್ರಗಳನ್ನು ಧ್ಯಾನಪುರಸ್ಸರವಾಗಿ ಜಪಮಾಡಿದ್ದೇನೆ. ಹಲವಾರು ಕಠಿಣ ವ್ರತಗಳನ್ನು ಕೈಗೊಂಡು ತಪಸ್ಸುಮಾಡಿದ್ದೇನೆ. ಆದರೂ ಪರಮಾತ್ಮನ ಅನುಗ್ರಹವಾಗಲಿಲ್ಲ. ನನ್ನ ತಪಸ್ಸಿನಲ್ಲಿ ಏನಾದರೂ ಲೋಪಗಳಿವೆಯೆ? ಅದರ ಸ್ವರೂಪವನ್ನೇ ತಿಳಿಯದೆ ಹೋಗಿದ್ದೇನೆಯೆ? ಪಂಡಿತನಾಗಿದ್ದರೂ ಅರಿಯದೆ ಹೋಗಿದ್ದೇನೆ. ತಮಗೆ ಶರಣು ಬಂದಿದ್ದೇನೆ. ತಾವು ಸರ್ವಜ್ಞರು. ನನ್ನನ್ನು ತಮ್ಮ ಶಿಷ್ಯನಾಗಿ ಸ್ವೀಕರಿಸಿ ಅನುಗ್ರಹಿಸಿ."

ಕಾವ್ಯಕಂಠಮುನಿ ತಮ್ಮ ಅನುಭವವನ್ನು ವಿವರಿಸುತ್ತಾ ಹೀಗೆ ಹೇಳುತ್ತಾರೆ: ನಾನು ಹೀಗೆ ತೀವ್ರವಾದ ಆಧ್ಯಾತ್ಮಿಕವೇದನೆಯಿಂದ ಅವರ ಕಾಲುಗಳಿಗೆ ಎರಗಿದಾಗ, ಹತಾಶನಂತೆ ಮಾರ್ಗದರ್ಶನಕ್ಕಾಗಿ ಮೊರೆಯಿಟ್ಟಾಗ, ಅವರ ಕರುಣಾಪೂರ್ಣನೋಟ ಸಂತೈಸುವ ತೊರೆಯಂತೆ ನನ್ನೆಡೆಗೆ ಹರಿದುಬಂದು ನನ್ನನ್ನು ಆವರಿಸಿಬಿಟ್ಟಿತು. ತಮ್ಮ ಇಂದ್ರಿಯಗಳನ್ನು ಸಂಪೂರ್ಣವಾಗಿ ಗೆದ್ದವರಲ್ಲಿ

ಅವರು ಅಗ್ರಮಾನ್ಯರು. ಒಂದು ಕ್ಷಣದಲ್ಲಿ ನನ್ನ ಸ್ಥಿತಿಯನ್ನೂ ಸಂದರ್ಭವನ್ನೂ ಅರಿತುಬಿಟ್ಟರು. ಕೃಪೆಯ ಮಳೆಯನ್ನೇ ನನ್ನ ಮೇಲೆ ಸುರಿಸಿಬಿಟ್ಟರು. ಪೂರ್ಣವಾಗಿ ತೆರೆದ ಕಣ್ಣುಗಳಿಂದ ಆನಂದಹರ್ಷವನ್ನು ಹರಿಯಿಸಿದರು.

ಬ್ರಾಹ್ಮಣಸ್ವಾಮಿಯ-ಹೆಸರು-ವೆಂಕಟರಮಣ-ಎಂದು ಸುತ್ತಮುತ್ತಲಿನವರಿಂದ ತಿಳಿದುಕೊಂಡ ಗಣಪತಿಮುನಿ, ಅದರಲ್ಲಿನ ರಮಣ ಎಂಬ ಸಂಕ್ಷಿಪ್ತವೂ ರಮಣೀಯವೂ ಆದ ಭಾಗವನ್ನು ಉಳಿಸಿಕೊಂಡರು. ತಮಗೆ ಮಾತ್ರವಲ್ಲದೆ ಸಮಸ್ತಜಗತ್ತಿಗೇ ಮಾರ್ಗದರ್ಶನ ಮಾಡಬಲ್ಲ ಈತ ಪ್ರಾಚೀನಪರಂಪರೆಗೆ ಸೇರಿದ ಮಹಾಋಷಿಯೇ ಸರಿ- ಎಂದು ನಿರ್ಧರಿಸಿದರು. ಮಹಾನ್ ಗುಣವುಳ್ಳ ಊರ್ಜಾವಂತ ಎಂಬ ಕಾರಣದಿಂದ ಇವರನ್ನು ಭಗವಾನ್ ಎಂದು ಸಂಬೋಧಿಸುವುದು ಉಚಿತ- ಎಂದು ತೀರ್ಮಾನಿಸಿದರು. ಇಂದಿನಿಂದ ತಾನೂ ತನ್ನ ಶಿಷ್ಯರೂ ಬ್ರಾಹ್ಮಣಸ್ವಾಮಿಯನ್ನು ಗುರುವಾಗಿ ಸ್ವೀಕರಿಸಿದ್ದೇವೆ, ಇವರನ್ನು 'ಭಗವಾನ್ ಶ್ರೀ ರಮಣಮಹರ್ಷಿ' ಎಂದೇ ಗೌರವಿಸುತ್ತೇವೆ- ಎಂದು ಘೋಷಿಸಿಬಿಟ್ಟರು.

ಮಹರ್ಷಿಗಳಿಗೂ, ಮುನಿಗಳಿಗೂ ಗಾಢವಾದ ಹೃದಯಸಂಬಂಧವೇ ಏರ್ಪಟ್ಟಿತು. ತಮಗಿಂತ ಕೇವಲ ಒಂದುವರ್ಷ ಹಿರಿಯರಾಗಿದ್ದ ಮುನಿಯನ್ನು ಮಹರ್ಷಿ 'ನಾಯನಾ' ಎಂದು ಗೌರವಾದರದಿಂದ ಕರೆಯತೊಡಗಿದರು. ಅವರೆಲ್ಲ ಕಾವ್ಯರಚನೆಯ ಸ್ಫೂರ್ತಿಕೇಂದ್ರವಾದರು. ಒಮ್ಮೆ ಇಪ್ಪತ್ತು ದಿನಗಳೊಳಗೆ ಉಮಾದೇವಿಯನ್ನು ಸಹಸ್ರಶ್ಲೋಕಗಳಲ್ಲಿ ಸ್ತುತಿಸುತ್ತೇನೆ- ಎಂದು ಮಹರ್ಷಿ ಸಂಕಲ್ಪಮಾಡಿಬಿಟ್ಟರು. ಸಾಕಷ್ಟು ಸಂಖ್ಯೆಯಲ್ಲಿ ಶ್ಲೋಕಗಳು ರಚಿತವಾಗುವಷ್ಟರಲ್ಲಿ ಅವರ ಬಲಗೈ ಹೆಬ್ಬೆರಳ ಮೇಲೆ ತೀವ್ರ ಯಾತನಾದಾಯಕವಾದ ಬೊಬ್ಬೆ ಎದ್ದುಬಿಟ್ಟಿತು. ಕೆಲವು ದಿನಗಳ ನಂತರ "ಪುಣ್ಯಕೋಟಿ" ಎಂಬ ಶಸ್ತ್ರವೈದ್ಯರಿಗೆ ಒಂದು ಸ್ವಪ್ನವಾಗಿ ಕೂಡಲೇ ಮುನಿಯನ್ನು ಕಂಡು ಅವರ ಬೆರಳಿಗೆ ಚಿಕಿತ್ಸೆ ಮಾಡಬೇಕೆಂಬ ಸೂಚನೆ ದೊರೆಯಿತು. ಇದೊಂದು ದೈವಿಕಆಜ್ಞೆಯೇ ಸರಿ- ಎಂದು ಭಾವಿಸಿದ ವೈದ್ಯರು ಮುನಿಯನ್ನು ಕಂಡು ಶಸ್ತ್ರಚಿಕಿತ್ಸೆಯ ಮೂಲಕವೇ ಬೆರಳನ್ನು ಗುಣಪಡಿಸಿದರು. ಆದರೂ

ತಾವು ಉಳಿದ ಅವಧಿಯಲ್ಲಿ ಕೃತಿಯನ್ನು ಮುಗಿಸುವ ಬಗೆಗೆ ಸಂದೇಹ ತಾಳಿದ ಮುನಿ, ತಮ್ಮ ಐವರು ಶಿಷ್ಯರಿಗೆ ಶ್ಲೋಕಗಳನ್ನು ಹೇಳುತ್ತಾ ಬರೆದುಕೊಳ್ಳುವಂತೆ ಸೂಚಿಸಿದರು. ಮಹರ್ಷಿ ಅತ್ಯಂತ ಕರುಣಾಪೂರ್ಣರಾಗಿ ಈ ಅವಧಿಯಲ್ಲಿ ಮುನಿಯ ಪಕ್ಕದಲ್ಲೇ ಕುಳಿತಿರುತ್ತಿದ್ದರು. ಉಮಾಸಹಸ್ರವು ಸುಲಲಿತವಾಗಿ ಮುಂದುವರೆಯಿತು. ಕಡೆಯ ಶ್ಲೋಕ ಮುಕ್ತಾಯವಾಗುತ್ತಿದ್ದಂತೆಯೇ ಮಹರ್ಷಿ ಕಣ್ಣುಗಳನ್ನು ಅರ್ಧ ತೆರೆದು "ಹೇಳಿದುದೆಲ್ಲ ಬರೆದುಕೊಂಡಾಯಿತೆ?" ಎಂದು ಮುನಿಯನ್ನು ಕೇಳಿದರು. ಈ ಪ್ರಶ್ನೆ ಗಣಪತಿಮುನಿಗಳನ್ನು ಉಳಿದವರನ್ನೂ ಚಕಿತಗೊಳಿಸಿತು. ಧ್ಯಾನಸ್ಥರಾಗಿದ್ದ ಮಹರ್ಷಿಗಳ ಮುಖದಿಂದ ಈ ಮಾತುಗಳು ಹೊರಹೊಮ್ಮಿದಾಗ ಮುನಿಗಳಿಗೆ ಥಟಕ್ಕನೆ ಸತ್ಯದರ್ಶನವಾಯಿತು. ಭಾವಗದ್ಗದರಾಗಿ ಅವರು ನುಡಿದರು: "ತಮ್ಮ ಅಸೀಮ ಕಾರುಣ್ಯದಿಂದ ನನಗೆ ತಾವು ಅನುಗ್ರಹಿಸಿದ ಕೃತಿಯನ್ನು ಇದೀಗ ತಾನೇ ಮುಗಿಸಿದ್ದೇನೆ."

ಮರುವರ್ಷ (1908) ಮಹರ್ಷಿ, ಗಣಪತಿಮುನಿಗಳೊಡನೆಯೇ ಪಾಚಿಯಮ್ಮನ ದೇವಾಲಯಕ್ಕೆ ಬಂದರು. ಅಲ್ಲಿ ಮುನಿಗಳು ಸಾಕ್ಷಾತ್ ಸ್ಕಂದನ ಅವತಾರ ಎಂಬ ಸ್ಪಷ್ಟ ಸೂಚನೆಗಳೇ ದೊರೆತವು. ಆತ್ಮದರ್ಶನದ ಪ್ರಥಮಗುರು ಎಂದು ಸ್ಕಂದನನ್ನು ಸಂಪ್ರದಾಯ ಭಾವಿಸುತ್ತದೆ. ಹೀಗಾಗಿ ಕಾರ್ತಿಕೇಯನ ಅವತಾರವೇ ಈ ರಮಣಮಹರ್ಷಿ ಎಂದು ಒಂದು ಅಷ್ಟಕದಲ್ಲಿ ಮುನಿ ಸ್ತುತಿಸಿದ್ದಾರೆ. ತಾವು ರಮಣರ ಕೃಪೆಯಿಂದಲೇ ರಚಿಸಿದ ರಮಣಗೀತೆಯಲ್ಲೂ ತಮ್ಮ ಈ ದೃಢವಿಶ್ವಾಸವನ್ನು ಪುನರುಚ್ಚರಿಸಿದ್ದಾರೆ.

ಮಹರ್ಷಿಗಳ ಸತತಸಾನ್ನಿಧ್ಯದಿಂದ ಮುನಿಯಲ್ಲಿ ನವಚೈತನ್ಯ ಮೂಡಿತು. ತಪಸ್ಸಿಗೆಂದು ತಿರುವೊಟ್ಟಿಯಾರ್ ಎಂಬಲ್ಲಿಗೆ ತೆರಳಿದರು. ಅಲ್ಲಿಯ ಗಣಪತಿದೇವಾಲಯದಲ್ಲಿ ಕಠಿಣತಪಶ್ಚರ್ಯೆಗೆ ತೊಡಗಿದರು. ಹದಿನೆಂಟನೆಯ ದಿನ. ತಮ್ಮ ಪಕ್ಕದಲ್ಲಿಯೇ ಮಹರ್ಷಿ ಬಂದು ಕುಳಿತಿರುವಂತೆ ಅವರಿಗೆ ಭಾಸವಾಯಿತು. ಚಕಿತರಾಗಿ ಎದ್ದುನಿಂತ ಅವರ ತಲೆಯ ಮೇಲೆ ಮಹರ್ಷಿ ತಮ್ಮ ವಾತ್ಸಲ್ಯಹಸ್ತವನ್ನಿರಿಸಿದರು. ಪುನಃ ಕುಳಿತ ಮುನಿಯ ಶರೀರದ ತುಂಬ ಯಾವುದೋ ವಿಶಿಷ್ಟಚೈತನ್ಯ ಹರಿಯಿತು. ಅಬ್ಬಾ!

ತನ್ನನ್ನು ಅನುಗ್ರಹಿಸಲೆಂದೇ ಮಹರ್ಷಿ ಅರುಣಾಚಲದಿಂದ ಹೇಗೋ ಇಷ್ಟು ದೂರ ಬಂದುಬಿಟ್ಟಿದ್ದಾರೆ- ಎಂದುಕೊಂಡರು.

ವಿಚಿತ್ರವೆಂದರೆ, ಮಹರ್ಷಿ ಈ ಹನ್ನೆರಡು ವರ್ಷಗಳಲ್ಲಿ ಒಂದು ಕ್ಷಣವೂ ಅರುಣಾಚಲವನ್ನು ಬಿಟ್ಟು ಎಲ್ಲಿಗೂ ಹೋಗಿರಲೇ ಇಲ್ಲ! ಹಲವಾರು ವರ್ಷಗಳ ನಂತರ ಮಹರ್ಷಿ, ಈ ಪ್ರಸಂಗವನ್ನೇ ಕುರಿತಂತೆ ಮುನಿಗೆ ಹೇಳಿದರು. "ನಾನು ಮಲಗಿಯೇ ಇದ್ದೆ. ಆದರೂ ಪೂರ್ಣ ಎಚ್ಚರವಿದ್ದೆ. ನನ್ನ ದೇಹ ಇದ್ದಕ್ಕಿದ್ದಂತೆ ಮೇಲೆ ಮೇಲೆ ಏರುತ್ತಾ ಬಂದಿತು. ಎಲ್ಲ ವಸ್ತುಗಳೂ ಮರೆಯಾದವು. ಬೆಳ್ಳನೆಯ ಬೆಳಕೊಂದೇ ಎಲ್ಲೆಲ್ಲೂ ತುಂಬಿತ್ತು. ನಂತರ ನನ್ನ ದೇಹ ಕೆಳಗೆ ಇಳಿಯತೊಡಗಿತು. ವಸ್ತುಗಳು ಕಾಣತೊಡಗಿದವು. ನಾನು ತಿರುವೊಟ್ಟಿಯೂರಿನಲ್ಲಿದ್ದೇನೆ- ಎಂದು ಭಾಸವಾಯಿತು. ಮುಖ್ಯಬೀದಿಯಲ್ಲಿದ್ದ- ಒಂದು ಬದಿಯಲ್ಲಿ ಗಣಪತಿ ದೇವಾಲಯವಿದ್ದಿತು. ನೇರವಾಗಿ ಒಳಗೆ ಪ್ರವೇಶಿಸಿ ಏನೋ ಮಾತನಾಡಿದೆ. ಏನು ಆಡಿದೆ- ಏನು ಮಾಡಿದೆ- ಎಂಬ ನೆನಪಿಲ್ಲ. ಎಚ್ಚರವಾಯಿತು. ನೋಡಿದರೆ ವಿರೂಪಾಕ್ಷಗುಹೆಯಲ್ಲೇ ಇದ್ದೇನೆ. ಈ ಎಲ್ಲವನ್ನೂ ಅಂದೇ ಪಳನಿಸ್ವಾಮಿಗೆ ಹೇಳಿದೆ!" ಮಹರ್ಷಿಗಳ ಈ ಶಿಶುಯುಗ್ಮ ಉದ್ಗಾರಗಳ ಮರೆಯಲ್ಲಿ ಅದೆಂತಹ ಅದ್ಭುತ ಮಹಾಯೋಗಾನುಭವ ಅಡಗಿದೆ! ಆದರೆ ಎಂದೂ ನಾನು ಸಂಕಲ್ಪಪೂರ್ವಕ ಪವಾಡಮಾಡಲಿಲ್ಲ. ಎಲ್ಲವೂ ಸಹಜವಾಗಿ ಸಂಭವಿಸುತ್ತವೆ- ಎಂದೇ ಅಂತಹ ಪ್ರಸಂಗಗಳನ್ನು ವಿವರಿಸುತ್ತಾರೆ. ಆತ್ಮಸಾಧಕನು ಎಂದೂ ಪವಾಡಗಳ ಬೆನ್ನುಹತ್ತಿ ಹೋಗಬಾರದು. ಅವು ಅವನನ್ನು ಪಥಭ್ರಷ್ಟನನ್ನಾಗಿ ಮಾಡುತ್ತವೆ- ಎಂದು ಎಚ್ಚರಿಸುತ್ತಾರೆ.

ಮುನಿಯನ್ನು ಕಂಡರೆ ಮಹರ್ಷಿಗಳಿಗೆ ತುಂಬ ಅಂತಃಕರಣ. ಪರ್ವತದ ಅನೇಕ ರಹಸ್ಯಪ್ರದೇಶಗಳಿಗೆ ಅವರನ್ನು ಕರೆದುಕೊಂಡು ಹೋಗುತ್ತಿದ್ದರು. "ನಾಯನಾ ಅರುಣಗಿರಿಯ ಇಂಚು-ಇಂಚೂ ನನಗೆ ತಿಳಿದಿದೆ. ಬೆಟ್ಟದ ಮೇಲೆ, ಕಣಿವೆಯ ಆಳ, ಗುಹೆಯ ಒಳಗೊಳಗೆ- ಈ ಪಾದಗಳು ಸುತ್ತಾಡಿವೆ. ಘಾರೆಸ್ಟ್‌ಗಾರ್ಡ್ ಸಹ ಅಂತಹ ಸಾಹಸ ಮಾಡಿರಲಾರ!" ಎಂದು ಬಾಲಕನಂತೆ ಉತ್ಸಾಹದಿಂದ ವರ್ಣಿಸುತ್ತಿದ್ದರು.

ಕಾವ್ಯಕಂಠಮುನಿಗಳಿಗೆ ಮಹದಾಕಾಂಕ್ಷೆಗಳಿದ್ದವು. ಅವರು ಸದಾ ಚೈತನ್ಯದ ಚಿಲುಮೆಯಾಗಿದ್ದರು. ಸಮಸ್ತಜಗತ್ತಿಗೇ ತನ್ನ ಗುರುವಿನ ಮಹತ್ವವನ್ನು ಸಾರುವುದು, ಭರತಭೂಮಿಯನ್ನು ದಾಸ್ಯದಿಂದ ಬಿಡುಗಡೆಮಾಡಬಲ್ಲ ತಪೋಶಕ್ತಿಯನ್ನು ಗಳಿಸಿದ ದೇಶಭಕ್ತರ ಒಂದು ಪಡೆಯನ್ನೇ ಸಜ್ಜುಗೊಳಿಸುವುದು, ವೇದಗಳ ನಿಜವಾದ ಅರ್ಥವನ್ನು ಪ್ರಕಾಶಗೊಳಿಸುವದು- ಇಂದ್ರ, ಅಗ್ನಿ, ವರುಣ- ಮುಂತಾದ ವೇದೋಕ್ತದೇವತೆಗಳನ್ನು ಕುರಿತು ಗ್ರಂಥರಚನೆ ಮಾಡುವುದು, ಇಂತಹ ಭವ್ಯಉದ್ದೇಶಗಳನ್ನು ಅವರು ಹೊಂದಿದ್ದರು. ಆದರೆ ಮಹರ್ಷಿಗಳ ಅನುಗ್ರಹವೇ ಅವರ ಬದುಕಿನ ಅಂತರ್ಜಲವಾಗಿತ್ತು. ರಮಣರನ್ನು ಕುರಿತು ಹೃದಯಂಗಮವಾದ ನಲವತ್ತು ಶ್ಲೋಕಗಳನ್ನು ರಚಿಸಿದರು. ವೇದದ ಅಂತರಾರ್ಥವನ್ನು ಸಾರುವ ನೇರಮಾರ್ಗವನ್ನು ತೋರಿದ ಮಹಾಋಷಿಯವರು ಎಂಬ ದೃಢವಿಶ್ವಾಸ ಅವರದ್ದು. ಉಲ್ಲಡು-ನಾರ್ಪಡು ಎಂಬ ತಮಿಳುಕೃತಿಯನ್ನು 'ಸದ್ದರ್ಶನಂ' ಎಂಬ ಹೆಸರಿನಲ್ಲಿ ಸಂಸ್ಕೃತದಲ್ಲಿ ಅನುವಾದಿಸಿದರು. ರಮಣರೊಡನೆ ತಮ್ಮ ಹಾಗೂ ಇತರರ ಸಂವಾದವನ್ನು 'ರಮಣಗೀತೆ' ಎಂಬ ಹೆಸರಿನಲ್ಲಿ ಭಗವದ್ಗೀತೆಯಂತೆ 18 ಅಧ್ಯಾಯಗಳಲ್ಲಿ ಪದ್ಯಾನುವಾದವಾಗಿ ಪ್ರಕಟಿಸಿದರು. ಕರ್ನಾಟಕದ ಸಿರ್ಸಿಯೇ ಅವರ ಈ ಎಲ್ಲ ಕೃತಿರಚನೆಯ ಮಹಾಕ್ಷೇತ್ರವಾದದ್ದು ಕುತೂಹಲದ- ಅಭಿಮಾನದ ಸಂಗತಿ. ಆದರೆ ಈ ಎಲ್ಲವೂ ಮಹರ್ಷಿಗಳ ಅನುಗ್ರಹಮಾತ್ರದಿಂದಲೇ ಸಾಧ್ಯವಾಯಿತು- ಎಂಬ ಸಮರ್ಪಣಾಭಾವ ಅವರಲ್ಲಿತ್ತು. ಸಿರ್ಸಿಯಿಂದ ಅವರು ಮಹರ್ಷಿಗಳಿಗೆ ಬರೆದ ಎಲ್ಲ ಪತ್ರಗಳಲ್ಲೂ ಈ ಶರಣಾಗತಿಭಾವವೇ ಸ್ಫುಟಗೊಂಡಿದೆ. (10-3-31 ರಿಂದ 15-3-31ರವರೆಗೆ -22 ಪತ್ರಗಳು)

ತಮ್ಮ ಅಂತ್ಯದ ದಿನಗಳಲ್ಲಿ ಶಿಷ್ಯರ ಅಪೇಕ್ಷೆಗೆ ಮಣಿದು ಖರಗಪುರದ ಹತ್ತಿರ ನೀಮ್‌ಪುರದ ಸಮೀಪದ ತಪೋವನದಲ್ಲಿ ಅವರು ವಾಸಿಸುತ್ತಿದ್ದರು. ಕೊಂಕುಳಲ್ಲಿ ಎದ್ದ ಹುಣ್ಣು ನೆಪವಾಗಿ ಅವರು ವಿಧಿವಶರಾದರು. (1936- ಜುಲೈ 25) ಆ ದುರಂತವನ್ನು ತಿಳಿಸುವ ತಂತಿಯನ್ನು ಕಂಡು ಅವರಂತಹವರನ್ನು ಮತ್ತೆಲ್ಲಿ ಕಾಣಲು ಸಾಧ್ಯ ಎಂದು ಉದ್ಗರಿಸಿ, ಕಾವ್ಯಕಂಠರ ಅನನ್ಯಪಾಂಡಿತ್ಯ, ಅಪಾರವಿನಯ, ಸಮರ್ಪಣಾಭಾವವನ್ನು ಭಾವಪೂರ್ಣವಾಗಿ ಪ್ರಶಂಸಿಸಿದರು. ಇಂತಹ ಗುರು- ಅಂತಹ ಶಿಷ್ಯ. ಅಧ್ಯಾತ್ಮಜಗತ್ತಿನ ಭಾಗ್ಯವೇ ಸರಿ.

## 9, ಸ್ಕಂದಾಶ್ರಮ

ಭಗವಾನ್ ರಮಣಮಹರ್ಷಿಗಳನ್ನು ಸಂದರ್ಶಿಸಲು ಬರುವವರ ಸಂಖ್ಯೆ ಬೆಳೆಯುತ್ತಾ ಹೋಯಿತು. ವಿರೂಪಾಕ್ಷಗುಹೆಯ ಆವರಣ ಸಾಕಾಗಲಿಲ್ಲ, ಅಲ್ಲದೆ ಅಲ್ಲಿದ್ದ ನೀರಿನ ಸೌಕರ್ಯವೂ ಕಡಿಮೆ. ಇನ್ನೂ ಮೇಲೆ ಮೇಲೆ ಏರಿ ನೀರಿನ ಚಿಲುಮೆಯಿಂದ ರಮಣರೇ ತಮ್ಮ ವೃದ್ಧತಾಯಿಗೆ ಸ್ನಾನಕ್ಕೆ ನೀರು ತರುತ್ತಿದ್ದರು. ಅವರೊಡನೆಯೇ ಇದ್ದ ಸ್ಕಂದಸ್ವಾಮಿ ಎಂಬುವನು ನೀರಿನ ಚಿಲುಮೆಯ ಬಳಿಯೇ ಒಂದು ಆಶ್ರಮವನ್ನೇ ಕಟ್ಟಿಬಿಡುವದು ವಾಸಿ-ಎಂದು ಸಲಹೆ ಮಾಡಿದನು. 'ಎಲ್ಲವೂ ದೈವೇಚ್ಛೆಯಂತೆ ನಡೆಯುತ್ತದೆ- ನನ್ನದು ಎಂಬುದೇನಿದೆ?' ಎಂದು ರಮಣರು ಸಮ್ಮತ್ರಿಸಿದರು. ಆ ಪ್ರದೇಶ ಅರುಣಗಿರಿಯ ಪೂರ್ವದ ತಪ್ಪಲಿನ ಇಳಿಜಾರಿನಲ್ಲಿದೆ. ಅರುಣಾಚಲದೇವಾಲಯದ ಆಸ್ತಿ ಅದು. ಅಲ್ಲಿ ಕಂದಸ್ವಾಮಿಯ ಶ್ರದ್ಧಾಪೂರ್ಣಶ್ರಮದಿಂದ ಒಂದು ಆಶ್ರಮನಿರ್ಮಾಣ ವಾಯಿತು. ತಾಯಿಯೂ ಸೇರಿದಂತೆ ಹಲವು ಭಕ್ತರೊಡನೆ ಮಹರ್ಷಿ ಅಲ್ಲಿಗೆ ಬಂದು ಆರುವರ್ಷಗಳು ಅಲ್ಲಿಯೇ ಭಕ್ತರನ್ನು ಅನುಗ್ರಹಿಸುತ್ತಾ ಇದ್ದುಬಿಟ್ಟರು. (1917-22) ಕಂದಸ್ವಾಮಿ ಕಟ್ಟಿಕೊಟ್ಟ ಈ ಆಶ್ರಮ ಸ್ಕಂದಾಶ್ರಮ ಎಂದೇ ಪ್ರಸಿದ್ಧವಾಯಿತು. ಅವನ ಶ್ರಮವನ್ನೂ ಗುರುಭಕ್ತಿಯನ್ನೂ ರಮಣರು ಮತ್ತೆ ಮತ್ತೆ ಸ್ಮರಿಸುತ್ತಿದ್ದರು. ಮುಳ್ಳುಗಿಡಗಳನ್ನು ಸವರಿಹಾಕಿದ್ದು, ಭಾರಿ ಬಂಡೆಗಳನ್ನು ಕಡಿದು ಹಾದಿಗಲ್ಲುಗಳಾಗಿ ಪರಿವರ್ತಿಸಿದ್ದು, ಒಂದು ಉದ್ಯಾನವನವನ್ನೇ ನಿರ್ಮಿಸಿದ್ದು ನಾಲ್ಕು ತೆಂಗಿನಮರಗಳನ್ನು ಬೆಳೆಸಿದ್ದು - ಹೀಗೆ ಅವನ ಶ್ರದ್ಧೆಯನ್ನು ಎಲ್ಲರಿಗೂ ವಿವರಿಸುತ್ತಿದ್ದರು.

ಸ್ಕಂದಾಶ್ರಮದ ಆ ಆರುವರ್ಷಗಳಲ್ಲಿ ಹಲವಾರು ಮಹತ್ವದ ಘಟನೆಗಳು ನಡೆದವು. ರಮಣರು ಮೌನ ಮುರಿದಿದ್ದುದರಿಂದ ಅವರು ಮುಕ್ತವಾಗಿ, ಉಲ್ಲಾಸದಿಂದ ಮಾತನಾಡುತ್ತಿದ್ದರು. ಅವರ ದೇಹಾರೋಗ್ಯವೂ ಉತ್ತಮವಾಗಿತ್ತು. ಬಂದ ಭಕ್ತರಿಗೆ, ಶಿಷ್ಯರಿಗೆ ಆಹಾರವನ್ನು ಸಿದ್ಧಪಡಿಸುವ ಕೆಲಸವನ್ನು ಅಳಗಮ್ಮಾಳ್ ತಾವೇ ಹೊತ್ತುಕೊಂಡರು. ಮುಂದೆ ಕಾವ್ಯಕಂಠಗಣಪತಿಮುನಿಗಳು ರಚಿಸಿದ ರಮಣಗೀತೆಗೆ ಆಧಾರವಾದ ಪ್ರಶ್ನೋತ್ತರಗಳು ನಡೆದುದೂ ಇಲ್ಲಿಯೇ.

ವಿಶ್ವನಾಥಸ್ವಾಮಿ, ಕುಂಜುಸ್ವಾಮಿ, ರಾಮಸ್ವಾಮಿಪಿಳ್ಳೆ- ಮುಂತಾದ ಭಕ್ತವರೇಣ್ಯರು ಅವರನ್ನು ಕೂಡಿಕೊಂಡದ್ದೂ ಇಲ್ಲಿಯೇ. ತಾಯಿ ಅಳಗಮ್ಮಾಳ್ ಆಧ್ಯಾತ್ಮಿಕವಾಗಿ ಬೆಳೆಯುತ್ತಾ ಹೋದದ್ದು ತನ್ನೆಲ್ಲ ಲೌಕಿಕಆಕಾಂಕ್ಷೆ - ವ್ಯಾಮೋಹಗಳನ್ನೂ ತ್ಯಜಿಸಿ, ದೇಹಬಂಧನವನ್ನೂ ಕಳಚಿಕೊಂಡು ಮುಕ್ತರಾದದ್ದೂ ಸ್ಕಂದಾಶ್ರಮದಲ್ಲಿಯೇ. ಮಹರ್ಷಿ ದೈವರಾತರು, ಸ್ವಾಮಿ ತಪೋವನಮಹರಾಜ್, ರಮಣದಾಸ - ಸದಾನಂದ, ಸುಂದರೇಶಯ್ಯರ್ - ಮುಂತಾದ ಮಹನೀಯರು ಈ ಸ್ಕಂದಾಶ್ರಮದ ಸವಿನೆನಪುಗಳನ್ನು, ರಮಣಮಹರ್ಷಿಗಳ ಅಪಾರಕಾರುಣ್ಯ, ಅನುಗ್ರಹಶಕ್ತಿಗಳನ್ನೂ ತಮ್ಮ ಕೃತಿಗಳಲ್ಲಿ ದಾಖಲಿಸಿದ್ದಾರೆ. ವೇದಯುಗದ ತಪೋವನವನ್ನೇ ತರುತ್ತಿದ್ದ ಸ್ಕಂದಾಶ್ರಮವನ್ನು ಈ ಎಲ್ಲರೂ ಕೊಂಡಾಡಿದ್ದಾರೆ.

ತಮ್ಮ ತಪಃಶಕ್ತಿ ದೀನದಲಿತರ ಸೇವಾಕಾಂಕ್ಷೆಯಿಂದ ಜಗದ್ವಿಖ್ಯಾತರಾದ ಶ್ರೀ ನಾರಾಯಣಗುರುಗಳು ರಮಣರನ್ನು ಸಂದರ್ಶಿಸಿ, ಅವರಿಂದ ಪ್ರಭಾವಿತರಾದದ್ದು ಸ್ಕಂದಾಶ್ರಮದಲ್ಲಿಯೇ. ಅದೊಂದು ಚೇತೋಹಾರಿಯಾದ ಋಷಿಸಮಾಗಮವೇ ಸರಿ. ನಾರಾಯಣಗುರು ನಿಧಾನವಾಗಿ ಮೆಟ್ಟಲೇರುತ್ತಾ ಸ್ಕಂದಾಶ್ರಮವನ್ನು ತಲುಪಿದರು. ಮಾವಿನಮರದಡಿ ಕುಳಿತರು. ಮಹರ್ಷಿ ತುಂಬುವಾತ್ಸಲ್ಯದಿಂದ ಅವರಿಗೆ ಊಟವನ್ನು ನೀಡಿದರು. ಗುರು, "ನಿವೃತ್ತಿಪಂಚಕ" ಎಂಬ ಹೆಸರಿನಲ್ಲಿ ಐದು ಆಧ್ಯಾತ್ಮಪರ ಶ್ಲೋಕಗಳನ್ನು ರಚಿಸಿ, ಮಹರ್ಷಿಗಳಿಗೆ ಅರ್ಪಿಸಿದರು. ತಮ್ಮ ವಾಸಸ್ಥಳ ಕೇರಳವನ್ನು ತಲುಪಿದ ನಂತರ, "ಮುನಿಚರ್ಯ ಪಂಚಕ" ಎಂಬ ಮತ್ತೆ ಐದು ಶ್ಲೋಕಗಳನ್ನು ರಚಿಸಿ, ಮಹರ್ಷಿಗಳಿಗೆ ಕಳುಹಿಸಿಕೊಟ್ಟರು. ಈ ಎರಡು ಕೃತಿಗಳಲ್ಲಿ ರಮಣರ ಸಹಜ ಸಮಾಧಿಯ ಔನ್ನತ್ಯವನ್ನು ಗುರು ಮುಕ್ತಕಂಠದಿಂದ ಸ್ತೋತ್ರಮಾಡಿದ್ದಾರೆ.

"ಶಾಂತಂ ಇದಂ ಆಶ್ರಮಮ್" ಎಂಬಂತೆ ಪ್ರಶಾಂತಪರಿಸರಮಾತ್ರದಿಂದಲೇ ತನ್ನ ಮಹತ್ವವನ್ನು ಸ್ಕಂದಾಶ್ರಮ ಸಾರುತ್ತಿದೆ. ರಮಣರ ಸಾನ್ನಿಧ್ಯದಿಂದ ಅದು ನಿರ್ವೈರಕ್ಷೇತ್ರವೇ ಆಗಿತ್ತು. ಹಾವು, ಮುಂಗುಸಿ, ನವಿಲು, ಅಳಿಲುಗಳಲ್ಲದೆ, ಹುಲಿ ಚಿರತೆಗಳೂ ಅಲ್ಲಿ ಸ್ನೇಹಜೀವಿಗಳಾಗಿದ್ದವು. ಪ್ರೀತಿಯಿಂದ ಒಡನಾಡುತ್ತಿದ್ದವು.

1922ರಲ್ಲಿ ತಾಯಿ ಅಳಗಮ್ಮರ ಸಮಾಧಿಗಾಗಿ ರಮಣರು ಅರುಣಗಿರಿಯ ದಕ್ಷಿಣತಪ್ಪಲಿಗೆ ಇಳಿದು ಅಲ್ಲಿ ನೆಲೆನಿಂತರು. ಇಪ್ಪತ್ತೆಂಟು ವರ್ಷಗಳು

ದೇಹಧಾರಿಗಳಾಗಿಯೇ ಇದ್ದುಕೊಂಡು ಭಕ್ತರನ್ನು ಅನುಗ್ರಹಿಸಿದರು. ಆಗಲೂ ಅವರ ಸ್ಮರಣೆಯಲ್ಲಿ ಸ್ಕಂದಾಶ್ರಮದ ನೆನಪು, ವಿಶೇಷವಾಗಿ ಕಂದಸ್ವಾಮಿಯ ಆದರ್ಶಶ್ರದ್ಧಾಭಕ್ತಿಗಳು ಹಸಿರಾಗಿಯೇ ಇದ್ದವು.

## 10. ಅಪೂರ್ವಶಿಷ್ಯ ಮುರುಗನಾರ್

ವಿರೂಪಾಕ್ಷಗುಹೆಯಲ್ಲಿ ರಮಣರನ್ನು ಅರಸಿಕೊಂಡು ಕಾವ್ಯಕಂಠಮುನಿಗಳು ಬಂದಂತೆಯೇ ರಮಣಾಶ್ರಮದಲ್ಲಿ ಮಹರ್ಷಿಗಳ ಆಶ್ರಯಕ್ಕೆ ಮತ್ತೊಬ್ಬ ಪ್ರತಿಭಾವಂತ ಕವಿವರ್ಯರು ಬಂದು ಅಲ್ಲಿಯೇ ನೆಲೆನಿಂತರು. ಅವರೇ ಮುರುಗನಾರ್ ಎಂದು ಪ್ರಖ್ಯಾತರಾದ ರಾಮನಾಥಪುರಂ ಸುಬ್ರಹ್ಮಣ್ಯ. ಅವರ ತಮಿಳುಭಾಷಾಪ್ರೇಮ ಎಷ್ಟು ಅಗಾಧವಾಗಿತ್ತೆಂದರೆ, ಸುಬ್ರಹ್ಮಣ್ಯ ಎಂಬ ತಮ್ಮ ಹೆಸರನ್ನು ಸ್ಕಂದನ ಮತ್ತೊಂದು ಹೆಸರಾದ ಮುರುಗನಾರ್ ಎಂದು ತಾವೇ ಅನುವಾದಿಸಿಕೊಂಡರು, 1890ರಲ್ಲಿ ಜನಿಸಿದ ಅವರು ಬಾಲ್ಯದಲ್ಲಿಯೇ ತಂದೆಯನ್ನು ಕಳೆದುಕೊಂಡರು. ರಾಮನಾಥಪುರಂ ಹಾಗೂ ಮಧುರೆಯಲ್ಲಿ ಅವರ ವಿದ್ಯಾಭ್ಯಾಸ ನಡೆಯಿತು. ರಾಜವಂಶಕ್ಕೆ ಸೇರಿದ್ದ ವೇಲುಸ್ವಾಮಿತೇವಾರ್ ಅವರಿಗೆ ತಮಿಳಿನಲ್ಲಿ ಪ್ರಸಿದ್ಧವಾದ ತಿರುಕ್ಕುರಳ್ ಗ್ರಂಥದ ಪಾಠಮಾಡುತ್ತಿದ್ದರು. ವಿದ್ಯಾಭ್ಯಾಸವನ್ನು ಪೂರೈಸಿದ ಮೇಲೆ ಮದ್ರಾಸಿನ ನಾರ್ವಿಕ್ ಗರ್ಲ್ಸ್ ಹೈಸ್ಕೂಲಿನಲ್ಲಿ ತಮಿಳುಪಂಡಿತರಾಗಿ ಉದ್ಯೋಗಕ್ಕೆ ತೊಡಗಿದರು. ಪತ್ನಿ ಮೀನಾಕ್ಷಿ ಹಾಗೂ ತಾಯಿ ಸುಬ್ಬುಲಕ್ಷ್ಮಿಯವರೊಡನೆ ವಾಸಿಸುತ್ತಿದ್ದರು. ಅವರ ಮಾವಂದಿರಾದ ದಂಡಪಾಣಿಸ್ವಾಮಿಯವರಿಂದ ಬಂದ ಒಂದು ಉಡುಗೊರೆ ಮುರುಗನಾರ್ ಅವರ ಜೀವನಗತಿಯನ್ನೇ ಬದಲಾಯಿಸಿಬಿಟ್ಟಿತು. ಈ ಉಡುಗೊರೆಯೇ ರಮಣರ ಹಾಗೂ ಅವರನ್ನು ಕುರಿತ ಕೆಲವು ಗ್ರಂಥಗಳ ಒಂದು ಕಟ್ಟು. ಅವುಗಳ ಅಭ್ಯಾಸದಿಂದ ತೀವ್ರವಾಗಿ ಪ್ರಭಾವಿತರಾದ ಅವರು 1923ರಲ್ಲಿ ಮೊದಲಬಾರಿಗೆ ರಮಣಾಶ್ರಮಕ್ಕೆ ಬಂದು ಮಹರ್ಷಿಗಳನ್ನು ಕಂಡರು. ಮರುವರ್ಷದ ಶಿವರಾತ್ರಿಗೆ ತಾಯಿಯೊಡನೆ ಮತ್ತೊಮ್ಮೆ ಬಂದರು. ತಾಯಿಯಲ್ಲಿ ಅವರ ಭಕ್ತಿ ಅನನ್ಯವಾಗಿತ್ತು, ರಮಣರನ್ನು ಅಗಲಲಾರದೆ, ತಾಯಿಯ ಬಗೆಗಿನ ತಮ್ಮ ಪ್ರಿಯಕರ್ತವ್ಯವನ್ನು ತೊರೆಯಲಾರದೆ, ಅವರು

ತೊಳಲಾಡತೊಡಗಿದರು. ತಮ್ಮ ತಾಯಿಯ ಬಗೆಗೆ ಕರುಣಾಮೃತವನ್ನು ಹರಿಸುವಂತೆ ತಮ್ಮ ಪದ್ಯಗಳ ಮೂಲಕ ಅವರು ಪ್ರಾರ್ಥಿಸಿದ್ದಾರೆ. ತಮ್ಮ ಎರಡು ಅಮೂಲ್ಯಕೃತಿಗಳಾದ "ಗುರುವಾಚಕ ಕೋವೈ" ಹಾಗೂ "ರಮಣಸನ್ನಿಧಿಮುರೈ" ಇವುಗಳನ್ನು "ಪ್ರೀತಿಯ ಅಮ್ಮನಿಗೆ" ಸಮರ್ಪಿಸಿದ್ದಾರೆ.

1926ರಲ್ಲಿ ತಮ್ಮ ತಾಯಿಯ ದೇಹಾಂತ್ಯವಾದ ಮೇಲೆ ಅತ್ಯಂತ ಶ್ರದ್ಧಾಭಕ್ತಿಯಿಂದ ವಿಧಿವತ್ತಾಗಿ ಕರ್ಮಾಂತರಗಳನ್ನು ನೆರವೇರಿಸಿ, ಧನುಷ್ಕೋಟಿಯ ಪವಿತ್ರಸಾಗರದಲ್ಲಿ ಅಸ್ಥಿ ವಿಸರ್ಜನಮಾಡಿದುದಲ್ಲದೆ, ಅದರ ಸ್ವಲ್ಪಭಾಗವನ್ನು ಶ್ರೀ ಭಗವಾನರ ಸೂಚನೆಯಂತೆಯೇ ಅರುಣಾಲಚದ ಅಗ್ನಿತೀರ್ಥಕೊಳದಲ್ಲಿ ವಿಸರ್ಜಿಸಿದರು. ಭಗವಾನರ ಅನುಗ್ರಹದಿಂದ ತಮ್ಮ ತಾಯಿಗೆ ಮುಕ್ತಿದೊರೆಯಿತು-ಎಂಬ ಪೂರ್ಣಶ್ರದ್ಧೆ ಮುರುಗನಾರ್ ಅವರದಾಗಿತ್ತು.

ತಿರುವಣ್ಣಾಮಲೆಗೆ ಬಂದ ಮೊದಲ ಕೆಲವು ವರ್ಷಗಳು ಅಲ್ಲಿಯ ಪಾಲಕ್ಕೋಡಿನಲ್ಲಿ ವಿಶ್ವನಾಥಸ್ವಾಮಿ, ನರಸಿಂಹಸ್ವಾಮಿ, ಕೋಹೆನ್, ಪಾಲ್‌ಬ್ರಂಟನ್ ಮುಂತಾದ ರಮಣಭಕ್ತರ ಸಹವಾಸದಲ್ಲಿ ಆತ್ಮಸಾಧನೆಗೆ ತೊಡಗಿದರು. ಅನಂತರ ಆಶ್ರಮದ ಎದುರಿನಲ್ಲಿಯೇ ವಾಸವಿದ್ದರು. ಭಗವಾನರ ಸಾನ್ನಿಧ್ಯದ ಹೆಬ್ಬಯಕೆಯಿಂದ ತಮ್ಮ ಉದ್ಯೋಗಕ್ಕೂ ರಾಜಿನಾಮೆ ನೀಡಿಬಿಟ್ಟಿದ್ದರು. ತಮ್ಮ ಸಾರ್ಥಕ ಬದುಕಿನ ಕಡೆಯ ದಶಕದಲ್ಲಿ ಅವರು ಆಶ್ರಮವಾಸಿಯೇ ಆಗಿ, ಅಲ್ಲಿದ್ದ ಸದ್ಭಕ್ತರ ಹಾಗೂ ಆಗಂತುಕರ ಸ್ಫೂರ್ತಿಕೇಂದ್ರವಾಗಿ, ಮಾರ್ಗದರ್ಶಕರಾದರು. ಅತ್ಯಂತ ಭಾವಪೂರ್ಣವಾಗಿ ರಮಣರನ್ನು ಕುರಿತ ಗೀತೆಗಳನ್ನು ರಚಿಸಿ ಹಾಡುತ್ತಿದ್ದರು. ಹಾಡು ಹಾಡುತ್ತ ಆನಂದ ಭಾಷ್ಪಗಳನ್ನು ಧಾರಾಕಾರವಾಗಿ ಸುರಿಸುತ್ತಾ ಕಂಠಗದ್ಗರಾಗಿಬಿಡುತ್ತಿದ್ದರು. ಈ ಮಹಾನ್ ಭಕ್ತರು 1973ರಲ್ಲಿ ರಮಣಾಶ್ರಮದಲ್ಲಿಯೇ ಮುಕ್ತರಾದರು.

ಒಬ್ಬ ಆದರ್ಶಭಕ್ತ ಹೇಗೆ ಪರಮಜ್ಞಾನಿಯೂ ಆಗಿರಬಲ್ಲ, ಎಂಬುದಕ್ಕೆ ಶ್ರೀ ಮುರುಗನಾರ್ ಪ್ರತ್ಯಕ್ಷ ಸಾಕ್ಷಿಯಂತಿದ್ದರು. ನಿಜವಾದ ಸದ್ಗುರುವು ಭಕ್ತನ ಅಜ್ಞಾನದ ಅಂಧಕಾರವನ್ನು ಸಾನ್ನಿಧ್ಯಮಾತ್ರದಿಂದ ದೂರಮಾಡಬಲ್ಲ, ಪ್ರಬಲವಾದ ಸಂಸಾರಗ್ರಂಥಿಯನ್ನು ಕ್ಷಣಮಾತ್ರದಲ್ಲಿ ಕತ್ತರಿಸಬಲ್ಲ, ಭಕ್ತನು ತನ್ನನ್ನು

ಸಂಪೂರ್ಣವಾಗಿ ಗುರುವಿಗೆ ಸಮರ್ಪಿಸಿಕೊಂಡಾಗ ಇವೆರಡೂ ಶತಸ್ಸಿದ್ಧ. ಭಗವಾನ್ ರಮಣರು ಹಾಗೂ ಮುರುಗನಾರ್ ಅವರ, ಗುರು-ಶಿಷ್ಯ ಸಂಬಂಧ ಈ ಬಗೆಯದೇ ಆಗಿತ್ತು. ಗುರುವಿನ ಆಶ್ರಮಕ್ಕೆ ಬರುವ ಮುನ್ನ ಮುರುಗನಾರ್ ಅತ್ಯಂತ ಉತ್ಸಾಹಶಾಲೀ ಲೌಕಿಕವ್ಯಕ್ತಿ, ಮಹಾನ್ ಪಂಡಿತ, ಉದ್ಯೋಗಿ, ಶಿಕ್ಷಕ, ಸಂಸಾರಿ, ಸಾಮಾಜಿಕಕಾರ್ಯಕರ್ತ, ಗಾಂಧೀಜಿಯ ಪ್ರಭಾವಕ್ಕೆ ಗಾಢವಾಗಿ ಒಲಗಾದ ಸ್ವಾತಂತ್ರ್ಯಸಂಗ್ರಾಮ ಸೇನಾನಿಯೂ ಹೌದು. ದೇಶಭಕ್ತಕವಿ. "ಸ್ವಾತಂತ್ರ್ಯ-ಗೀತಮ್" ಅವರ ಆ ಕಾಲದ ಜನಪ್ರಿಯ ಕೃತಿ.

ಆದರೆ ತಮ್ಮ ಎಂಬತ್ತಮೂರು ವರ್ಷಗಳ ತುಂಬುಜೀವನದಲ್ಲಿ ಐವತ್ತು ವರ್ಷಗಳನ್ನು ಅವರು ರಮಣರ ಸನ್ನಿಧಿಯಲ್ಲಿ ಕಳೆದರು. "ಅಹಂ" ಎಂಬುದನ್ನು ಪೂರ್ಣವಾಗಿ ಅಳಿಸಿಹಾಕಿದರು. ತಮ್ಮ ಯಾವದೇ ಕೃತಿ ತಮ್ಮದಲ್ಲ- ಅದು ಭಗವಾನರ ವಾಣಿ. ತಾವು ಕೇವಲ ಅದರ ವಾಹಕ ಎಂದು ದೃಢವಾಗಿ ನಂಬಿದ್ದರು. ಅವರ "ರಮಣ ಸನ್ನಿಧಿ ಮುರೈ" ಒಂದು ಸಾವಿರದ ಎಂಟುನೂರು ಒಂದು-ಭಕ್ತಿಗೀತೆಗಳ ಸಂಗ್ರಹ. ಎಲ್ಲದರ ಕೇಂದ್ರಬಿಂದುವೂ ತಮ್ಮ ಗುರು ರಮಣ-ಭಾವದ ಉಕ್ಕು ಭಾಷೆಯ ರಮಣೀಯತೆ, ಅರ್ಥವಂತಿಕೆಗಳಿಂದ ತುಂಬಿತುಳುಕುವ ಈ ರಚನೆಗಳಿಂದ ಅವರು ತಮಿಳುಸಾಹಿತ್ಯದ ಮಹಾನ್‌ಕವಿ ಮಾಣಿಕ್ಯವಾಚಕರ ಪಂಕ್ತಿಗೆ ಸೇರಿಬಿಟ್ಟಿದ್ದಾರೆ. ರಮಣದೇವಮಾಲೈ, ರಮಣಶರಣಪಲ್ಲಾಂಡು, ರಮಣಅನುಭೂತಿ, ಇಂಥ ಕೃತಿಗಳೂ ಸೇರಿದಂತೆ ಅವರ ಗೀತೆಗಳ ಸಂಖ್ಯೆ ಹದಿಮೂರು ಸಾವಿರವನ್ನು ಮೀರಿದೆ.

1923 ರಿಂದ 1950ರ ಅವಧಿಯಲ್ಲಿ ಅವರು ಸತತವಾಗಿ ರಮಣರ ಸನ್ನಿಧಿಯಲ್ಲಿದ್ದು ಬಗೆ ಬಗೆಯ ಭಾಷೆ- ದೇಶಗಳ ಭಕ್ತರು ಕೇಳುತ್ತಿದ್ದ ಪ್ರಶ್ನೆಗಳನ್ನೂ ಅವುಗಳಿಗೆ ಸದ್ಗುರು ನೀಡುತ್ತಿದ್ದ ಉತ್ತರಗಳನ್ನೂ ಏಕಾಗ್ರಚಿತ್ತದಿಂದ ಗಮನಿಸುತ್ತಿದ್ದರು. ತಮ್ಮ ಮನೋಧರ್ಮಕ್ಕೆ ಕಾವ್ಯಮಾಧ್ಯಮವೇ ಉಚಿತ ಎಂಬುದನ್ನು ಕಂಡುಕೊಂಡು ಅವುಗಳಿಗೆ ಪದ್ಯರೂಪವನ್ನು ಕೊಟ್ಟರು. ಪ್ರತಿಯೊಂದು ಪದ್ಯವನ್ನೂ ರಮಣರ ಗಮನಕ್ಕೆ ತಂದು ಅವರ ಸಲಹೆ-ತಿದ್ದುಪಡಿಗಳನ್ನು ಅಳವಡಿಸಿ, "ಗುರುವಾಚಕ ಕೋವೈ" ಎಂಬ ಹೆಸರಿನಲ್ಲಿ

ಸಂಗ್ರಹಿಸಿದ್ದರು. ಅದು 1200 ಪದ್ಯಗಳ ಬೃಹತ್ ಕೃತಿಯೇ ಆಯಿತು. ಪರಿಪೂರ್ಣಜ್ಞಾನದ ಪರಮಪ್ರಕಾಶ- ಎಂದು ಈ ಗ್ರಂಥದ ಖ್ಯಾತಿ. ತಮಿಳು ಸಾಹಿತ್ಯದ ''ತೇವಾರಂ''ಗಳಂತೆಯೇ ಈ ಕೃತಿ ಬಲ್ಲವರಿಂದ ವಾಚಿಸಲ್ಪಡುತ್ತಾ ರಮಣಚಿಂತನದ ಅಧಿಕೃತ ಗ್ರಂಥವೆನಿಸಿದೆ.

ಸದ್ಗುರುವಿನ ಅನುಗ್ರಹದಿಂದ ಓತಪ್ರೋತವಾಗಿ ಹೊರಹೊಮ್ಮಿದ ಈ ಕೃತಿಗಳ ರಚನೆಯಲ್ಲದೆ ಮುರುಗನಾರ್ ಮತ್ತೊಂದು ರೀತಿಯಲ್ಲಿ ಅಧ್ಯಾತ್ಮ ಲೋಕಕ್ಕೆ ಮಹದುಪಕಾರವನ್ನು ಮಾಡಿದ್ದಾರೆ. ಈಗಾಗಲೇ ಸ್ಪಷ್ಟಪಡಿಸಿರುವಂತೆ ರಮಣಮಹರ್ಷಿಗಳು ಗ್ರಂಥರಚನೆಯನ್ನು ಅಂಥ ಸಂಕಲ್ಪಪೂರ್ವಕವಾಗಿ ಮಾಡಿದವರಲ್ಲ, ಭಕ್ತರ ಕೋರಿಕೆ, ಸಂದರ್ಭದ ಅಗತ್ಯವನ್ನು ಗಮನಿಸಿ ಆಗಾಗ ಸಣ್ಣಪುಟ್ಟ ಚೀಟಿಗಳಲ್ಲೋ, ಮರಳು- ಸ್ಲೇಟುಗಳಲ್ಲೋ ಆಗಾಗ ಬರೆಯುತ್ತಿದ್ದುದಷ್ಟೆ! ಅಂತಹ ಅನೇಕ ಪ್ರಚೋದನೆಗಳು ಬಂದದ್ದು ವಿಶೇಷವಾಗಿ ಮುರುಗನಾರ್ ಅವರಿಂದ, ಗುರುವಾಚಕ ಕೋವೈ ಪದ್ಯಗಳನ್ನು ಗಮನಿಸುತ್ತಾ ರಮಣರು ತಮ್ಮ ಸಂದೇಶದ ಸ್ಪಷ್ಟನೆಗಾಗಿ, ತಾವೇ ಮೂವತ್ತು ಪದ್ಯಗಳನ್ನು ಬರೆದರು. ಶಿವಪುರಾಣವನ್ನು ಆಧರಿಸಿ, ದಾರುಕಾವನದ ಪ್ರಸಂಗವನ್ನು ಮುರುಗನಾರ್ ರೂಪಕವಾಗಿ ರಚಿಸಿದಾಗ, ಅವರ ಒತ್ತಾಯದ ಪ್ರಾರ್ಥನೆಯಂತೆ, ಶಿವನ ಉಪದೇಶವನ್ನು ಮೂವತ್ತು ದ್ವಿಪದಿಗಳಲ್ಲಿ ರಚಿಸಿಕೊಟ್ಟರು. ರಮಣಚಿಂತನದ ಪ್ರಸ್ಥಾನತ್ರಯಿಗಳಲ್ಲಿ ಮೊದಲನೆಯ ಕೃತಿ ಎಂದು ಪರಿಗಣಿಸಲಾದ ''ಉಪದೇಶ ಉಂದಿಯಾರ್'' ಎಂಬ ಕಿರುಕೃತಿ ಇದು. ಆತ್ಮವಿಚಾರದ ನೇರಮಾರ್ಗವಾದ ''ಉಲ್ಲಡು ನಾರ್ಪಡು'' ಎಂಬ ನಲವತ್ತು ಶ್ಲೋಕಗಳೂ ಮುರುಗನಾರ್ ಅವರ ಪ್ರಾರ್ಥನೆಯ ಫಲ. ಈ ಕೃತಿಯ ಅನುಬಂಧದ ರಚನೆಗಳು ಹಾಗೆಯೇ ಪದ್ಯಗಳನ್ನು ವಿಷಯಾನುಗುಣವಾಗಿ ಜೋಡಿಸಿ, ಸಂಕಲಿಸಿದ ಕೈಂಕರ್ಯವೂ ಮುರುಗನಾರ್ ಅವರದ್ದು.

1927ರಲ್ಲಿ ರಮಣಮಾರ್ಗವನ್ನು ಖಚಿತಪಡಿಸುವ - ''ಆತ್ಮವಿದ್ಯಾ ಕೀರ್ತನಮ್'' ಎಂಬ ಪದ್ಯಗಳನ್ನು ರಚಿಸಲು ಸಂಕಲ್ಪಿಸಿದ ಮುರುಗನಾರ್- ಅದರ

ಪಲ್ಲವಿ, ಅನುಪಲ್ಲವಿಗಳನ್ನು ಬರೆದು, ಅದನ್ನು ಉದ್ದೇಶಪೂರ್ವಕವಾಗಿ ರಮಣರಿಗೆ ನೀಡಿದರಂತೆ. ಚರಣಗಳನ್ನು ತಾವೇ ಬರೆಯಬೇಕು- ಎಂದು ವಿನಂತಿಸಿದರಂತೆ. ಅವರ ಇಂಗಿತವನ್ನು ಅರಿತ ಮಹರ್ಷಿ ಅನುಕಂಪ-ಕರುಣೆಯಿಂದ ಕರಗಿಹೋಗಿ ಈ ಕೀರ್ತನೆಯನ್ನು ಪೂರ್ಣಮಾಡಿದರು.

ರಮಣಹೃದಯದ ಪ್ರಕಟರೂಪ, ಮಹರ್ಷಿಗಳ ನೆರಳು, ಮಹರ್ಷಿಗಳ ಆತ್ಮಚಿಂತನೆಯ ಭಿತ್ತಿ ಎಂದೆಲ್ಲ ರಮಣಚಿಂತಕರು ಮುರುಗನಾರ್ ಅವರನ್ನು ಗೌರವಿಸುತ್ತಾರೆ. ರಮಣರ ದರ್ಶನದಿಂದ, ಸ್ಮರಣಮಾತ್ರದಿಂದ ಭಾವಪರವಶರಾಗಿ ಬಿಡುತ್ತಿದ್ದ ಅವರು ಅತ್ಯಂತ ನಿಗರ್ವಿ, ಪರಮವಿರಕ್ತ ದೇಹಾಭಿಮಾನವನ್ನು ತೊರೆದು ತಮ್ಮನ್ನು ಗುರುವಿನಲ್ಲಿ ಐಕ್ಯಗೊಳಿಸಿಕೊಂಡ ಅಪೂರ್ವ ಭಕ್ತಶಿರೋಮಣಿ. ಸಾಧಕರ ಜ್ಞಾನಭಂಡಾರ. ಭಕ್ತರ ಆತ್ಮೀಯಬಂಧು- ಎನಿಸಿದ್ದರು. ರಮಣರನ್ನು ಪ್ರತ್ಯಕ್ಷವಾಗಿ ಕಾಣುವ ಮೊದಲೇ ಅರುಣಾಚಲೇಶ್ವರಸನ್ನಿಧಿಯಲ್ಲಿ ಕಾಣದ ಗುರುವನ್ನು ಕುರಿತು ಹೃದಯಂಗಮವಾದ ಹತ್ತು ಪದ್ಯಗಳನ್ನು ಅವರು ನಿರರ್ಗಳವಾಗಿ ರಚಿಸಿಬಿಟ್ಟರು. "ದೇಶಿಕ ರಮಣಮಹಾದೇವ" ಎಂಬ ಈ ರಚನೆಯನ್ನು ಗುರುವನ್ನು ಕಾಣುತ್ತಿದ್ದಂತೆ ನಡುಗುವ ಕೈಗಳಿಂದ ಅರ್ಪಿಸಲು ಸಿದ್ಧರಾಗುತ್ತಿದ್ದಂತೆಯೇ ಭಾವಪರವಶರಾಗಿಬಿಟ್ಟರು. ತಮ್ಮ ರಚನೆಯನ್ನು ಓದಲು ಸಾಧ್ಯವಾಗಲಿಲ್ಲ, ಕಣ್ಣುಗಳಿಂದ ಅಶ್ರುಧಾರೆ ಹರಿಯತೊಡಗಿತು. ರಮಣರು ತಮ್ಮ ವಾತ್ಸಲ್ಯಹಸ್ತದಿಂದ ಅದನ್ನು ತಾವೇ ತೆಗೆದುಕೊಂಡು ಓದಿದರು. ಆ ಕೃತಿಯೊಡನೆಯೇ ಮುರುಗನಾರ್‌ರ ಹೃದಯವನ್ನು ಸೆಳೆದುಕೊಂಡುಬಿಟ್ಟರು !

## 11. ವೈದೇಶಿಕೋತ್ತಮ ಪಾಲ್‌ಬ್ರಂಟನ್

ಕಾವ್ಯಕಂಠ ಗಣಪತಿಮುನಿ ಹಾಗೂ ಮುರುಗನಾರ್ ಪ್ರಕಾಂಡಪಂಡಿತರು- ಶ್ರೇಷ್ಠಕವಿಗಳು. ಭಾರತೀಯವೇದಾಂತಚಿಂತನೆ ಅವರ ಸಹಜಪ್ರವೃತ್ತಿ. ಆದರೆ ಪಾಲ್‌ಬ್ರಂಟನ್ ಅಪ್ಪಟವಿದೇಶಿಯರು. ಎಲ್ಲ ಅರ್ಥದಲ್ಲೂ ಲೌಕಿಕವ್ಯಕ್ತಿ. ಸಮರ್ಥ ಬರಹಗಾರರೇನೋ ಹೌದು. ಆದರೆ ಸತ್ಯಶೋಧನೆಯ ಪ್ರವೃತ್ತಿಯಿಂದ ರಹಸ್ಯಭಾರತವನ್ನು ಹುಡುಕಲು ಹೊರಟ ಪತ್ರಿಕೋದ್ಯಮಿ. ಭಾರತದ ಹಲವಾರು ಆಧ್ಯಾತ್ಮಜೀವಿಗಳ, ಧರ್ಮಗುರುಗಳ ಹೆಸರುಗಳನ್ನು ಕೇಳಿದ್ದರು. ಅಂಥವರ ದೊಡ್ಡ

ಪಟ್ಟಿಯೇ ಅವರ ಬಳಿಯಿತ್ತು. ವಿಚಿತ್ರವೆಂದರೆ, ಯಾವ ಅಧ್ಯಾತ್ಮಗುರುವನ್ನು ಮುಂದೆ ಅವರು ಕಂಡುಕೊಂಡು ಅವರಿಗೆ ಶರಣಾದರೋ ಅಂತಹ ರಮಣಮಹರ್ಷಿಗಳ ಹೆಸರೂ ಸಹ ಅವರ ಪಟ್ಟಿಯಲ್ಲಿರಲಿಲ್ಲ! ಮುಂಬಯಿಯ ಒಬ್ಬ ಈಜಿಪ್ಟ್ ಮಾಂತ್ರಿಕನಿಂದ ಹಿಡಿದು ಪ್ರಸಿದ್ಧ ಅನುಭಾವೀ ಸಂತ ಮೆಹರ್ ಬಾಬಾವರೆಗೂ ಸತ್ಯಶೋಧಕ ಯಾತ್ರೆಯನ್ನು ಅವರು ಕೈಗೊಂಡು, ಅತೃಪ್ತರಾಗಿ, ಬಳಲಿ, ಭ್ರಮನಿರಸನ ಹೊಂದಿಬಿಟ್ಟಿದ್ದರು. ಹೀಗೆ ಹತಾಶರಾದ ಪಾಲ್‌ಬ್ರಂಟನ್ನರನ್ನು ಮದ್ರಾಸಿನಲ್ಲಿ ಸುಬ್ರಹ್ಮಣ್ಯ ಎಂಬ ರಮಣಭಕ್ತರು ತಮ್ಮ ಗುರುವಿನ ಬಳಿಗೆ ಬರುವಂತೆ ಆಹ್ವಾನ ನೀಡಿದಾಗ ಅವರಲ್ಲಿ ಯಾವ ಉತ್ಸಾಹವೂ ಉಂಟಾಗಲಿಲ್ಲ. ವೆಂಕಟರಮಣ ಎಂಬ ಪತ್ರಿಕೋದ್ಯಮಿ ಗೆಳೆಯ ಅವರನ್ನು ಕಂಚಿಯ ಪರಮಾಚಾರ್ಯರ ಬಳಿಗೆ ಕರೆದುಕೊಂಡು ಹೋದರು. ಅಚ್ಚರಿಯೆಂದರೆ ಶ್ರೀ ಶಂಕರಾಚಾರ್ಯ ಪೀಠಾಧಿಪತಿಯಾಗಿ, ಜ್ಞಾನನಿಧಿ, ಯೋಗಚಕ್ರವರ್ತಿ, ಮಹಾ ತಪಸ್ವಿ ಎಂದು ಖ್ಯಾತರಾದ ಶ್ರೀ ಶ್ರೀ ಚಂದ್ರಶೇಖರಸರಸ್ವತಿ ಸ್ವಾಮೀಜಿಯವರೂ, ಪಾಲ್‌ಬ್ರಂಟನ್ ರಮಣರನ್ನು ಕಾಣಲೇಬೇಕೆಂದು ಒತ್ತಾಯಿಸಿದರು. ಆ ಮಹಾಗುರುವಿನ ಮಹತ್ವವನ್ನು ತಾವು ನಿಶ್ಚಿತವಾಗಿ ಅರಿತಿರುವದಾಗಿಯೂ ಬ್ರಂಟನ್‌ರ ಅಧ್ಯಾತ್ಮತೃಷೆ ಅವರಿಂದ ಖಂಡಿತ ಪರಿಹಾರವಾಗುತ್ತದೆ- ಎಂದೂ ಭರವಸೆ ಇತ್ತರು.

ರಮಣಾಶ್ರಮದ ಪರಿಸರ, ಈವರೆಗೆ ಪಾಲ್‌ಬ್ರಂಟನ್ನರು ಕಂಡ ಗದ್ದಲ, ಪ್ರಚಾರಪ್ರಿಯತೆ, ಆಡಂಬರಗಳಿಗೆ ತೀರ ವಿಭಿನ್ನವಾಗಿತ್ತು. ಅತಿಸರಳ-ಶಾಂತ-ವ್ಯಾಪಕ ಮೌನ- ಆ ಮೂಲಕವೇ ಹರಿದು ಬರುತ್ತಿದ್ದ ಆನಂದದ ಸ್ರೋತವನ್ನು ಅವರು ಮೊದಲು ಸಂದರ್ಶನದಲ್ಲೇ ಅನುಭವಿಸಿದರು. ಅವರ ವಿಕ್ಷುಬ್ಧ ಮನಸ್ಸು ಅಪ್ರಯತ್ನವಾಗಿ, ತನಗೆ ತಾನೇ ಶಾಂತವಾಗಿ ಬಿಟ್ಟಿತು. ಮಹರ್ಷಿಗಳ ಚುಟುಕಾದ ಉತ್ತರದಲ್ಲಿ ಅವರ ಪ್ರಶಾಂತನೋಟದಲ್ಲಿ, ಬ್ರಂಟನ್ ಪೂರ್ಣವಾಗಿ ಆಕರ್ಷಿತರಾದರು. ತಮ್ಮ ಆಶ್ರಮವಾಸದ ದಿನಗಳನ್ನು ಬೆಳೆಸುತ್ತಾಹೋದರು. ಆದರೂ ಒಂದು ಖಚಿತವಾದ ಆತ್ಮಾನುಭವದ ನೆಲೆ ಇನ್ನೂ ದೊರಕಿರಲಿಲ್ಲ. ಹದಿನೈದುದಿನಗಳ ನಂತರ, ತಮ್ಮ ದಿನದಿನದ ಕರ್ಮಜಗತ್ತನ್ನೂ ಅಧ್ಯಾತ್ಮತೃಷೆಯನ್ನೂ ಸಮನ್ವಯಮಾಡಿಕೊಳ್ಳಲು ಸಾಧ್ಯವೆ? ಎಂಬ ಸಂದೇಹಕ್ಕೆ

ಉತ್ತರ ಬಯಸಿದರು. ಮಹರ್ಷಿ ಆತನ ಅಂತರಂಗವನ್ನು ಅರಿತು, ಕೊಂಚ ವಿಸ್ತಾರವಾದ ವಿವರಣೆಯನ್ನೇ ನೀಡಿದರು : ಆತ್ಮಾನುಭವಕ್ಕಾಗಿ ಕರ್ಮಜಗತ್ತನ್ನು ತೊರೆದು ಪಲಾಯನಮಾಡಬೇಕಿಲ್ಲ. ಸರಿಯಾದ ಕ್ರಮದಲ್ಲಿ ಧ್ಯಾನವನ್ನು ಅಭ್ಯಾಸಮಾಡಿಕೊಂಡರೆ, ನಿಮ್ಮ ಕರ್ತವ್ಯಕರ್ಮಗಳ ನಡುವೆಯೂ ಅದರ ಅನುಭವ, ಪ್ರವಾಹದ ತರಂಗಗಳಂತೆ ಪ್ರಭಾವಿಸಬಲ್ಲದು. ಅಂತಹ ಮನಃಸ್ಥಿತಿ ನಿಮ್ಮ ಕರ್ತವ್ಯಕರ್ಮಗಳ ಮೇಲೆಯೂ ಶುಭಪರಿಣಾಮವನ್ನುಂಟು ಮಾಡಬಲ್ಲದು. ಸಾಧನೆ ಮುಂದುವರೆದಂತದೆಲ್ಲ ಸುತ್ತಲ ಜನ, ಘಟನೆಗಳು, ವಸ್ತುಗಳ ಬಗೆಗೆ ನಿಮ್ಮ ದೃಷ್ಟಿಯೇ ಬದಲಾಗುತ್ತಿರುವದು ನಿಮ್ಮ ಅರಿವಿಗೇ ಬರುತ್ತದೆ. ನಿಮ್ಮ ಚಟುವಟಿಕೆಗಳೇ ಧ್ಯಾನವನ್ನು ಅನುಸರಿಸುವದನ್ನು ಕಾಣುವಿರಿ. ಈ ಮಹತ್ವದ ಉಪದೇಶದ ಗುರಿ ಅಂತರಂಗದಲ್ಲಿನ ವಿರಕ್ತಿಯನ್ನು ಸಾಧಿಸುವದು. ಎಂದರೆ ವೈರಾಗ್ಯ. ಬಾಹ್ಯವಸ್ತು- ವಿಷಯಗಳನ್ನು ಬಿಡುವದರಲ್ಲಿಲ್ಲ. ಅವುಗಳ ಬಗೆಯ ವ್ಯಾಮೋಹ-ಆತಂಕ-ಉದ್ವೇಗಗಳನ್ನು ಕಳಚಿಕೊಳ್ಳುವ ಚಿತ್ತಶುದ್ಧಿಯಲ್ಲಿದೆ. ಇದಕ್ಕಾಗಿ ಸಂಸಾರತ್ಯಾಗಮಾಡಬೇಕಿಲ್ಲ. ಬಾಹ್ಯಸಂನ್ಯಾಸ ಅನಿವಾರ್ಯವಲ್ಲ. ಆತ್ಮವಿಚಾರದ ನೇರಮಾರ್ಗದಿಂದ ಆತ್ಮನಲ್ಲಿ ಮನಸ್ಸನ್ನು ಶಾಂತಗೊಳಿಸಿ ಕ್ರಮೇಣ ಮನೋನಾಶವನ್ನೇ ಸಾಧಿಸುವದು ಪ್ರಧಾನಗುರಿ. ಆತ್ಮಸಂಸ್ಥಿತಿ ಎಂಬುದೇ ನೈಜಸ್ಥಿತಿ. ಸಾಧನೆ ಎಂದರೆ ಅಂತಹ ಸ್ಥಿತಿಯು ನಮ್ಮಿಂದ ಹೊರಗೆ ಬೇರೆಲ್ಲೋ ಇದೆ ಎಂಬ ಭಾವನೆಯಿಂದ ಅದನ್ನು ಹೊಸದಾಗಿ ಗಳಿಸಿಕೊಳ್ಳುವ ಶ್ರಮವಲ್ಲ. ನಮ್ಮಲ್ಲೇ ಇರುವ-ನಾವೇ ಆಗಿರುವ ಆ ಸಚ್ಚಿದಾನಂದಸ್ವರೂಪದ ಅನುಭವಕ್ಕೆ ಅಡ್ಡಿಯಾಗಿರುವ ಉಪಾಧಿಗಳನ್ನು ಮುಖ್ಯವಾಗಿ ನಾನು - ಎಂಬ (ಅಹಂ-ಕಾರ) ಉಪಾಧಿಯನ್ನು ಕಳಚಿಕೊಳ್ಳುವುದು. ಆಗ ನಮ್ಮ ಸಹಜಸ್ಥಿತಿಯೇ ಆಗಿರುವ ಆನಂದವೇ ನಮ್ಮ ಸ್ವರೂಪ- ಎಂದು ಸಹಜ ಅನುಭವದಲ್ಲಿ ನೆಲೆನಿಲ್ಲುತ್ತೇವೆ- ಎಂಬುದನ್ನು ಮಹರ್ಷಿ ತಿಳಿಸಿಕೊಟ್ಟರು.

ವಾಸ್ತವವಾಗಿ ಪಾಲ್‌ಬ್ರಂಟನ್ ತಮ್ಮ ಆಧ್ಯಾತ್ಮಯಾತ್ರೆಯ ಅಂತಿಮ ನಿಲ್ದಾಣಕ್ಕೆ ಬಂದು ನಿಂತಿದ್ದರು. ಆದರೆ ಪೂರ್ವಸಂಸ್ಕಾರಗಳಿಂದ, ಚಿಂತನೆಗಳ ತರ್ಕಗಳ ಜಾಲ ಅವರನ್ನು ಸುತ್ತುವರೆದಿತ್ತು. ಭಾರತವನ್ನು ಸುಮ್ಮನೆ ಸುತ್ತಾಡುವ ವ್ಯರ್ಥಪ್ರಯತ್ನವನ್ನು ಅವರು ಮುಂದುವರೆಸಿ ಕಂಗೆಟ್ಟರು. ಬಹುಬಳಲಿದ ನಂತರ

ಎರಡನೆ ಬಾರಿಗೆ ಮಹರ್ಷಿಗಳ ಸನ್ನಿಧಿಗೆ ಬಂದರು. ಇಂಗ್ಲೆಂಡಿಗೆ ಹಿಂತಿರುಗುವ ಸಿದ್ಧತೆಯ ಕಡೆಯ ಕ್ಷಣದಲ್ಲಿ ರಮಣರ ತೀವ್ರವಾದ ಆಕರ್ಷಣೆ ನೆನಪಾಗಿ ಅವರನ್ನು ಮುತ್ತುತ್ತಾ ಅರುಣಾಚಲಕ್ಕೆ ಸೆಳೆಯಿತು. ಆವರೆಗೆ ತಾವು ಕಂಡ ವ್ಯಕ್ತಿ-ಸನ್ನಿವೇಶಗಳೆಲ್ಲ ತೆರೆಯ ಮೇಲಿನ ಚಿತ್ರಗಳಂತೆ ಸರಿಸರಿದು ಮಾಯವಾಗುತ್ತ ಬಂದು- ಅದೊಂದೇ- ಶ್ರೀ ರಮಣರ ಶಾಂತ ತೇಜೋಮಯ ಸನ್ನಿಧಿ- ಅವರನ್ನು ಆವರಿಸಿತು. ಅಂತರಂಗದ ಆ ಅದಮ್ಯ ಸೆಳೆತದಿಂದ ಅವರು ಮತ್ತೆ ರಮಣರ ಸನ್ನಿಧಿಗೆ ಬಂದರು.

ಮನಸ್ಸು ಈಗ ಮಾಗಿತ್ತು. ಅಧ್ಯಾತ್ಮ ಕುತೂಹಲ, ಅಧ್ಯಾತ್ಮತೃಷೆಯಾಗಿತ್ತು. ಬಾಯಾರಿದ ಜಿಂಕೆ, ಉಳಿದೆಲ್ಲವನ್ನೂ ತೊರೆದು ನೀರಿನ ಬಳಿಗೆ ಧಾವಿಸುವಂತೆ ಸಹಜವಾಗಿ, ಯಾರ ಪ್ರಚೋದನೆ, ಒತ್ತಾಯದ ಅಗತ್ಯವೇ ಇಲ್ಲದಂತೆ ಅವರು ಆಶ್ರಮಕ್ಕೆ ಧಾವಿಸಿ ಬಂದರು. ರಮಣರನ್ನೇ ತಮ್ಮ ಸದ್ಗುರುವಾಗಿ ಸ್ವೀಕರಿಸಿ ಶರಣಾಗಿಬಿಟ್ಟರು. ಸದ್ಗುರುವಿನ ಸಾನ್ನಿಧ್ಯದಲ್ಲಿ ಅವರ ಅಧ್ಯಾತ್ಮಸಾಧನೆ ಶಿಖರವನ್ನು ಮುಟ್ಟಿತು. ಆಶ್ರಮದ ಶಾಂತಜೀವನಕ್ಕೆ ಬಹು ಬೇಗ ಅವರು ಹೊಂದಿಕೊಂಡುಬಿಟ್ಟರು. ಗುರುವಿನ ಕೃಪಾದೃಷ್ಟಿ ಸತತವಾಗಿ ಅವರ ಮೇಲಿತ್ತು. ಆ ಬಗೆಗೆ ಶಿಷ್ಯನಿಗೆ ಪೂರ್ಣವಿಶ್ವಾಸ ಉಂಟಾಯಿತು. ಆತನ ಅಹಂ ಎಂಬ ವ್ಯಕ್ತಿತ್ವ ನೋಡನೋಡುತ್ತ ಕಳಚಿಬಿದ್ದಿತು. ಹಿಂದಿನಂತೆ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವ ಅಗತ್ಯ ಅವರಿಗಿರಲೇ ಇಲ್ಲ. ಗುರುವಿನ ಮೌನವೇ ಮಾತಿಗಿಂತ ಪ್ರಭಾವಶಾಲಿಯಾಗಿತ್ತು. ಅವರ ಸನ್ನಿಧಿಯಲ್ಲಿ ಧ್ಯಾನ ಬಹುಬೇಗ ತನ್ನ ಗುರಿಯನ್ನು ತಲುಪಿಬಿಡುತ್ತಿತ್ತು. ವ್ಯಕ್ತಿತ್ವದ ಸಂಕುಚಿತತೆಯಲ್ಲಿ ಸಿಲುಕಿಕೊಂಡಿದ್ದ ಅವರ ಅರಿವು ಒಂದು ರಾತ್ರಿ ಪರಿಪೂರ್ಣತೆಯನ್ನೂ ವಿಶ್ವಪ್ರಜ್ಞೆಯನ್ನೂ ಅನುಭವಿಸಿ ಅನಂತ ಆನಂದದಲ್ಲಿ ಮುಳುಗಿಬಿಟ್ಟಿತು. ಸುಮಾರು ಎರಡುಗಂಟೆ ಅವಿಚಲರಾಗಿ ಈ ಸಮಾಧಿಸ್ಥಿತಿಯಲ್ಲಿ ಬ್ರಂಟನ್ ಕುಳಿತಿದ್ದರೆಂದೂ, ಅಷ್ಟೂ ಕಾಲ ಮಹರ್ಷಿಗಳ ದೃಷ್ಟಿ ಅವರಲ್ಲೇ ಕೇಂದ್ರೀಕೃತವಾಗಿತ್ತೆಂದೂ ಅದನ್ನು ಗಮನಿಸಿದ ಭಕ್ತರೊಬ್ಬರು ಬ್ರಂಟನ್ನರಿಗೆ ವಿವರಿಸಿ ಹೇಳಬೇಕಾಯಿತು. ಹೀಗೆ ಕಾಲ - ದೇಶಗಳ ಪರಿಮಿತಿಯನ್ನು ದಾಟಿಹೋದ ಗುರು - ಶಿಷ್ಯರು ಅಭಿನ್ನ ಅನುಭವದಲ್ಲಿ

ಮುಳುಗಿಹೋಗಿದ್ದರು. ಅದ್ವೈತಾನುಭೂತಿಯ ಅಖಂಡ ಆನಂದ ಅವರದ್ದಾಗಿತ್ತು.

ಆದರೂ ಪಾಲ್‌ಬ್ರಂಟನ್ನರ ಸತ್ಯನಿಷ್ಠುರತೆ ಹಾಗೂ ವಿನಯ ಅಪೂರ್ವವಾದದ್ದು. ತಮ್ಮ ಈ ಅನುಭವ ಅನಂತತೆಯ ಹಾದಿಯಲ್ಲಿ ನಡೆದದ್ದು ಅತ್ಯಂತ ಉಪಯುಕ್ತವಾದದ್ದು. ಅದು ದೀರ್ಘವಾದ ನಿರ್ವಿಕಲ್ಪಸಮಾಧಿ, ರಮಣರದ್ದು ಸಹಜ- ಸತತ ಸಮಾಧಿ- ಎಂಬ ಬೌದ್ಧಿಕ ಎಚ್ಚರವೂ ಅವರಿಗಿತ್ತು. ತಮ್ಮ ಅನುಭವಕಥನದ ಅಡಿಟಿಪ್ಪಣಿಯಲ್ಲಿ ಈ ಸತ್ಯವನ್ನು ಪ್ರಾಂಜಲವಾಗಿ ಅವರು ದಾಖಲಿಸುವ ವಿನಯವನ್ನು ತೋರಿದ್ದಾರೆ.

ಪ್ರಾಯಶಃ ಸ್ವಾಮಿ ವಿವೇಕಾನಂದರಂತೆ, ನಿರ್ದಿಷ್ಟ ಉದ್ದೇಶಕ್ಕಾಗಿ ಅವರು ಬಹಿರ್ಮುಖರಾಗುವ ಅಗತ್ಯವೂ ಇದ್ದೇತೇನೋ. ಭಾರತದೇಶದ ವ್ಯಾಪಕಸಂಚಾರದಲ್ಲಿ ತಮ್ಮ ಅಧ್ಯಾತ್ಮಸಾಧನೆ ಹೇಗೆ ರಮಣಮಹರ್ಷಿಗಳ ಸನ್ನಿಧಿಯಲ್ಲಿ ಪರಿಪೂರ್ಣವಾಯಿತು- ಎಂಬುದನ್ನು ಅವರು ಜಗತ್ತಿಗೆ ಸಾರಿ ಹೇಳಬೇಕಿತ್ತು. 1971ರಲ್ಲಿ ಎಂದರೆ ರಮಣಮಹರ್ಷಿಗಳನ್ನು ಸಂದರ್ಶಿಸಿದ ನಲವತ್ತು ವರ್ಷಗಳ ನಂತರ, ಇಂಗ್ಲೆಂಡಿನ ಸಣ್ಣ ಹಳ್ಳಿಯ ತಮ್ಮ ಕುಟೀರದಲ್ಲಿ ಕುಳಿತು, ತಮ್ಮ ಸ್ಮರಣೆಯಲ್ಲಿ ಸದಾ ಸ್ಫುರಿಸುವ ಅವರನ್ನು ಕುರಿತು ಬರೆದರು. ಮುಖ್ಯವಾಗಿ ತಮ್ಮ ಧ್ಯಾನದ ಕ್ಷಣಗಳಲ್ಲಿ ಅತ್ಯಂತ ಸ್ಪಷ್ಟವಾಗಿ, ತಾವು ಮೊದಲಬಾರಿ ಅವರನ್ನು ಕಂಡ ದರ್ಶನವೇ ಮರುಕಳಿಸುತ್ತಿರುವ ಅನುಭವವನ್ನು ಪಡೆಯುತ್ತಿದ್ದರು. ಇಂಗ್ಲೆಂಡಿನಿಂದ ಈಜಿಪ್ಟಿಗೆ ಹೊರಡುವ ಸಿದ್ಧತೆಯಲ್ಲಿದ್ದಾಗ ಮಹರ್ಷಿಗಳ ನೇರದರ್ಶನವೇ ಅವರಿಗೆ ದೊರೆಯಿತು. (ಮಹರ್ಷಿಗಳು ದೇಹತ್ಯಾಗಮಾಡಿದ ಇಪ್ಪತ್ತೊಂದು ವರ್ಷಗಳ ನಂತರ!) ಅವರ ಸೂಚನೆಯಂತೆಯೇ ತಮ್ಮ ಅಧ್ಯಾತ್ಮ ಅನುಭವವನ್ನು 'ದಿ ಸೀಕ್ರೆಟ್ ಪಾತ್' ಎಂಬ ಗ್ರಂಥದಲ್ಲಿ ನಿರೂಪಿಸಿದರು. ತಮ್ಮ ಬಳಿಗೆ ಬಂದವರಿಗೆಲ್ಲ ಅವರ ಅಂತರಂಗದ ಸಿಹಿಯಾದ ಅನುಭವವನ್ನು ಹಂಚತೊಡಗಿದರು. ಈ ಅಪೂರ್ವಅಧ್ಯಾತ್ಮಜೀವಿಯ ಅಂತ್ಯ ಸ್ವಿಟ್ಸರ್‌ಲೆಂಡಿನಲ್ಲಿ 1981ರಲ್ಲಿ ಆಯಿತು. ಅವರ ಸುಪುತ್ರ ಕೆನೆತ್‌ಹರ್ಸ್ಟ್, ತಂದೆಯ ತೀವ್ರವಾದ ಪ್ರಭಾವಕ್ಕೆ ಒಳಗಾಗಿ ರಮಣಭಕ್ತರ ಸಾಲಿಗೆ ಸೇರಿಬಿಟ್ಟಿದ್ದಾರೆ.

ಪಾಲ್‌ಬ್ರಂಟನ್ನರ ಬದುಕು- ಬರಹಗಳಿಂದ ಸ್ಫೂರ್ತಿ ಹಾಗೂ ಮಾರ್ಗದರ್ಶನ ಪಡೆದ ಸಾವಿರಾರು ಮಂದಿ ಅಧ್ಯಾತ್ಮಸಾಧಕರು ಅರುಣಾಚಲದ ಮಹಾ ಋಷಿಯತ್ತ ಆಕರ್ಷಿತರಾಗಿ, ಅವರ ಇಹಜೀವಿತದ ಕಾಲದಲ್ಲಿ ಮಾತ್ರವಲ್ಲ, ದೇಹಾವಸಾನದ ನಂತರವೂ ರಮಣಾಶ್ರಮಕ್ಕೆ ಯಾತ್ರೆ ಬರುತ್ತಿದ್ದಾರೆ. ತಮ್ಮ ಬದುಕನ್ನು ಅಧ್ಯಾತ್ಮಪಥದಲ್ಲಿ ಸೇಪರ್ಡಿಸಿಕೊಳ್ಳುತ್ತಿದ್ದಾರೆ. ಅಂಥವರಲ್ಲಿ ಹಲವರು ತಮ್ಮ ದೂರದ ತಾಯ್ನಾಡನ್ನು ತೊರೆದು ಅರುಣಾಚಲದಲ್ಲಿಯೇ ಇಂದಿಗೂ ನೆಲಸಿಬಿಟ್ಟಿದ್ದಾರೆ. ಹೀಗೆ ಪೂರ್ವ ಪಶ್ಚಿಮಗಳನ್ನು ರಮಣಮಾರ್ಗದಲ್ಲಿ ಬೆಸೆದ ಸದ್ಗುರು ಕೈಂಕರ್ಯದಲ್ಲಿ ಪಾಲ್‌ಬ್ರಂಟನ್ನರ ಪಾತ್ರ ಹಿರಿದಾದುದು. 'ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್' ಎಂಬ ಆರ್ಯೋಕ್ತಿ ಇಂತಹ ಪುಣ್ಯಜೀವಿಗಳಿಂದ ಸತ್ಯಸ್ಯ ಸತ್ಯವೆನಿಸಿತು.

## 12. ಕೃಪಾವೈಭವ

ಒಂದು ಅರ್ಥದಲ್ಲಿ ರಮಣಮಹರ್ಷಿಗಳ 'ಜೀವನಚರಿತ್ರೆ' ಎಂಬುದು ಇಲ್ಲಿಗೆ ಮುಗಿಯಿತು- ಎಂದೇ ಹೇಳಬಹುದು. ಮುಂದಿನ ಕಥನವೆಲ್ಲ ಅವರ ದಿವ್ಯಸಾನ್ನಿಧ್ಯದಲ್ಲಿ. ದೇಶ, ವಿದೇಶಗಳಿಂದ ಧಾವಿಸಿ ಬಂದ ಸಾಧಕರ ಸ್ವಾನುಭವಕಥನವೇ ಆಗಿದೆ. ಆತ್ಮಾರಾಮರಾಗಿ, ಬ್ರಹ್ಮನಿಷ್ಠರಾಗಿ, ದೇಹಪ್ರಜ್ಞೆಯಿಂದ ದೂರವಾಗಿ, ಕೇವಲ ಸಾಕ್ಷಿಯಾಗಿ, ಅರುಣಾಚಲದಲ್ಲಿ ತಮ್ಮ ಕಾರುಣ್ಯಶರಧಿಯನ್ನು ಹರಿಯಿಸುತ್ತಿದ್ದ ಆ ಪುರುಷೋತ್ತಮನ ಸಾನ್ನಿಧ್ಯದ ದಿವ್ಯಾನುಭವ ಅದು. ಸದಾ ಭಕ್ತವೃಂದದ ನಡುವೆಯಿದ್ದರೂ "ಅವಿಚ್ಯುತ ನಿಜಪ್ರಜ್ಞೆ"ಯ ಅತ್ಯಾಶ್ರಮದ ನೆಲೆಯ, ಅವಧೂತವರಿಷ್ಠನ, ಸಿದ್ಧಪುರುಷನ ಆತ್ಮಾನುಭವದ ಪ್ರಖರತೆ- ಕರುಣಾಮಯೀ ಪ್ರಸನ್ನತೆಯನ್ನು ಕಂಡು ಲೋಕ ವಿಸ್ಮಯಮೂಕವಾಯಿತು. ಅವರ ಸಾನ್ನಿಧ್ಯದ ವಿದ್ಯುದಾಕರ್ಷಣೆಗೆ ಸೋತು ಶರಣಾದವರು ಬರಿಯ ಭಾವುಕಭಕ್ತರಲ್ಲ, ರಾಜ-ರಾಣಿಯರು, ಕಲಾವಿದರು, ವಿಜ್ಞಾನಿಗಳು, ಕವಿವರ್ಯರು, ಎಲ್ಲ ಮತಧರ್ಮ- ದೇಶಗಳಿಂದ ಬಂದವರು. ಆದರೆ ಈ ಸಾಧಕ ವೃಂದದ ಬಗೆಗೆ ಮಹರ್ಷಿಗಳ ನಿಲುವೇನು?

"ತಮ್ಮ ಅದ್ಭುತ ಆಕರ್ಷಣೆಗೆ ಸಿಲುಕಿ ನಾನು ಬಹುದೂರದಿಂದ ಬಂದೆ" ಎಂದು ಭಕ್ತರೆಂದರೆ,

"ಹಾಗಲ್ಲ ಯಾವ ಅದ್ಭುತಶಕ್ತಿ ನನ್ನನ್ನು ಇಲ್ಲಿಗೆ ಸೆಳೆಯಿತೋ ಅದೇ ಶಕ್ತಿ ತಮ್ಮನ್ನು ಸೆಳೆದಿದೆ" ಎನ್ನುತ್ತಾರೆ- ಮಹರ್ಷಿಗಳು.

"ತಾವು ಸ್ವಪ್ನದಲ್ಲಿ ದರ್ಶನವಿತ್ತಿರಿ, ಇಲ್ಲಿಗೆ ಬರುವಂತೆ ಸೂಚಿಸಿದಿರಿ" ಎಂದು ಭಕ್ತರೆಂದರೆ, "ಯಾವುದು ಕಂಡಿತು ಅದು ಸರಿದು ಹೋಯಿತು ಅಲ್ಲವೆ? ಅದು ನನ್ನ ಸ್ವರೂಪವಲ್ಲ. ಆದರೆ ದರ್ಶನಗಳು ಒಳ್ಳೆಯದೇ. ಅದು ನಿಮ್ಮ ಮನಸ್ಸಿನ ಪರಿಪಾಕವನ್ನು ಸೂಚಿಸುತ್ತದೆ" ಎನ್ನುತ್ತಾರೆ.

"ತಾವು ಪುಟ್ಟಮಗುವಾಗಿ ನನಗೆ ದರ್ಶನವಿತ್ತಿರಿ" ಎಂದರೆ "ನಿಮ್ಮ ಅಂತ ರಂಗದ ಸಿಹಿಯಾದ ಬಯಕೆ ಅದು" ಎಂದುಬಿಡುತ್ತಾರೆ. ದರ್ಶನ, ಸೂಚನೆ, ಪ್ರೇರಣೆ ಯಾವದನ್ನೂ ಅವರು ತಾವು ಸಂಕಲ್ಪಿಸಿ ಕೈಕೊಂಡದ್ದು ಎನ್ನುವದೇ ಇಲ್ಲ. ಕಡೆಗೆ 'ತಾವೇ ನನ್ನ ಗುರು' ಎಂದು ಶರಣಾದವರ ಸರ್ವಯೋಗಕ್ಷೇಮವೂ ಅವರದೇ ಆದರೂ, "ನಿಮ್ಮ ಆತ್ಮವೇ ಗುರು, ನಿಮ್ಮ ಉತ್ಕಟಬಯಕೆಯಂತೆ ಅದೇ ಗುರುವಾಗಿ ತೋರಿಕೊಂಡಿದೆ. ಅದೇ ಈಶ್ವರನೂ ಆಗಿದೆ- "ಈಶ್ವರೋ ಗುರುರಾತ್ಮೇತಿ ಮೂರ್ತಿಭೇದವಿಭಾಗಿನೇ! ವ್ಯೋಮವತ್ ವ್ಯಾಪ್ತದೇಹಾಯ। ದಕ್ಷಿಣಾಮೂರ್ತಯೇ ನಮಃ" ಅಲ್ಲವೆ? ಈಶ್ವರ-ಗುರು-ಆತ್ಮ ಈ ಭೇದಗಳೆಲ್ಲ ವ್ಯವಹಾರ; ಇರುವದೊಂದೇ- ಏಕಮೇವ ಅದ್ವಿತೀಯ ಪರಬ್ರಹ್ಮ- ಎಂದು ವ್ಯಾಖ್ಯಾನಿಸುತ್ತಾರೆ. "ಸದ್ವಸ್ತು ನಾಮರೂಪಕಾಲದೇಶಗಳಿಗೆ ಅತೀತ. ಅದು ನಿರಂತರ-ನಿತ್ಯಸತ್ಯ" ಎನ್ನುತ್ತಾ "ಪ್ರಶ್ನೆಗಳು ಮುದಿಯಾಗಿವೆ. ಎಲ್ಲಾ ಯುಗದಲ್ಲೂ ಅದೇ- ಅದೇ- ಸಂದೇಹ, ಪ್ರಶ್ನೆಗಳು ಆದರೆ ಈ ಅಸಂಖ್ಯಾತಸಂದೇಹಗಳಿಗೆ ಅಂದಿನಿಂದ ಇಂದಿನವರೆಗೂ ಒಂದೇ ಉತ್ತರ- "ಆತ್ಮನನ್ನು ಅರಿತವನು ಈ ಯಾವದರಿಂದಲೂ ಬಾಧಿತನಲ್ಲ, ಸಂಸಾರವನ್ನು ದಾಟುವವನು, ದಾಟಿಸುವವನು ಅವನೇ. 'ವೃದ್ಧಾಃ ಶಿಷ್ಯಾಃ ಗುರುರ್ಯುವಾ' ಎಂಬ ಮಾತಿನ ಅರ್ಥ ಇದೇ. ಅಂಥವನ ಸಾನ್ನಿಧ್ಯಮಾತ್ರದಿಂದ ಶಿಷ್ಯರ ಸಂದೇಹಗಳು ಛಿನ್ನವಾಗುತ್ತವೆ. ಅದಕ್ಕೆ ಮಾತಿನ ಹಂಗೇ ಬೇಡ. ಅದು ಮೌನವ್ಯಾಖ್ಯಾನ" ಎಂದು ಹೃದಯಂಗಮವಾಗಿ ವಿವರಿಸುತ್ತಾರೆ. ನಿಜವಾಗಿ ಮೌನವೇ ಅತ್ಯಂತಶಕ್ತಿಯುತವಾದ ಸಂವಹನ. ಅದು ನಿರಂತರ- ಆದರೆ ಮಾತು ಅದನ್ನು ತುಂಡರಿಸುತ್ತದೆ. ಪೂರ್ಣ ಅನುಭವ ಮಾತಿಗೆ ನಿಲುಕದು. ಮನಸ್ಸೂ ಅದನ್ನು ಹಿಡಿಯದು. ಮೌನವೇ ಆತ್ಮಜ್ಞಾನಿಯ ಭಾಷೆ.

ಅದೇ ಎಲ್ಲವನ್ನೂ ತಿಳಿಸಿಬಿಡುತ್ತದೆ, ತಾನು ತಿಳಿದಿರುವದರಿಂದ- ಎಂದು ಹೃದಯಂಗಮವಾಗಿ ವಿವರಿಸುತ್ತಾರೆ. "ಯತೋ ವಾಚೋ ನಿವರ್ತಂತೇ । ಅಪ್ರಾಪ್ಯ ಮನಸಾ ಸಹ" ಎಂಬ ಶ್ರುತಿವಾಕ್ಯವನ್ನೇ ಮಹರ್ಷಿ ನೆನಪಿಸುತ್ತಾರೆ- ಮಾತ್ರವಲ್ಲ; ಅವರ ಸನ್ನಿಧಿ ಮೌನದ ಮಹಾಸಾಮ್ರಾಜ್ಯ- ಎಂಬುದನ್ನೇ ಸಾಧಕರ ಅನುಭವವಾಗಿಸಿಬಿಡುತ್ತಾರೆ. ಅಲ್ಲಿ ಪ್ರಶ್ನೆಗಳು ಉತ್ತರಿಸಲ್ಪಡುತ್ತವೆ- ಎನ್ನುವದಕ್ಕಿಂತ ಪ್ರಶ್ನೆಗಳೇ ಸಾಯುತ್ತವೆ- ಎನ್ನುವದೇ ಸರಿಯೇನೋ! ಏಕೆಂದರೆ ಪ್ರಶ್ನೆಗಳು ಮೂಡುವದು-ಕಾಡುವದು ಮನಸ್ಸಿನಲ್ಲಿಯಷ್ಟೆ? ಮಹರ್ಷಿಯ ಸಾನ್ನಿಧ್ಯದಲ್ಲಿ ಮನಸ್ಸೇ ತನ್ನ ಮೂಲವಾದ ಆತ್ಮನಲ್ಲಿ ಲಯವಾಗಿಬಿಡುತ್ತದೆ. ಒಂದೆರಡು ಸಂದರ್ಭಗಳನ್ನು ಮಾತ್ರ ಈ ಕಿರುಲೇಖನದಲ್ಲಿ ಸೂಚಿಸಲು ಸಾಧ್ಯ.

ಪಾಶ್ಚಾತ್ಯಜಗತ್ತಿಗೆ ರಮಣಮಹರ್ಷಿಗಳನ್ನು ಪರಿಚಯಿಸಿದ ಪೂರ್ವೋಕ್ತ ಪಾಲ್‌ಬ್ರಂಟನ್ ಅವರ ಮಾತುಗಳನ್ನೇ ಕೇಳೋಣ. ಅವರಿಗೆ ಈ ಮಹರ್ಷಿಯ ಬಗೆಗೆ ನಮ್ಮಂತೆ ಭಾವುಕಭಕ್ತಿಯಂತೂ ಇರಲಿಲ್ಲ. ವಿಚಿಕಿತ್ಸಕಬುದ್ಧಿಯಿಂದಲೇ ಅವರು ಬಂದವರು. ಭಾರತದ ಸಾಧುಸಂತರನ್ನೆಲ್ಲ ಸಂದರ್ಶಿಸಿ ಹತಾಶರಾಗಿ ಹಿಂತಿರುಗಿ ಹೋಗುವ ಮನಃಸ್ಥಿತಿಯಲ್ಲಿದ್ದವರು- ಎಂದು ತಿಳಿದಿದ್ದೇವೆ. ಈಗ ಮಹರ್ಷಿಗಳ ಮೌನ ಸಾನ್ನಿಧ್ಯದಲ್ಲಿ ಅವರ ಅನುಭವ ಏನು?

"ಲೋಹಚುಂಬಕದಿಂದ ಆಕರ್ಷಿತವಾದ ಉಕ್ಕಿನಂತೆ ನನ್ನ ಮನಸ್ಸನ್ನು ಬಲವಾಗಿ ಸೆಳೆವ ಯಾವದೋ ಅಂಶ ಇವರಲ್ಲಿದೆ. ಈ ಅಪರಿಚಿತ ಅನುಭವದ ಎರಡು ಗಂಟೆಯ ನಂತರ ನಾನು ನನ್ನ ಮನದಲ್ಲಿ ಸದ್ದಿಲ್ಲದೆ ಸುಳಿದ ಅಪ್ರತಿಹತಕ ಬದಲಾವಣೆಯನ್ನು ಗುರುತಿಸಿದೆ. ತುಂಬ ಎಚ್ಚರಿಕೆಯಿಂದ ನಾನು ಪ್ರಯಾಣಕಾಲದಲ್ಲಿ ರೂಪಿಸಿಕೊಂಡಿದ್ದ ಪ್ರಶ್ನೆಗಳು ಒಂದೊಂದಾಗಿ ಜಾರಿಹೋಗುತ್ತಿವೆ. ಆವರೆಗೆ ನನ್ನನ್ನು ಬಾಧಿಸುತ್ತಿದ್ದ ಪ್ರಶ್ನೆಗಳನ್ನು ನಾನು ಕೇಳದಿದ್ದರೂ ಅದೇನೂ ಮಹತ್ತ್ವದ ವಿಷಯವೇ ಅಲ್ಲ ಎನಿಸುತ್ತದೆ. ಒಂದು ಪ್ರಶಾಂತವಾಹಿನಿ ನನ್ನ ಸಮೀಪದಲ್ಲಿಯೇ ಸುಳಿಯುತ್ತಿದೆ. ಅದ್ಭುತಶಾಂತಿ ಚೇತನದ ಆಳಆಳದಲ್ಲಿ ಇಳಿಯುತ್ತಿದೆ. ಯೋಚನೆಗಳಿಂದ ತುಂಬಿದ್ದ ಮೆದುಳಿಗೆ ವಿಶ್ರಾಂತಿ ದೊರೆಯುತ್ತದೆ. ಮತ್ತೆ ಮತ್ತೆ ನಾನು ಕೇಳಿಕೊಳ್ಳುತ್ತಿದ್ದ ಪ್ರಶ್ನೆಗಳು ಅದೆಷ್ಟು ಕ್ಷುಲ್ಲಕವಾದವು! ಮಾನವಬುದ್ಧಿ ತನ್ನದೇ ಪ್ರಶ್ನೆಗಳನ್ನು ಸೃಷ್ಟಿಸುತ್ತದೆ. ಉತ್ತರಿಸಲಾಗದ

ತೊಳಲಾಡುತ್ತವೆ. ಬುದ್ಧಿಯ ಮಹತ್ವವನ್ನು ಈವರೆಗೂ ಅತಿಯಾಗಿ ನೆಚ್ಚಿಕೊಂಡಿದ್ದ ನನ್ನ ಮನಸ್ಸು ಇದೀಗ ಹೊಸ ತತ್ತ್ವವನ್ನು ಸಹಜವಾಗಿಯೇ ಗ್ರಹಿಸುತ್ತದೆ."

ಹತ್ತಿರದ ಮಾರ್ಗದರ್ಶಕ ಎರಡುಬಾರಿ ಕೇಳುತ್ತಾನೆ : "ಮಹರ್ಷಿಗಳನ್ನು ಏನೋ ಕೇಳಬೇಕು ಅಂತಿರಲಿಲ್ಲವೆ ನೀವು?" ಇದಕ್ಕೆ ಪಾಲ್‌ಬ್ರಂಟನ್ನರ ತೀವ್ರ ಪ್ರತಿಕ್ರಿಯೆ : "ಇಲ್ಲ ನಾನು ಕೇಳುವಂತಹುದು ಏನೂ ಇಲ್ಲ!"- ಎಂದರೆ ಏನಾಯಿತು. ಮಹರ್ಷಿಗಳ ಮೌನಸಾನ್ನಿಧ್ಯದಲ್ಲಿ ಪ್ರಶ್ನೆಗಳೇ ಸತ್ತುಹೋಗಿವೆ.

(ವಿವರಗಳಿಗೆ "ರಮಣಮಹರ್ಷಿ ಮತ್ತು ಅವರ ಸಂದೇಶ" ಎಂಬ ಕೃತಿಯನ್ನು ನೋಡಬಹುದು.)

ಸೋಮರ್‌ಸೆಟ್ ಮಾಮ್, ಜಗದ್ವಿಖ್ಯಾತ ಕಾದಂಬರಿಕಾರರು. ಸಹಸ್ರಾರು ಮೈಲುಗಳ ದೂರದ ಫ್ರಾನ್ಸ್ ದೇಶದಿಂದ ರಮಣರ ಸಂದರ್ಶನಕ್ಕಾಗಿ ಬಂದವರು. ವೃದ್ಧಾಪ್ಯದ ಬಳಲಿಕೆಯಿಂದ ಒಮ್ಮೆ ಅವರು ಆಶ್ರಮದಲ್ಲೇ ಇದ್ದ ಮೇಜರ್ ಚಾಡ್‌ವಿಕ್ ಅವರ ಕೊಠಡಿಯಲ್ಲಿ ಮೂರ್ಛಿತರಾಗಿ ಬಿದ್ದುಬಿಟ್ಟರು. ರಮಣರು ತಾವೇ ಅವರ ಬಳಿಗೆ ಬಂದು ಮೌನವಾಗಿ ಅವರನ್ನೇ ದಿಟ್ಟಿಸಿ ನೋಡುತ್ತಿದ್ದಂತೆಯೇ ಎಚ್ಚತ್ತು ನಮಸ್ಕರಿಸಿ ರಮಣರ ಅನುಕಂಪಭರಿತ ನೇತ್ರಗಳನ್ನೇ ನೋಡುತ್ತ ಒಂದು ಗಂಟೆಯಷ್ಟು ದೀರ್ಘಕಾಲ ಶಾಂತವಾಗಿ ಕುಳಿತುಬಿಟ್ಟರು. ಅವರು ಬಂದದ್ದು ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ಬಯಸಿ. ಮೇಜರ್ ಚಾಡ್‌ವಿಕ್ ಆ ಬಗ್ಗೆ ಮತ್ತೆ ಮತ್ತೆ ನೆನಪು ಮಾಡಿದರು. ಮಾಮ್ ಮೌನವಾಗಿಯೇ ಇದ್ದರು. "ನಮ್ಮ ಹೃದಯಸಂವಾದ ಮುಗಿದಿದೆ. ಎಲ್ಲವೂ ಮೌನದಲ್ಲಿಯೇ ಮುಗಿಯಬೇಕು-ಮುಗಿದಿದೆ' ಎಂದು ಮಹರ್ಷಿಗಳೇ ಮೇಲೆದ್ದು ಹೊರಟರು.

ಇಂಥದೇ ಅನುಭವ ಬಹುಮಂದಿ ಅಧ್ಯಾತ್ಮ ಸಾಧಕರದ್ದು. ಶ್ರೀ ರಮಣರ ಸಾನ್ನಿಧ್ಯದಲ್ಲಿ ಬಾಬುರಾಜೇಂದ್ರಪ್ರಸಾದ್. ರಾಜರ್ಷಿಯೆಂದೇ ಖ್ಯಾತರಾದ ಸಾತ್ವಿಕ ಶಿರೋಮಣಿ. ಸ್ವತಂತ್ರಭಾರತದ ಪ್ರಥಮ ರಾಷ್ಟ್ರಪತಿ. 1938ರ ಆಗಸ್ಟ್ ಅಷ್ಟು ಹಿಂದೆಯೇ, ಜಮನ್‌ಲಾಲ್‌ಬಜಾಜ್ ಮುಂತಾದ ರಾಷ್ಟ್ರಭಕ್ತರೊಡನೆ ಅವರು ಮಹರ್ಷಿಗಳ ಸಾನ್ನಿಧ್ಯವನ್ನು ಬಯಸಿ ಬಂದರು. ಸಂಗಡಿಗರೆಲ್ಲ ಪ್ರಶ್ನೆಗಳನ್ನು ಕೇಳುತ್ತಿದ್ದರೂ ಅವರು ಮಾತ್ರ ಆ ಮೌನಸಾನ್ನಿಧ್ಯದ ಶಾಂತತೆಯನ್ನೇ ಬಯಸಿ

ಮಹರ್ಷಿಗಳ ಪೂರ್ಣ ಅನುಗ್ರಹವನ್ನು ಪಡೆದರು. ಕೇವಲ ಹೃದಯಸಂವಾದದ ಗಾಢಮೌನ.

ಎಲ್ಲರೂ ಇಂಥವರೇ ಎಂದಲ್ಲ, ಕೆಲವು ಸಂಸಾರಿಗಳಿಗೆ ಖಚಿತ ಸೂಚನೆ-ಮಾರ್ಗದರ್ಶನವೇ ಅವಶ್ಯಕ. ಅಂಥವರು ಪ್ರಶ್ನೆಗಳನ್ನು ಕೇಳಲೇಬೇಕೆಂದೂ ಇಲ್ಲ, ಮಹರ್ಷಿಗಳ ಅಪರಿಮಿತ ತೇಜಸ್ಸಿನಲ್ಲಿ ತಾವು ಎಲ್ಲಿ ಮರೆತೇ ಬಿಡುತ್ತೇವೋ ಎಂದು ಚೀಟಿಯಲ್ಲಿ ಪ್ರಶ್ನೆಗಳನ್ನು ಬರೆದಿಟ್ಟುಕೊಂಡವರೂ ಉಂಟು. ಅದನ್ನು ಮಹರ್ಷಿಗಳಿಗೆ ನೀಡುವ ಅಗತ್ಯವೂ ಇರಲಿಲ್ಲ, ಕೇಳುಗನ ಹೃದಯದಲ್ಲೇ ಉತ್ತರ ಸ್ಫುರಿಸುತ್ತಿತ್ತು. ಮಹರ್ಷಿಗಳು ವಿರೂಪಾಕ್ಷಗುಹೆಯಲ್ಲಿದ್ದಾಗ ಕಾಣಲು ಬಂದ ಶ್ರೀ ಶಿವಪ್ರಕಾಶಂಪಿಳ್ಳೆಯವರ ಅನುಭವ ಈ ಮಾದರಿಯದು. ಅಧ್ಯಾತ್ಮಸಾಧನೆಯ ಆಸಕ್ತಿಗೆಂದೇ ತಮ್ಮ ರೆವೆನ್ಯೂ ಇಲಾಖೆಯ ಉದ್ಯೋಗಕ್ಕೆ ರಾಜೀನಾಮೆ ನೀಡಿದವರು. ಅವರ ಪತ್ನಿ ಕಾಲವಾದರು. ಮರುವಿವಾಹದ ಒತ್ತಾಯವೂ ಹಿರಿಯರದು. ಇನ್ನೂ ಮಧ್ಯವಯಸ್ಸು. ಒಬ್ಬ ಹುಡುಗಿಯನ್ನು ಹುಡುಕಿಯಾಗಿತ್ತು. ಪಿಳ್ಳೆಯವರ ಮನಸ್ಸೂ ಡೋಲಾಯಮಾನವಾಗಿತ್ತು. ತಾನು ಬಯಸಿದ ಈ ಹುಡುಗಿಯನ್ನು ಮದುವೆಯಾಗಲೆ? ಎಂಬ ಬಗೆಗೆ ಮಹರ್ಷಿಗಳ ಮಾರ್ಗದರ್ಶನ ಬೇಕಿತ್ತು. ಆದರೆ ಅವರು ಪ್ರಶ್ನೆ ಕೇಳಲೇ ಇಲ್ಲ.

ತಮಗಿಂತ ವಯಸ್ಸಿನಲ್ಲಿ ತುಂಬ ಕಿರಿಯರು 30 ವರ್ಷದ ಹರೆಯ. (1910), ಸ್ಫುರದ್ರೂಪಿ. ಇಂತಹ ರಮಣರ ವೀರವಿರಕ್ತಿಯನ್ನು ವಿಷಯಸುಖದಲ್ಲಿ ತೀವ್ರ ಔದಾಸೀನ್ಯವನ್ನು ಕಣ್ಣಾರೆ ಕಂಡರು. ಇಂತಹ ಅಧ್ಯಾತ್ಮ ಸುಖಮಗ್ನನಾದ ಕೇವಲ ಕೌಪೀನಧಾರಿಯನ್ನು ತಾನು ವಯಸ್ಕನೂ ಸಂಸಾರಸುಖವನ್ನು ಸಾಕಷ್ಟು ಅನುಭವಿಸಿದ ಅನಂತರವೂ ದ್ವಿತೀಯವಿವಾಹಮಾಡಿಕೊಳ್ಳಲೇ ಎಂದು ಪ್ರಶ್ನಿಸುವದು ಎಂಥ ಮೂರ್ಖತನ ಎಂಬ ಒಳ ಅರಿವು ಪಿಳ್ಳೆಯವರ ಒಳಪ್ರಜ್ಞೆಯಲ್ಲೇ ಮೂಡಿಬಂದಿತು. ಆ ಕ್ಷಣದಿಂದಲೇ ತಮ್ಮ ಬದುಕು ಇನ್ನು ಪೂರ್ಣವಾಗಿ ಅಧ್ಯಾತ್ಮಜೀವನಕ್ಕಾಗಿ ಎಂಬ ದೃಢನಿಶ್ಚಯವೂ ಮೂಡಿತು. ಮೌನವಾಗಿ ಮಹರ್ಷಿಗೆ ತಲೆಬಾಗಿ ನಮಸ್ಕರಿಸಿ ತೆರಳಿಬಿಟ್ಟರು. (ಮಹರ್ಷಿಗಳ ಪ್ರಥಮ ಪ್ರಕಟಿತ ಕೃತಿ "ನಾನು ಯಾರು?" ಈ ಮಹನೀಯರ ಶ್ರದ್ಧೆಯ ಫಲವಾಗಿಯೇ ಹೊರಹೊಮ್ಮಿತು.)

ಸರ್ಕಾರಿ ಕಛೇರಿಯಲ್ಲಿ ಅಧಿಕಾರಿಯಾಗಿದ್ದ ರಾಘವಾಚಾರಿಯವರ ಅನುಭವವೂ ಆ ಬಗೆಯದೇ. ಆ ಕಾಲಕ್ಕೆ ದಿವ್ಯಜೀವನ (Theosophy) ಸಂಘದ ಪ್ರಭಾವ ಅನೇಕ ಮಂದಿ ವಿದ್ಯಾವಂತರ ಮೇಲೆ ತುಂಬ ಗಾಢವಾಗಿತ್ತು. ಆ ಬಗ್ಗೆ ಭಗವಾನರ ಅಭಿಪ್ರಾಯವನ್ನು ತಿಳಿಯುವ ಕಾತರ ರಾಘವಚಾರಿಯವರಲ್ಲಿ ಮೂಡಿತು. ತಮ್ಮ ಕೈಯಲ್ಲಿ ಥಿಯೋಸಫಿ ಸಂಘದ ಪ್ರಕಟಣೆಯಾದ ಭಗವದ್ಗೀತೆಯ ಪ್ರತಿಯನ್ನು ಹಿಡಿದು ಭಗವಾನರ ಬಳಿಗೆ ಹೋದರು. ಅವರ ಮನಸ್ಸಿನಲ್ಲಿ ಮೂಡಿದ್ದ ಮೂರು ಪ್ರಶ್ನೆಗಳಲ್ಲಿ ಉಳಿದ ಎರಡೆಂದರೆ: (1) ವೈಯಕ್ತಿಕ ಮಾತುಕತೆಗಾಗಿ ಏಕಾಂತ ಸಂದರ್ಶನವನ್ನು ತನಗೆ ಮಹರ್ಷಿಗಳು ದಯಪಾಲಿಸಬಹುದೆ? (2) ತಮ್ಮ ನಿಜವಾದ ಸ್ವರೂಪವನ್ನು ತಾನು ಕಾಣಲು ಸಾಧ್ಯವಾದೀತೆ?- ಎಂಬುದು.

ಮೂವತ್ತು ಮಂದಿಯಷ್ಟು ಭಕ್ತರ ಸಮೂಹದಲ್ಲಿ ಕುಳಿತಿದ್ದ ಮಹರ್ಷಿಗಳಿಗೆ ನಮಸ್ಕರಿಸಿ ಅವರು ಮೌನವಾಗಿ ಕುಳಿತರು. ಕೆಲವೇ ನಿಮಿಷಗಳಲ್ಲಿ ಉಳಿದೆಲ್ಲರೂ ಅಲ್ಲಿಂದ ತೆರಳಿದರು. ಈಗ ಇದ್ದವರು ತಾವು ಹಾಗೂ ಭಗವಾನರು ಮಾತ್ರ. ಅವರು ಬಯಸಿದ ಏಕಾಂತದ ಸಂದರ್ಶನ ಸಹಜವೆಂಬಂತೆ ಸಿದ್ಧಿಸಿತು. ತಮ್ಮ ಮೌನವನ್ನು ಮುರಿದು, ಮಹರ್ಷಿ, "ನಿಮ್ಮ ಕೈಯಲ್ಲಿರುವದು ಭಗವದ್ಗೀತೆಯಲ್ಲವೆ? ನೀವು ಥಿಯೋಸಫಿಕಲ್ ಸಂಸ್ಥೆಯ ಸದಸ್ಯರೆ? ಅದು ಒಳ್ಳೆಯ ಕೆಲಸ ಮಾಡುತ್ತಿದೆ' ಎಂದುಬಿಟ್ಟರು. ತಮ್ಮ ಅಂತರಂಗದ ಪ್ರಶ್ನೆಗೆ ಹೀಗೆ ಉತ್ತರ ದೊರೆತು ಅವರು ಉತ್ತೇಜಿತರಾಗಿ, ಮೂರನೆಯ ಪ್ರಶ್ನೆಯನ್ನು ಕೇಳಿಯೇಬಿಟ್ಟರು. ಮಹರ್ಷಿ ಮೌನವಾಗಿ ಕುಳಿತಿದ್ದರು. ಬದಿಯ ಗೋಡೆಯ ಮೇಲೆ ದಕ್ಷಿಣಾಮೂರ್ತಿಯ ಚಿತ್ರವಿದ್ದಿತು. ನೋಡನೋಡುತ್ತ ಮಹರ್ಷಿಗಳ ದೇಹ-ಹಾಗೂ ಆ ಚಿತ್ರ ಮಾಯವಾಗಿಬಿಟ್ಟವು. ಗೋಡೆಯೂ ಇಲ್ಲವಾಯಿತು. ಬೆಳ್ಳಗಿನ ಆಕಾಶದ- ಬೆಳ್ಳನೆ ಮೋಡದಂತೆ ಎಲ್ಲವೂ ತೋರಿಬಂದು ರಾಘವಾಚಾರಿ ವಿಸ್ಮಯ ಸಂಭ್ರಮದಲ್ಲಿ ಮುಳುಗಿಹೋದರು. ಸ್ವಲ್ಪ ಹೊತ್ತಿನ ನಂತರ. ಮೆಲ್ಲ ಮೆಲ್ಲನೆ ತಾವು ಹಿಂದೆ ಕಂಡಿದ್ದ ಆಕೃತಿಗಳೆಲ್ಲ ಮೂಡಿಬಂದವು- ಮೊದಲು ಅತ್ಯಂತ ಪ್ರಖರವಾದ ಪ್ರಕಾಶ- ಥಟಕ್ಕನೆ ತಾವು ಕಣ್ಣುಮುಚ್ಚಿಕೊಳ್ಳುವಂತೆ- ಅನಂತರವೇ ದಕ್ಷಿಣಾಮೂರ್ತಿ ಹಾಗೂ ಮಹರ್ಷಿಗಳ

ಆಕೃತಿಗಳು. ಒಂದು ತಿಂಗಳ ನಂತರ, ಮಹರ್ಷಿಯನ್ನು ಏಕಾಂತದಲ್ಲಿ ಕಂಡು ತಮ್ಮ ಅನುಭವದ ಅರ್ಥವನ್ನು ಅವರಿಂದಲೇ ಪಡೆದುಕೊಂಡರು. ''ನೀವು ನನ್ನ ಸ್ವರೂಪವನ್ನು ನೋಡಬಯಸಿದಿರಿ. ನಾನು ಅದೃಶ್ಯನಾದುದನ್ನು ನೋಡಿದಿರಿ. ನನಗೆ ರೂಪವಿಲ್ಲ, ಆದುದರಿಂದ ನಿಮ್ಮ ಅನುಭವವೇ ನಿಜವಾದ ಸತ್ಯವಾಗಿರ ಬಹುದು'' ಎಂದರು: ಮುಂದೆ ''ನೋಡುವವನು, ವಿಚಾರ ಮಾಡುವವನು ಆದ ಆ ''ನಾನು ಯಾರು? ಆತನ ವಾಸಸ್ಥಳ ಯಾವದು ಕಂಡುಹಿಡಿಯಿರಿ'' ಎಂದು ಆಚಾರ್ಯರನ್ನು ಅವರ ಸ್ವಸ್ವರೂಪದ ಕಡೆಗೆ ಸಹಜವಾಗಿ ತಿರುಗಿಸಿದರು.

ಹೀಗೆ, ತಾವು ನಾಮ-ರೂಪ-ಕಾಲ-ದೇಶಗಳಿಗೆ ಸೀಮಿತವಾದ ದೇಹವಲ್ಲ, ವಿಶ್ವವ್ಯಾಪಕವಾದ ಪರಿಶುದ್ಧಪ್ರಜ್ಞೆ ಎಂಬುದನ್ನು ಬಗೆಬಗೆಯಾಗಿ ತಮ್ಮನ್ನು ಕಾಣಲು ಬಂದವರಿಗೆ ಅವರು ಸೂಚಿಸುತ್ತಲೇ ಇದ್ದರು. ಮಾತ್ರವಲ್ಲ ಅದೇ ಉಳಿದೆಲ್ಲರ ಸ್ವಸ್ವರೂಪ ಎಂದು ಸ್ಪಷ್ಟಪಡಿಸುತ್ತಿದ್ದರು.

ಬೇರೆ ಊರಿಗೆ ವರ್ಗವಾಗಿರುವದರಿಂದ ಭಗವಾನರಿಂದ ದೂರಹೋಗಲೇ ಬೇಕಿದೆ ಎಂದು ದುಃಖಿತನಾದ ಸುಂದರೇಶಅಯ್ಯರ್‌ನ್ನು ಕುರಿತು ನಲ್ವತ್ತು ವರ್ಷದಿಂದ ನನ್ನ ಬೋಧನೆ ಕೇಳುತ್ತಿದ್ದೂ ಹೀಗೆ ಹೇಳುವಿಯಾ? ಸ್ವಾಮಿ ಹೋಗುವದೆಲ್ಲಿಗೆ? ಬರುವದೆಲ್ಲಿಗೆ? ಎನ್ನುವರು.

ಮಹರ್ಷಿಗಳ ಸಾನ್ನಿಧ್ಯದ ಪರಮಶಾಂತಿಯಲ್ಲಿದ್ದು ಅಮೆರಿಕೆಗೆ ಹಿಂತಿರುಗುವಾಗ ಕಂಬನಿ ಸುರಿಸುವ ಶ್ರೀಮತಿ ನೋಯೆಯನ್ನು ಸಮಾಧಾನ ಮಾಡುತ್ತ ಅವರೆನ್ನುತ್ತಾರೆ : ''ಯಾಕೆ ಅಳುತ್ತೀ ? ನೀನು ಎಲ್ಲೆಲ್ಲಿ ಹೋಗುತ್ತೀಯೋ ಅಲ್ಲಲ್ಲಿ ನಾನು ನಿನ್ನೊಂದಿಗೆ ಇರುತ್ತೇನೆ.''

ಪ್ರಶ್ನೆಗಳಿಗೆ ಉತ್ತರಗಳು, ಸಮಸ್ಯೆಗಳಿಗೆ ಪರಿಹಾರಗಳು- ಸಾಧಕರ ಹೃದಯದಿಂದಲೇ ಸ್ಫುರಿಸುವಂತೆ ಮಾಡುವದು, ಅಥವಾ ಅವು ಸಂಪೂರ್ಣವಾಗಿ ಇಲ್ಲವಾಗುವಂತೆ ಪ್ರಚೋದಿಸುವದು- ರಮಣಮಹರ್ಷಿಗಳಿಗೆ ಸಹಜವಾದದ್ದು- ಎಂದರೆ ಅಂತಿಮಗುರಿಯಾದ ಆತ್ಮಸ್ವರೂಪದಲ್ಲಿ ಸಾಧಕರು ನೆಲೆನಿಲ್ಲುವಂತಾಗಬೇಕು. ತಮ್ಮ ಗುರುವನ್ನು ಪವಾಡಪುರುಷನೆಂದೂ, ತಮ್ಮೆಲ್ಲ ಚಿಂತೆಗಳನ್ನು ಮಂತ್ರಸದೃಶವಾಗಿ ಆತ ಪರಿಹರಿಸಬೇಕು- ಎಂದೂ

ನಿರೀಕ್ಷಿಸಬಾರದು- ಎಂದು ಅವರ ಕಾಳಜಿ. ಆತ್ಮನಿಷ್ಠನ ಸಾನ್ನಿಧ್ಯ- ಅನುಗ್ರಹ- ಕಾಲ- ದೇಶ- ದೇಶಗಳ ಪರಿಮಿತಿಯನ್ನು ಮೀರಿ ನಿರಂತರವಾಗಿ ಹರಿಯುವ ಹೊಳೆ- ಅದು ಸಾಧಕರ ಉದ್ಧಾರಕ್ಕೆ ಸದಾ ಸಿದ್ಧ. ಆದರೆ ಅದನ್ನು ಪ್ರಕಟಪಡಿಸಿ ಸ್ವಪ್ರಚಾರದ ಮೋಹಕ್ಕೆ ಬಲಿಯಾಗುವದು ಆತ್ಮನಿಷ್ಠನಿಗೆ ಸಲ್ಲದು. ಆತನನ್ನು ಮಾಂತ್ರಿಕನಂತೆ ಪರಿಗಣಿಸುವ ದೌರ್ಬಲ್ಯ ಸಾಧಕನಿಗೆ ಸಲ್ಲದು. ಅಂತಹ ಮೋಹ-ದೌರ್ಬಲ್ಯಗಳು ಅಧ್ಯಾತ್ಮಸಾಧನೆಯಲ್ಲಿ ಕಂಟಕಗಳೇ ಸರಿ- ಎಂದು ಅವರ ಖಚಿತ ಅಭಿಪ್ರಾಯ. ಸೂರ್ಯನ ಸಾನ್ನಿಧ್ಯದಲ್ಲಿ ಸಾವಿರಕಮಲಗಳು ಅರಳುತ್ತವೆ. ಸಕಲ ಲೋಕವ್ಯಾಪಾರಗಳೂ ಪ್ರಾರಂಭವಾಗುತ್ತವೆ. ಆದರೆ ಅದಕ್ಕಾಗಿಯೇ ಆ ಸಂಕಲ್ಪದಿಂದಲೇ ಸೂರ್ಯನು ಬೆಳಗುವದಿಲ್ಲವಷ್ಟೆ? ಬೆಳಗುವದು, ಅಪರಿಮಿತವಾಗಿ ಬೆಳಗುವದು- ಸೂರ್ಯನ ಸಹಜಸ್ವಭಾವ. ಹಾಗೆ ನೋಡಿದರೆ ಅವನು ಆತ್ಮಸೂರ್ಯನಾಗಿ ಎಲ್ಲರ ಹೃದಯದಲ್ಲೂ ಬೆಳಗುತ್ತಿದ್ದಾನೆ. ಕತ್ತಲೆಯಲ್ಲೂ- ಬೆಳಗಿನಲ್ಲೂ- ಎಚ್ಚರ, ಕನಸು, ನಿದ್ರೆಗಳಲ್ಲೂ ಅವನಿದ್ದಾನೆ. ಸದ್ಗುರುವೂ ಹಾಗೆಯೇ. ನಿಜದಲ್ಲಿ ಅವನು ಸಾಧಕನ ಸಮಸ್ತಸಾಧನೆಯನ್ನು ಬೆಳಗುತ್ತಾನೆ. ಕಂಟಕಗಳೇನಿದ್ದರೂ ಹೇಗೆ ಹೇಗೊ ಪರಿಹರಿಸಿ ಅವನ ಅಂತರಂಗದಲ್ಲೇ ಬೆಳಕಾಗಿ ಪ್ರೇರಿಸುತ್ತಿದ್ದಾನೆ- ಎಂಬುದನ್ನು ಸಾಧಕರು ಅರಿಯಬೇಕು, ಅನುಭವಕ್ಕೆ ತಂದುಕೊಳ್ಳಬೇಕು-ಎಂಬುದನ್ನೇ ಅವರು ಸ್ಪಷ್ಟಪಡಿಸುತ್ತಾರೆ. ಈ ಶ್ರದ್ಧೆ ಬೆಳೆದಾಗ ಅವರು ಆತಂಕ-ಉದ್ವೇಗ-ಹತಾಶೆಗಳಿಗೆ ಈಡಾಗುವದಿಲ್ಲ. ಗುರು ಕೇವಲ ದೇಹಕ್ಕೆ ಸೀಮಿತನಲ್ಲ. ಅವನು ದೇಹತ್ಯಾಗದ ಅನಿವಾರ್ಯ ದೇಹಧರ್ಮಕ್ಕೆ ಈಡಾದಾಗಲೂ ಸಾಧಕನನ್ನು ಕತ್ತಲೆ ಕವಿಯುವದಿಲ್ಲ. ಸತ್ಯವೇನೆಂದರೆ: ದೇಹವಿದ್ದುದಾಗಲೀ ಬಿದ್ದುದಾಗಲೀ ಸದ್ಗುರುವಿನ ಕೃಪೆಗೆ ಯಾವ ಬಾಧೆಯನ್ನೂ- ತಡೆಯನ್ನೂ ತರುವುದಿಲ್ಲ- ಎಂದು ಅರಿತಾಗ ಸಾಧಕರ ಮನಸ್ಸು ಶಮನಗೊಳ್ಳುತ್ತದೆ. ಉತ್ಸಾಹ-ಉಲ್ಲಾಸಗಳನ್ನು ಕಳೆದುಕೊಂಡು ಹತಾಶವಾಗುವದಿಲ್ಲ- ಎಂದೇ ರಮಣರ ಬೋಧನೆ. ಹೀಗಾಗಿ ಅವರು ಸಂಕಲ್ಪ ಪೂರ್ವಕ ಪವಾಡಗಳನ್ನು ದೃಢವಾಗಿ ತಿರಸ್ಕರಿಸುತ್ತಿದ್ದರು. ಅವುಗಳಿಗೆ ಮರುಳಾಗದಂತೆ ಸಾಧಕರನ್ನು ಹಾಗೂ ಸಂಸಾರಿಗಳನ್ನು ಎಚ್ಚರಿಸುತ್ತಿದ್ದರು. ಅವರ ಸಾನ್ನಿಧ್ಯದಲ್ಲಿ ನಿರಂತರವಾಗಿ ನಡೆದುಹೋಗುತ್ತಿದ್ದ ಅಲೌಕಿಕ ಎನಿಸುವಂತಹ

ಘಟನೆಗಳನ್ನು ಆತ್ಮನಿಷ್ಠನ ಸಾನ್ನಿಧ್ಯದಲ್ಲಿ ಅವು ಸಹಜ. ಆತನಿಗೂ ಅದರ- ಎಂದರೆ ಪವಾಡಮಾಡುತ್ತಿದ್ದೇನೆ ಎಂಬ ಅರಿವಿರುವದಿಲ್ಲ. ಅಷ್ಟಸಿದ್ಧಿಗಳು ಅವನನ್ನು ಹಿಂಬಾಲಿಸಿಯೇ ಇವೆ. ಅವನೇನೂ ಅವುಗಳನ್ನು ಬೆನ್ನಟ್ಟಿಲ್ಲ ಎನ್ನುತ್ತಿದ್ದರು. ಹೀಗಾಗಿ ಅವುಗಳನ್ನು ನಾನೇ ಮಾಡಿದೆ ಎಂದೂ- ಅವರು ಸಾರಿಕೊಂಡು ಪ್ರಚಾರ ಪಡೆಯಲು ಬಯಸಲಿಲ್ಲ. ಪವಾಡಸದೃಶಘಟನೆಗಳಂತೂ ಸಹಜವಾಗಿ ನಡೆದವು. ಅವರ ದೇಹಾವಸಾನದ ನಂತರವೂ ಇನ್ನಷ್ಟು ಪ್ರಮಾಣದಲ್ಲಿ ನಡೆಯುತ್ತಲೇ ಇವೆ. ಜನಪ್ರಿಯ ಪವಾಡಗಳ ಬಗೆಗೆ, ಪವಾಡಪುರುಷರ ಬಗೆಗೆ ಇಂತಹ ಎಚ್ಚರವನ್ನೂ ಆರೋಗ್ಯಕರದೃಷ್ಟಿಯನ್ನು ಬೆಳೆಸುವದು ರಮಣರಂತಹ ಧೀರಗುರುವಿಗೆ ಮಾತ್ರ ಸಾಧ್ಯ! ಅಹಂ ಅನ್ನು ಪೂರ್ಣವಾಗಿ ಇಲ್ಲಗಳಿಸಿದ ಜೀವನ್ಮುಕ್ತನಿಗೆ ಮಾತ್ರ ಸಾಧ್ಯ. ತಮ್ಮ ಜೀವನದಲ್ಲಿ ರಮಣರ ಕೃಪೆ ಹರಿದುಬಂದುದನ್ನು ಪ್ರಾಂಜಲಮನಸ್ಸಿನಿಂದ ವಿವರಿಸುವ ನೂರಾರು ಗ್ರಂಥಗಳನ್ನು-ಸಹಸ್ರಾರು ಲೇಖನಗಳನ್ನು ವಿಶ್ವದಾದ್ಯಂತ ರಮಣಾನುಯಾಯಿಗಳು ಬರೆದಿದ್ದಾರೆ, ಬರೆಯುತ್ತಲೇ ಇದ್ದಾರೆ! ಸದ್ಗುರುವಿನ ಅಪಾರಕಾರುಣ್ಯ- ಅನುಗ್ರಹಗಳಿಗೆ ಅವರ ಅದಮ್ಯಕೃತಜ್ಞತೆಯ ಕಾಣಿಕೆ- ಎಂದೇ ಅವುಗಳನ್ನು ಸ್ವೀಕರಿಸಬೇಕು. ಹಾಗೆಂದೇ ಭಗವಾನರು ಬಯಸುತ್ತಾರೆ!

ಪ್ರಾಕಾಮ್ಯ, ಈಶಿತ್ವ, ಪ್ರಾಪ್ತಿ ಇತ್ಯಾದಿಯಾಗಿ ಅಂತಹ ಅಲೌಕಿಕಶಕ್ತಿಯನ್ನು ಪತಂಜಲಿಗಳು ತಮ್ಮ ಯೋಗಸೂತ್ರಗಳಲ್ಲಿ ಬಣ್ಣಿಸುತ್ತಾರಷ್ಟೆ! ರಮಣಮಹರ್ಷಿಗಳಲ್ಲಿ ಇಂತಹ ಊರ್ಜಾವೈಭವ ಉಸಿರಾಟದಷ್ಟು ಸಹಜವಾಗಿತ್ತು. ಒಂದೆರಡು ಉದಾಹರಣೆಗಳನ್ನು ಮಾತ್ರ ಇಲ್ಲಿ ಸೂಚಿಸಲು ಸಾಧ್ಯ.

ಕಾವ್ಯಕಂಠ ಗಣಪತಿಮುನಿಗಳು ಅತ್ಯಂತ ಉಗ್ರಮಂತ್ರಸಾಧಕರು. ಮದ್ರಾಸ್ ಸಮೀಪದ ತಿರುವೊಟ್ಟಿಯೂರಿನಲ್ಲಿ ಹದಿನೆಂಟು ದಿನಗಳ ಮೌನ ತಪಸ್ಸಿನಲ್ಲಿ ತೊಡಗಿದ್ದರು. ಸಾಧನೆಯಲ್ಲಿ ಅವರ ತಲೆ ಇನ್ನೇನು ಸಿಡಿದುಹೋಗುವದೋ ಎಂಬಂತೆ ಕಾದುಹೋಯಿತು. ಹದಿನೆಂಟನೆಯ ದಿನ ಮಹರ್ಷಿಗಳು ಅವರ ಪಕ್ಕದಲ್ಲಿಯೇ ಕುಳಿತು ತಲೆಯನ್ನು ತಟ್ಟಿ ತಟ್ಟಿ ಮಲಗಿಸಿದರು. ಮುನಿ ತಕ್ಷಣ ಈ ಹಸ್ತದೀಕ್ಷೆಯಿಂದ (?) ಶಾಂತರಾಗಿಬಿಟ್ಟರು. ವಾಸ್ತವವಾಗಿ ಅಂದು ಮಹರ್ಷಿ

ತಿರುವಣ್ಣಾಮಲೆಯಲ್ಲಿಯೇ ಎಂದಿನಂತೆ ಮಲಗಿದ್ದರು. ಅವರು ಎಂದೂ ಆ ಸ್ಥಳವನ್ನು ಬಿಟ್ಟು ತೆರಳಿದುದೇ ಇಲ್ಲ. ಈ ಪ್ರಸಂಗವನ್ನು 1926ರ ಅಕ್ಟೋಬರ್ 17ರಂದು, ಶಾಸ್ತ್ರಿಗಳು ವಿವರಿಸಿದಾಗ ಮಹರ್ಷಿ- "ಹೌದು ಹೌದು ಅಂದು ಮಲಗಿಯೇ ಇದ್ದೆ. ನನ್ನ ದೇಹ ಮೇಲೆ ಮೇಲೆ ಹೋದ ಅನುಭವವಾಯಿತು. ಎಲ್ಲ ವಸ್ತುಗಳೂ ಮರೆಯಾಯಿತು. ಬರಿಯ ಬೆಳಕು ಆವರಿಸಿತ್ತು. ಅನಂತರ ಮೆಲ್ಲಮೆಲ್ಲನೆ ದೇಹ ಇಳಿಯಿತು..." ಇತ್ಯಾದಿ ತಿರುವೊಟ್ಟಿಯೂರು ಅದರ ಹೆದ್ದಾರಿ, ಗಣಪತಿದೇವಾಲಯ, ಮುನಿಗಳೊಡನೆ ಮಾತಾಡಿದುದು, ಏನೋ ಮಾಡಿದುದು ಎಲ್ಲವನ್ನೂ ಯಥಾವತ್ತಾಗಿ ವಿವರಿಸಿದರು. ಅದನ್ನು ಅಂದೇ ಪಳನಿಸ್ವಾಮಿಗೆ ಹೇಳಿದೆನಲ್ಲಾ! ಎಂದೂ ಸೇರಿಸಿದರು. ಅತಿ ಸಹಜ ಘಟನೆ ಅದು-ಎಂಬಂತೆ. ಅವರು ಎಂದೂ ತಿರುವೊಟ್ಟಿಯೂರನ್ನು ಕಂಡವರಲ್ಲ!

ರಮಣಾಶ್ರಮದ ಓಲ್ಡ್‌ಹಾಲ್‌ನಲ್ಲಿ ಮಲಗಿರುತ್ತಾರೆ. ಅದೇ ಕಾಲದಲ್ಲಿ ಪಂಜಾಬಿನ ಭಕ್ತರೊಬ್ಬರಿಗೆ ಅವರ ಮನೆಯಲ್ಲೇ ದರ್ಶನ ನೀಡುತ್ತಾರೆ. 1950ರಲ್ಲಿಯೇ ಅವರ ದೇಹಾವಸಾನವಾಯಿತಷ್ಟೆ? (14, ಏಪ್ರಿಲ್ 1950). ಆದರೆ 1955ರಲ್ಲಿ, 1966ರಲ್ಲಿ, ಅವರು ಪೆನ್ಸಿಲ್‌ವೇನಿಯಾದಲ್ಲಿ ನ್ಯೂಯಾರ್ಕಿನಲ್ಲಿ ಭಕ್ತರಿಗೆ ದರ್ಶನವಿತ್ತರು. ಮಾರ್ಗದರ್ಶನಮಾಡಿದರು. ಒಬ್ಬ ಭಕ್ತಳಿಗೆ ನಡೆಯಬೇಕಾಗಿದ್ದ ಸಿಸೇರಿಯನ್ ಆಪರೇಷನ್ ತಪ್ಪಿಸಿ, ಗುಣಪಡಿಸಿದರು. ಮತ್ತೊಬ್ಬ ಭಕ್ತೆಯ ಕ್ಯಾನ್ಸರ್‌ರೋಗವನ್ನು ವಾಸಿಮಾಡಿದರು; ಇಬ್ಬರು ಮೂವರಿಗೆ ಆಗುವಷ್ಟಿದ್ದ ಆಹಾರ ಮೂವತ್ತು ಮಂದಿಗೆ ಹೊಟ್ಟೆ ತುಂಬುವಷ್ಟಾಯಿತು! ಒಂದು ಕಾಸು ಇಲ್ಲದೆ ಅಸಹಾಯಕರಾಗಿ ಗಂಗಾನದಿಯ ದಡದಲ್ಲಿ ಕುಳಿತ ಭಕ್ತರೊಬ್ಬರನ್ನು ಸುಸಂಸ್ಕೃತ ಕಾಶ್ಮೀರೀ ಮಹಿಳೆಯರು ಮನೆಗೆ ಆಹ್ವಾನಿಸಿ, ಸತ್ಕರಿಸಿ, ಪ್ರಯಾಣದ ವೆಚ್ಚವನ್ನಿತ್ತು ರಮಣರ ಬಳಿಗೆ ಕಳುಹಿಸಿಕೊಟ್ಟರು. ಮೈಲಿಬೇನೆಯಿಂದ ಎರಡೂ ಕಣ್ಣು ಕಳೆದುಕೊಂಡ ಅಂಧಬಾಲಕನಿಗೆ ದೃಷ್ಟಿದಾನಮಾಡುವ ಪ್ರೇರಣೆಯನ್ನು ಒಬ್ಬ ವೈದ್ಯರಲ್ಲಿ ಉಂಟುಮಾಡಿದರು; ಆಳವಾಗಿ ಬಾವಿತೋಡುತ್ತಿದ್ದ ಭಕ್ತ ಜೋಲಿ ಹೊಡೆದು ಅದರಲ್ಲೇ ಬಿದ್ದಾಗ ಯಾರೋ ಕೈಗಳನ್ನು ಹಿಡಿದು ಸೆಳೆದುಕೊಂಡರು, ಮೇಲೆ ಬಂದಾಗ, ಬೆಳಕಿನ ಕಿರಣವೊಂದಲ್ಲದೆ ಬೇರೇನೂ ಕಾಣಲಿಲ್ಲ; ಆನೆಕಾಲುರೋಗದಿಂದ ಮರಗಟ್ಟಿದ ಒಬ್ಬನನ್ನು ಕನಸಿನಲ್ಲೆಂಬಂತೆ ದರ್ಶನವಿತ್ತು

ಕಾಲುಸವರಿ ಸರಿಪಡಿಸಿದರು; ಜರ್ಮನರು ಸೆರೆಹಿಡಿದು ಜೈಲಿನಲ್ಲಿ ಕೊಳೆಹಾಕಿದ್ದ ಒಬ್ಬ ಫ್ರೆಂಚ್ ಭಕ್ತನ ಆಸರೆಯೆಂದರೆ ಆತನ ಹೆಂಡತಿ ತಂದುಕೊಟ್ಟ ಭಗವಾನರ ಭಾವಚಿತ್ರ. ಮರುದಿನವೇ ಅನಿರೀಕ್ಷಿತವಾಗಿ ಸೆರೆಮನೆಯ ಬಾಗಿಲು ತೆರೆಯಿತು. ಕಾವಲುಗಾರ ಅವರನ್ನು ಹೊರಗೆ ಕರೆದೊಯ್ದು 'ಗಲ್ಲಿಗೆ ಏರಿಸಲು ಕರೆದೊಯ್ಯುತ್ತಿರಬೇಕು' ಎಂದುಕೊಂಡ ಆತನನ್ನು ಸುಸಜ್ಜಿತ ಆಸ್ಪತ್ರೆಯಲ್ಲಿ ವಿಶ್ರಾಂತಿಗಾಗಿ ಸೇರಿಸಿದ!

''ಆ ಕಾಲದಲ್ಲಿ ಆಶ್ರಮದ ಅಡಿಗೆಮನೆಯೆಂದರೆ ಪುಟ್ಟಗುಡಿಸಲು. ಮಳೆ ಬಂದು ಸೋರಿ ಪದಾರ್ಥಗಳನ್ನಿರಿಸಿದ್ದ ತಗಡಿನ ಡಬ್ಬಿಗಳೆಲ್ಲ ತುಕ್ಕುಹಿಡಿದವು. ಒಂದಿಷ್ಟು ಪಿಂಗಾಣಿಜಾರ್‌ಗಳಿದ್ದಿದ್ದರೆ! ಎಂದು ಅಡಿಗೆಮಾಡುತ್ತಿದ್ದ ಶಾಂತಮ್ಮ ದೂರಿದಳು. ಕೆಲದಿನಗಳಲ್ಲಿ ಯಾವುದೋ ಊರಿನ ರೇಲ್ವೇಸ್ಟೇಷನ್‌ಮಾಸ್ಟರು ಆರು ಪಿಂಗಾಣಿಜಾರ್‌ಗಳ ಒಂದು ಪೆಟ್ಟಿಗೆ ಕಳುಹಿಸಿದರು. ಯಾಕೆ-ಏನು-ತಿಳಿಯದು! ಅಂತೂ ಅವು ಶಾಂತಮ್ಮನಿಗೆ ತಲುಪಿದವು!

ಇಂತಹ ಘಟನೆಗಳನ್ನು ತಾರ್ಕಿಕವಾಗಿ ವಿವರಿಸಲಾಗದು. ಭಗವಾನರು ಅವನ್ನು ಪವಾಡ ಎಂದೂ ಹೇಳರು. ಎಲ್ಲವೂ ಸಹಜ-ಅದರಲ್ಲೇನಿದೆ? ಎಂದು ನಕ್ಕುಬಿಡುತ್ತಾರೆ. ಅವು ನಿಮ್ಮದೇ ಹೃದಯದ ತೀವ್ರ ಬಯಕೆ ಇದ್ದೀತು- ಎಂದು ಬಿಡುತ್ತಾರೆ.

ಕೇವಲ ಮುಗ್ಧಭಕ್ತರಿಗೆ ಮಾತ್ರವಲ್ಲ, ತಿರುವಾಂಕೂರಿನ ದಿವಾನರಾಗಿದ್ದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ್ ಅಂತಹ ವಿದ್ವನ್ಮಣಿಗಳಿಗೂ ಬೆರಗು ಗೊಳಿಸುವ ಅನುಭವಗಳಾಗಿವೆ. ಇವುಗಳ ಪಟ್ಟಿ ಬಹು ದೊಡ್ಡದು. ಭಗವಾನರ ದೇಹಾವಸಾನದ ನಂತರವೂ, ಎಂದೂ ರಮಣರನ್ನು ಕಾಣದ, ಕೇಳದ, ದೇಶ-ವಿದೇಶಗಳ ಸಾಧಕರಿಗೂ ಅಲೌಕಿಕ ಅನುಭವಗಳಾಗಿವೆ. ಆದರೆ ಇಲ್ಲಿ ಹೇಳಬೇಕಾದ ಮುಖ್ಯವಾದ ಮಾತೆಂದರೆ ಮಹರ್ಷಿ ಇವುಗಳು ತಮ್ಮಿಂದ ಘಟಿಸಿದವು ಎಂದು ಪ್ರಕಟಿಸಿಕೊಳ್ಳದೇ ಇರುವದು. ''ಯಾವ ಮಹಾಶಕ್ತಿ ನನ್ನನ್ನು ರೂಪಿಸುತ್ತಿದೆಯೋ ಅದೇ ಶಕ್ತಿ ನಿಮ್ಮೆಲ್ಲರ ಬದುಕಿನ ಬೆಳಕು. ಅದರಲ್ಲಿ ಶ್ರದ್ಧೆಯಿಡಿ''. ಎಂದುಬಿಡುತ್ತಾರೆ. ''ನಿಮ್ಮ ಪುಟ್ಟ ಹೃದಯದಲ್ಲೇ ಸಮಸ್ತ ಜಗತ್ತೂ ಅಡಗಿದೆಯಲ್ಲಾ, ಅದರ ನಿಯಾಮಕನೂ ಅಲ್ಲಿಯೇ ಇರುವನಲ್ಲಾ, ಇದಕ್ಕಿಂತ ದೊಡ್ಡಪವಾಡ

ಬೇಕೆ''? ಎಂದು ನಗುತ್ತಾರೆ! ತುಂಬ ಹೃದಯಂಗಮವಾದ ಅವರ ಭರವಸೆ ಹೀಗಿದೆ :

''ರೈಲು ನಿಮ್ಮ ಭಾರವನ್ನು ಹೊತ್ತಿರುವಾಗ, ನೀವು ಏಕೆ ನಿಮ್ಮ ಟ್ರಂಕನ್ನು ತಲೆಯ ಮೇಲೆ ಹೊರುತ್ತೀರಿ. ನೆಮ್ಮದಿಯಾಗಿ ಕುಳಿತುಕೊಳ್ಳಿ- ಕೊಂಡೊಯ್ಯು ತ್ತಿರುವ ರೈಲಿಗೆ ನಿಮ್ಮ ಟ್ರಂಕು ಭಾರವೆ? ಶಾಂತವಾಗಿರಿ. ಎಲ್ಲವೂ ಭಗವಂತನ ಇಚ್ಛೆಯಂತೆಯೇ ನಡೆಯುತ್ತದೆ''.

''ಯೋಗಕ್ಷೇಮಂ ವಹಾಮ್ಯಹಂ'' ಎಂದಲ್ಲವೆ, ಭಗವಂತನ-ಭಗವಾನರ ಭರವಸೆ ? ಈ ಚಿಂತನೆ ನಿಮ್ಮಲ್ಲಿ ಸ್ಫುರಿಸುತ್ತಿರುವಂತೆಯೇ ರಮಣಮಹರ್ಷಿಗಳು ಮಂದಹಾಸ ಬೀರುತ್ತಾರೆ: ನಿಮ್ಮ ಆತ್ಮವೇ ನಿಮ್ಮ ಗುರು, ಅವನೇ ಈಶ್ವರ !

''ಈಶ್ವರೋ ಗುರುರಾತ್ಮೇತಿ ಮೂರ್ತಿಭೇದವಿಭಾಗಿನೇ
ವ್ಯೋಮವತ್ ವ್ಯಾಪ್ತದೇಹಾಯ ದಕ್ಷಿಣಾಮೂರ್ತಯೇ ನಮಃ''

## 13. ಕರುಣಾಪೂರ್ಣಸುಧಾಬ್ಧಿ

ಅಧ್ಯಾತ್ಮಜಗತ್ತಿನಲ್ಲಿ ಸಿದ್ಧಪುರುಷರು-ಆತ್ಮಜ್ಞಾನಿಗಳು, ಸ್ವಭಾವದಲ್ಲಿ ನಿಷ್ಠುರರು, ಸುಲಭಸಾಧ್ಯರಲ್ಲ- ಎಂಬ ಭಾವನೆ ಉಂಟು. ಲೋಕಜೀವನಕ್ಕೆ ಅಂಟಿಕೊಂಡ ಜೀವರುಗಳ ಬಗೆಗೆ ಅವರ ತಿರಸ್ಕಾರ, ಲೋಕಜೀವನದ ಬಗೆಗೆ ಅವರ ಔದಾಸೀನ್ಯ, ಇಂಥ ಭಾವನೆಗೆ ಕಾರಣವಿರಬಹುದು. ಅಥವಾ, ಭವಸಾಗರವನ್ನು ದಾಟಿದ ತಾವು ಬಹು ಮೇಲುಮಟ್ಟದ ಸಿದ್ಧಪುರುಷರಾದುದರಿಂದ ಜನಸಾಮಾನ್ಯರೊಡನೆ ಸಲಿಗೆಯಿಂದ ಬೆರೆಯಬಾರದು- ಎಂಬ ಆತಂಕಯುಕ್ತ ಅಂಜಿಕೆ ಸಹ ಕಾರಣವಿರಬಹುದು ! ಆದರೆ ಇವೆಲ್ಲ ''ಅಹಂ'' (ಇಗೋ) ನ ವಿವಿಧ ರೂಪಾಂತರಗಳಷ್ಟೆ. ಹಾಗೆ ಭಾವಿಸುವ ಸಿದ್ಧಪುರುಷನೆಂದು ಸ್ವಯಂಘೋಷಿಸಿ ಕೊಳ್ಳುವ ವ್ಯಕ್ತಿ ನಿಜದಲ್ಲಿ ಪರಿಪಕ್ವನಾಗಿಲ್ಲ- ಸರ್ವಾತ್ಮಭಾವದಲ್ಲಿ ನೆಲೆನಿಂತಿಲ್ಲ. ಆದರೆ ಶ್ರೀ ರಾಮಕೃಷ್ಣರು, ಶ್ರೀ ರಮಣಮಹರ್ಷಿಗಳಂತಹ ಜೀವನ್ಮುಕ್ತರು ತಮ್ಮ ಭಕ್ತಸಮುದಾಯದಿಂದ ದೂರವಿರಲು ಬಯಿಸಿದವರೇ ಅಲ್ಲ. ಆತ್ಮನಿಷ್ಠರಾಗಿ - ನಿಜದ ನೆಲೆಯಲ್ಲಿ ನಿಂತವರಾದರೂ, ''ಸದ್ಭಕ್ತವೃಂದ ಪರೀವೃತಾಯ''ರಾಗಿ ಇರುತ್ತಾ

ಸಾನ್ನಿಧ್ಯಮಾತ್ರದಿಂದಲೇ ಅವರ ಭವದ ಬೇಗೆಯನ್ನು ಸಂತೈಸುವ ಔದಾರ್ಯ - ಕಾರುಣ್ಯ ಅವರದ್ದಾಗಿತ್ತು. ಅವರ ಈ ಕಾರುಣ್ಯ ಮಾನವಲೋಕಕ್ಕೆ ಮಾತ್ರವಲ್ಲ, ಪಶು-ಪ್ರಾಣಿ ಪ್ರಪಂಚಕ್ಕೂ ಹರಡಿತ್ತು. ಅವರ ಈ ಸಹಜಗುಣವನ್ನು ಕಾರುಣ್ಯ ಮಾತ್ರ ಎಂದು ಸೀಮಿತಗೊಳಿಸುವುದಕ್ಕಿಂತ ಅದು ಅವರ ''ಸರ್ವಾತ್ಮಭಾವದ'' ಆಧ್ಯಾತ್ಮದ ನೆಲೆ- ಎಂದೇ ತಿಳಿಯಬೇಕು. ''ಶುನಿ ಚೈವ ಶ್ವಪಾಕೇ ಚ ಪಂಡಿತಾಃ ಸಮದರ್ಶಿನಃ'' ಎಂಬ ಗೀತಾವಾಕ್ಯದ ಅಂತರಾರ್ಥ : ಇದು ನಾಯಿ-ಇವನು ಚಂಡಾಲ, ಆದರೂ ಇವರನ್ನು ಸಮಭಾವದಿಂದ ಕಾಣುತ್ತಾರೆ ಆತ್ಮಜ್ಞಾನಿಗಳು- ಎಂದಲ್ಲ, ಅವರ ದೃಷ್ಟಿಯಲ್ಲಿ ಇದು ನಾಯಿ- ಇವನು ಚಂಡಾಲ-ನಾನು ಪಂಡಿತ ಎಂಬ ದ್ವೈತವೇ ಇಲ್ಲ, ಇದೆಲ್ಲವೂ ಸ್ವಾತ್ಮಸ್ವರೂಪ ಏಕಮೇವ ಅದ್ವಿತೀಯ. ಕಾರುಣ್ಯ ಎಂಬ ವೃತ್ತಿಯಲ್ಲಿ ಕರುಣೆತೋರುವ ಕಾರುಣಿಕ, ಅದಕ್ಕೆ ಪಾತ್ರನಾದ ದೀನ ಎಂಬ ಭಾವವಿದ್ದೀತು. ಆದರೆ ಸರ್ವಾತ್ಮಭಾವದಲ್ಲಿ ಇರುವದೆಲ್ಲ ಬ್ರಹ್ಮವೊಂದೇ ಎಂಬ ಅನನ್ಯತೆ. ಅದು ಅನ್ಯೋನ್ಯತೆ ಅಲ್ಲ. ಅಂತಹ ಅಧ್ಯಾತ್ಮದ ನೆಲೆಯನ್ನು ಖಚಿತಪಡಿಸುವ ಸೂಕ್ತಿಯೊಂದು ತಮಿಳುಭಾಷೆಯಲ್ಲಿದೆ. ''ಆನೆಯನ್ನು ಕಂಡವನು ಮರವನ್ನು ಕಾಣಲಿಲ್ಲ, ಮರವನ್ನು ಕಂಡಾಗ ಆನೆಯಿಲ್ಲ'' ಆತ್ಮವನ್ನೇ ಎಲ್ಲೆಲ್ಲೂ ಕಾಣುವವನು ಆಡನ್ನೂ ಕಾಣಲಾರ. ಆನೆಯನ್ನೂ ಕಾಣಲಾರ.

ಈ ಆತ್ಮಸ್ಥಿತಿಯಲ್ಲಿ ನೆಲೆನಿಂತ ರಮಣರಿಗೆ ಮುಕ್ತಿ ಎಂಬುದು ಮನುಷ್ಯ ಮಾತ್ರರಿಗೆ ಎಂದಾಗಲಿ, ಸ್ತ್ರೀಶೂದ್ರರಿಗೆ ಮುಕ್ತಿಯ ಅಧಿಕಾರವಿಲ್ಲ-ಎಂದಾಗಲಿ, ಪ್ರಾಣಿಗಳಿಗೆ ಮೋಕ್ಷಾಧಿಕಾರವಿಲ್ಲ ಎಂದಾಗಲಿ ಗೋಡೆಗಳನ್ನು ಕಟ್ಟುವದು ಅಸಾಧ್ಯ. ಶಾಸ್ತ್ರದ ಶಬ್ದಾರ್ಥಕ್ಕಿಂತ, ಅಂತರಾರ್ಥವೇ ಅವರಿಗೆ ಪ್ರಧಾನ. ಸರ್ವಲೋಕದ ಸಂತಸ-ನನ್ನ ಸಂತಸ. ಅದರ ಹಂಬಲ ನನ್ನದೇ ಹಂಬಲ. ಆದುದರಿಂದ ರಮಣರು ತಮ್ಮ ಬಳಿಗೆ ಬಂದ ನಾಯಿ-ಜಿಂಕೆ-ಹಾವು-ಹಕ್ಕಿಗಳನ್ನೂ ''ಅದು'' ಎಂದು ಸಂಭೋಧಿಸಿದವರಲ್ಲ- ಅವನು, ಅವಳು, ಅವರು-ಯಾವಾಗ ಗೋವನ್ನು ಅವರು ''ಲಕ್ಷ್ಮಿ ಮುಕ್ತಳಾಗಿದ್ದಾಳೆ'' ಎಂದು ಘೋಷಿಸಿಬಿಟ್ಟರೋ ಅದು ಕೇವಲ ಔಪಚಾರಿಕ ಘೋಷಣೆಯಾಗಿರಲಿಲ್ಲ. ಒಂದೆರಡು ವಿವರಗಳನ್ನು ಮಾತ್ರ ಈ ಕಿರುಲೇಖನದಲ್ಲಿ ಗಮನಿಸಲು ಸಾಧ್ಯ.

ಆಶ್ರಮದ ಪರಿಸರದಲ್ಲಿ ನವಿಲುಗಳನ್ನು ಅವರು ಅವುಗಳ ದನಿಯಲ್ಲೇ ಕೂಗಿ

ಕರೆದು ಕಾಳು, ಹಣ್ಣು ನೀಡುತ್ತಿದ್ದರು. ಅಳಿಲುಗಳು ಅವರು ಕಾಳು ನೀಡಿದರಷ್ಟೇ ಸ್ವೀಕರಿಸುತ್ತಿದ್ದವು. ಯಾವದೇ ಕಾರಣದಿಂದ ಅವರು ನೀಡದಿದ್ದರೆ ಉಪವಾಸವನ್ನೇ ಮಾಡಿಯಾವು. ಮನುಷ್ಯರು ಮುಟ್ಟಿದ ಪ್ರಾಣಿ-ಪಕ್ಷಿಗಳನ್ನು ಗುಂಪಿನ ಪಕ್ಷಿಪ್ರಾಣಿಗಳು ತಿರಸ್ಕರಿಸುತ್ತವೆ ಎಂಬ ಅನುಭವದ ನುಡಿ ರಮಣರ ವಿಷಯದಲ್ಲಿ ಸುಳ್ಳಾಯಿತು. ಅವರ ಬಳಿ ಬಂದ ಗರ್ಭಿಣಿ ಮಂಗದ ನೋವನ್ನು ಸಂತೈಸಿ ಕಳುಹಿಸಬೇಕು. ಅದು ಸಮಾಧಾನದಿಂದ ಹಿಂತಿರುಗಿ, ಗುಂಪನ್ನೂ, ಕಾಲಕ್ರಮದಲ್ಲಿ ತನ್ನ ಮುದ್ದುಮರಿಗಳನ್ನೂ ಕರೆದುಕೊಂಡು ಬಂದು ಹೆಮ್ಮೆಯಿಂದ ಅವರೆದುರು ಕೂಡಿ ಮಾತನಾಡಬೇಕು. ಅವುಗಳ ಭಾಷೆಯ ಸೂಕ್ಷ್ಮತೆ ಮಹರ್ಷಿಗೆ ತಿಳಿಯುತ್ತಿತ್ತು, ಅವರ ಸೂಚನೆ ಅವುಗಳಿಗೆ ಅರ್ಥವಾಗುತ್ತಿತ್ತು. ಅವರ ಸಾನ್ನಿಧ್ಯದಲ್ಲಿ ನವಿಲು-ಮುಂಗುಸಿ- ಹಾವು ಸ್ನೇಹದಿಂದಲೇ ವರ್ತಿಸುತ್ತಿದ್ದವು. ಹಾವು ಅವರ ತೊಡೆಯನ್ನೇರಿ, ಮೈಮೇಲೆ ಹರಿದಾಡಿ, ಕಣ್ಣಲ್ಲಿ ಕಣ್ಣಿಟ್ಟು ಮಾತನಾಡಿ ಹಿಂತಿರುಗುತ್ತಿತ್ತು. ಎಷ್ಟು ತಂಪು-ಎಷ್ಟುಮೃದು! ಎಂದು ಅವರು ಸುಖಭಾವದಲ್ಲಿ ಉದ್ಗರಿಸುತ್ತಿದ್ದರು. ಹಾವುಗಳನ್ನು ಕೊಲ್ಲಲು, ಗುಬ್ಬಚ್ಚಿಯ ಗೂಡನ್ನು ಕೆಡವಲು ಅವರು ಅನುಮತಿಸುತ್ತಿರಲಿಲ್ಲ. ಕೊಳದ ಬಳಿ ನೀರು ಕುಡಿಯಲು ಬಂದ ಚಿರತೆಯನ್ನು ಅವರು ಪ್ರೀತಿಯಿಂದ ಮಾತನಾಡಿಸಿ, 'ಅಗೋ ಆ ರಂಗಸ್ವಾಮಿ ಹೆದರುತ್ತಾನೆ. ಗುಹೆಗೆ ಹೋಗವ್ವಾ' ಎಂದರೆ ಅದು ನಮಸ್ಕರಿಸಿ ಮೌನವಾಗಿ ಹೊರಟುಹೋಗುತ್ತಿತ್ತು. ಭೀತಿ-ತಿರಸ್ಕಾರ-ಪ್ರತೀಕಾರಗಳ ಭಾವನೆಯೇ ಅವರಲ್ಲಿರಲಿಲ್ಲ. ಬದಲಾಗಿ ನಾವು ಅವರ ರಾಜ್ಯಕ್ಕೆ ಬಂದಿದ್ದೇವೆ. ಅವರನ್ನು ಹಿಂಸಿಸಲು, ದೂರ ಅಟ್ಟಲು ನಮಗೇನು ಅಧಿಕಾರ? ಎನ್ನುತ್ತಿದ್ದರು. ಅವರ ಬಳಿಗೆ ಬಂದ ರೋಗಪೀಡಿತ, ತಿರಸ್ಕೃತನಾಯಿಯನ್ನು ಶುಶ್ರೂಷೆಮಾಡಿ, ಗಾಯಗಳನ್ನು ತೊಳೆದು ಅವರು ಸಂತೈಸಿ, ಆಶ್ರಯವಿತ್ತು ಜಾಕಿ-ಎಂದು ಹೆಸರಿಟ್ಟರು. ವಳ್ಳಿ ಜಿಂಕೆಗೆ, ತಮ್ಮ ಪಾದಗಳ ಮೇಲೆ ಪ್ರಾಣಬಿಟ್ಟ ಕಾಗೆಗೆ ಸಹ ಅವರು ಗೌರವದಿಂದ ಸಮಾಧಿ ಮಾಡಿದರು. ತಮ್ಮ ಸೇವಕ ಟವಲು ಹರವುವಾಗ, ಕೆಳಗೆಬಿದ್ದ ಹಕ್ಕಿಯಮೊಟ್ಟೆಯನ್ನು ಎತ್ತಿಕೊಂಡು, ಮತ್ತೆ ಮತ್ತೆ ಅಂಗೈಯಲ್ಲಿ ಸವರಿ ಸವರಿ, ಕಾಲಕ್ರಮದಲ್ಲಿ ಅದು ಒಡೆದು ಪುಟ್ಟಮರಿ ಹೊರಬಂದಾಗ, ಮಗುವಿನಂತೆ ಹಿಗ್ಗುತ್ತಾ ಎಲ್ಲರಿಗೂ

ತೋರಿಸುತ್ತಾ, ತಾಯಿ ಹಕ್ಕಿಯನ್ನು ಕರೆದು, ಮರಿಯನ್ನು ಒಪ್ಪಿಸಿ, ಅದರ ಆನಂದಗಾನ ತಮ್ಮ ಹೃದಯದಿಂದಲೇ ಹೊರಹೊಮ್ಮುತ್ತಿದೆ ಎಂಬಂತೆ ನಲಿದವರು ಅವರು. ನಾಯಿಗಳ ಗಣನೀಯ ಪರಿವಾರವೇ ಅವರ ಬಳಿಯಲ್ಲಿತ್ತು.

" ಒಬ್ಬಳು ಕಮಲಾ, ಅವನು "ಚಿನ್ನಕುರುಪ ಕಮಲಾ, ಇವರು ಹೊಸಬರು ಆಶ್ರಮಕ್ಕೆ ಬಂದಿದ್ದಾರೆ. ಎಲ್ಲವನ್ನೂ ತೋರಿಸಿಕೊಂಡು ಬಾ" ಎಂದರೆ ಸಾಕು. ಅವಳು ತುಂಬ ಉತ್ಸಾಹದಿಂದ ಹೆಮ್ಮೆಯಿಂದ ಗಿರಿಪ್ರದಕ್ಷಿಣೆಗೆ, ಸ್ಕಂದಾಶ್ರಮ, ವಿರೂಪಾಕ್ಷಗುಹೆ, ಮುಂತಾದ ಎಡೆಗಳಿಗೆ ಒಂದನ್ನೂ ಬಿಡದಂತೆ ಭಕ್ತರನ್ನು ಕರೆದೊಯ್ಯುತ್ತಿದ್ದಳು. ಸುರಕ್ಷಿತವಾಗಿ ಅವರನ್ನು ಆಶ್ರಮಕ್ಕೆ ಹಿಂತಿರುಗಿಸಿ ಮಹರ್ಷಿಗಳ ಬಳಿಗೆ ಬರುತ್ತಿದ್ದಳು- ವರದಿ ಒಪ್ಪಿಸುವಂತೆ ! ಚಿನ್ನಕುರುಪ್ಪ ಪರಮವಿರಕ್ತ, ಏಕಾಂತಪ್ರಿಯ, ಅವನೊಬ್ಬ ಯೋಗಿ, ಎಂದು ರಮಣರು ಮತ್ತೊಂದು ನಾಯಿಯನ್ನು ವರ್ಣಿಸುತ್ತಿದ್ದರು. ಹೀಗೆ ಒಂದೊಂದು ಪ್ರಾಣಿ-ಪಕ್ಷಿಯ ವೈಯಕ್ತಿಕ ಸ್ವಭಾವವನ್ನು ಅರಿತು, ಗೌರವಿಸಿ ಪ್ರೀತಿಸಿ, ಮಹರ್ಷಿ ಅನುಗ್ರಹಿಸುತ್ತಿದ್ದರು. ಅವರ ಪಾಲಿಗೆ ಅವು ಕೇವಲ ಪ್ರಾಣಿಗಳಾಗಿಯೇ ಇರಲಿಲ್ಲ.

ಭಗವಾನ್ ರಮಣರ ಪೂರ್ಣಾನುಗ್ರಹದ ಅಮೃತಸರಸ್ಸಿನಲ್ಲಿ ಮಿಂದ ಗೋವು ಲಕ್ಷ್ಮಿಯ ಕಥೆ ಆಶ್ರಮದ ಭಾವಸಂಪತ್ತಿನ ಮಂಗಳ ಅಧ್ಯಾಯವೇ ಆಗಿದೆ. ಪುಟ್ಟಕರುವಾಗಿ ಅಲ್ಲಿಗೆ ಬಂದ ಆಕೆ ಭಗವಾನರ ಪ್ರಥಮದರ್ಶನದಲ್ಲಿಯೇ ಅವರಿಗೆ ಶರಣಾಗಿಬಿಟ್ಟಳು. ಮೊದಲ ದಿನಗಳಲ್ಲಿ ಸಮಯಕ್ಕೆ ಸರಿಯಾಗಿ ಬಂದು, ನಿರ್ಭಯವಾಗಿ ಭಗವಾನರ ಬಳಿಗೆ ನೇರವಾಗಿ ನಡೆದು ಅವರ ವಾತ್ಸಲ್ಯದ ಅನುಭವಕ್ಕೆ ತನ್ನನ್ನು ತೆತ್ತುಕೊಂಡುಬಿಡುತ್ತಿದ್ದಳು. ಸಂಜೆ ಅವರಿಂದ ಬೀಳ್ಕೊಂಡು, ಗಂಭೀರವಾಗಿ ಹಿಂತಿರುಗುತ್ತಿದ್ದಳು. ಮುಂದೆ ಆಶ್ರಮದಲ್ಲಿಯೇ ಆಕೆ ಇರುವ ಏರ್ಪಾಡು ಆದಾಗ ಅವಳ ನೆಮ್ಮದಿಗೆ-ಸಂತಸಕ್ಕೆ ಎಲ್ಲೆಯೇ ಇಲ್ಲ. ವಿಶಾಲವಾದ ಗೋಶಾಲೆ ಸಿದ್ಧವಾಯಿತು. ಸಂಪ್ರದಾಯದಂತೆ ಗೋಪ್ರವೇಶ ನಡೆಯಬೇಕಿತ್ತು. ಆದರೆ ಆಕೆ ಭಗವಾನರ ಸಮೀಪದಲ್ಲೇ ಮಲಗಿಬಿಟ್ಟಳು. ಎಷ್ಟು ಎಷ್ಟು ಪ್ರಚೋದಿಸಿದರೂ ಆಕೆ ಎದ್ದುಬರಳು. ಭಗವಾನರೊಡನೆಯೇ ಬಂದಳು. ಅವರೇ ಮೊದಲು ಗೋಶಾಲೆಯನ್ನು ಪ್ರವೇಶಿಸಿದ ನಂತರವೇ ತಾನೂ ಹಿಂಬಾಲಿಸಿದಳು.

ಅಷ್ಟು ಭಕ್ತಿ ಆಕೆಗೆ ಅವರಲ್ಲಿ. ಲಕ್ಷ್ಮಿ ಆಶ್ರಮಕ್ಕೆ ಬಂದದ್ದು 1926ರಲ್ಲಿ 1948 ಜೂನ್ 17 ರವರೆಗೂ ಒಂದು ದಿನವೂ ಅವಳು ಭಗವಾನರ ಸಾನ್ನಿಧ್ಯವನ್ನು ತೊರೆಯಲಿಲ್ಲ. ಮುಂದೆ ಅವಳ ಸಂತಾನ ಬೆಳೆಯಿತು. ಆಕೆಯ ಮೂರು ಕರುಗಳೂ ಭಗವಾನರ ಜನ್ಮದಿನದಂದೇ ಹುಟ್ಟಿದವು ಎಂಬುದೂ ವಿಶೇಷವೇ. ಅಂತ್ಯದಿನ ಸಮೀಪಿಸಿತು. ಭಗವಾನರು ತಾವೇ ಅವಳ ಬಳಿ ಬಂದರು. ಆಕೆಯ ವೇದನೆಯನ್ನರಿತರು. "ಅಮ್ಮಾ ನಿನ್ನ ಬಳಿಯೇ ಇರುತ್ತೇನೆ" ಎಂದು ತಮ್ಮ ತೊಡೆಯ ಮೇಲೆ ಅವಳ ತಲೆಯನ್ನಿರಿಸಿಕೊಂಡರು. ನೇರದೃಷ್ಟಿಯಿಂದ ಅವಳ ಕಣ್ಣುಗಳನ್ನೇ ಪ್ರೀತಿಯಿಂದ ನೋಡತೊಡಗಿದರು. ಅವಳ ಹೃದಯದ ಮೇಲೆ ತಮ್ಮ ಹಸ್ತವನ್ನಿರಿಸಿದರು. ಲಕ್ಷ್ಮಿ ಪ್ರಶಾಂತಳಾದಳು. ಎಲ್ಲ ವಾಸನೆಗಳಿಂದಲೂ ಮುಕ್ತಳಾದಳು. "ಲಕ್ಷ್ಮಿ ಮುಕ್ತಳಾಗಿದ್ದಾಳೆ" ಎಂದು ಭಗವಾನರೇ ಸ್ಪಷ್ಟಪಡಿಸಿದರು. ದೇವರಾಜಮುದಲಿಯಾರ್ ಅವರಿಗೆ ವಿವರಿಸಿದಂತೆ ಅದು ಕೇವಲ ಔಪಚಾರಿಕ ಅರ್ಥದ ಶಬ್ದವಲ್ಲ "ನಿಜವಾಗಿಯೇ ಮುಕ್ತಳು" ಎಂದೇ ಅರ್ಥ. ಭಗವಾನರ ದೃಢವಾದ ಶ್ರದ್ಧೆಯಲ್ಲಿ ಮುಕ್ತಿ ಮನುಷ್ಯಮಾತ್ರರಿಗೆ ಸೀಮಿತವಲ್ಲ. ಸಕಲಜೀವಿಗಳಲ್ಲಿ ಆತ್ಮವೇ ವ್ಯಾಪ್ತವಾಗಿದೆ ಎಂದಾದರೆ, ಮುಕ್ತಿಯೂ ಸಕಲಜೀವಿಗಳ ಸಾಧ್ಯತೆ. ಏಕೆಂದರೆ ಅದೇ ಅಲ್ಲವೆ, ಸಹಜಸ್ವರೂಪ. "ಹೃದಯಕುಹರಮಧ್ಯೇ ಕೇವಲಂ ಬ್ರಹ್ಮಮಾತ್ರಂ ಅಹಮಹಮಿತಿ ಸಾಕ್ಷಾತ್ ಆತ್ಮರೂಪೇಣ ಭಾತಿ!" (ರಮಣಗೀತ. ಅಧ್ಯಾಯ : 2). ("ಅಹಮಪೇತಕಂ ನಿಜವಿಭಾನಕಂ ಮಹದಿದಂ ತಪೋ ರಮಣವಾಗಿಯಂ" ಉಪದೇಶಸಾರ : 30) ಹೀಗೆ ಆತ್ಮನಿಷ್ಠರಾಗಿ ಸದಾ ಸಹಜಸ್ಥಿತಿಯಲ್ಲಿ ನೆಲೆನಿಂತ ಭಗವಾನ್ ರಮಣಮಹರ್ಷಿಗಳು ಜೀವನ್ಮುಕ್ತರೇ ಸರಿ. ಸರ್ವಾತ್ಮಭಾವ ಅವರ ಸ್ವಾನುಭವವೇ ಆಗಿತ್ತು. ಜೀವಕಾರುಣ್ಯ ಅವರ ಅಪಾರಕೃಪೆಯ ಪ್ರವಾಹವೇ ಆಗಿತ್ತು. ಮಹಾಮೌನದ ಸಾನ್ನಿಧ್ಯ, ಒಂದೆರಡು ಮಾತುಗಳಿಂದ, ಉಪದೇಶದಿಂದ ಅಧ್ಯಾತ್ಮಸಾಧಕರಿಗೆ ನೀಡುತ್ತಿದ್ದ ಮಾರ್ಗದರ್ಶನ, ವಿಶೇಷವಾಗಿ ತಮ್ಮ ಬದುಕಿನ ರೀತಿಯಿಂದಲೇ ವ್ಯಕ್ತಪಡಿಸುತ್ತಿದ್ದ-ಸಾಧಕರ ಅಂತರಂಗದಲ್ಲೇ ಸ್ಫುರಿಸುತ್ತಿದ್ದ ಆತ್ಮದ ಬೆಳಕು- ಅವರ ನಿಜವಾದ ಉಪದೇಶವೇ ಆಗಿತ್ತು. 'ಗುರೋಸ್ತು ಮೌನಂ ವ್ಯಾಖ್ಯಾನಂ, ಶಿಷ್ಯಾಸ್ತು ಛಿನ್ನಸಂಶಯಾಃ ಎಂಬುದರ

ಮಹಾಮಹಿಮೆಯನ್ನು ಅವರು ಈ ಯುಗದಲ್ಲೇ-ಕಳೆದ ಶತಮಾನದ ಪೂರ್ವಾರ್ಧದಲ್ಲೇ ತೋರಿಸಿಬಿಟ್ಟರು. ದಕ್ಷಿಣಾಮೂರ್ತಿಯ ಪ್ರಕಟಸ್ವರೂಪವೇ ಆಗಿಬಿಟ್ಟಿದ್ದರು .

## 14. ನಾಹಂ ದೇಹೋ ನೇಂದ್ರಿಯಾಣಿ

ತಾವು-ಮುಗ್ಧಭಕ್ತರು ಭ್ರಮಿಸುವಂತೆ- ಈ ದೇಹವಲ್ಲ ಎಂಬ ಸೂಚನೆಯನ್ನು ಅವರು ಆಗಾಗ ನೀಡುತ್ತಲೇ ಇದ್ದರು. ನಿರುಪಾಧಿಕವಾದ ಆತ್ಮವೇ ತಮ್ಮ ಸ್ವರೂಪ, ಅಷ್ಟೇಕೆ? ಸಕಲ ಜೀವರಾಶಿಯ ಸ್ವರೂಪವೂ ಅದೇ ಆಗಿದೆ-ಎಂಬುದನ್ನು ಸ್ಪಷ್ಟಪಡಿಸುತ್ತಲೇ ಇದ್ದರು. 'ಈಶ್ವರೋ ಗುರುರಾತ್ಮೇತಿ ಮೂರ್ತಿಭೇದವಿಭಾಗಿನೇ । ವ್ಯೋಮವತ್ ವ್ಯಾಪ್ತದೇಹಾಯ'॥ ಎಂಬ ವರ್ಣನೆ (ದಕ್ಷಿಣಾಮೂರ್ತಿ ಸ್ತೋತ್ರ) ಅವರ ಪ್ರಿಯವಾದ ಅನುಭವವೇದ್ಯವೇ ಆದ ಸ್ತುತಿ. ಯಾರು ಈಶ್ವರನೋ ಅವನು ಆತ್ಮವಲ್ಲದೆ ಬೇರೆಯಲ್ಲ, ಸೂಕ್ಷ್ಮ ಸ್ವರೂಪದಲ್ಲಿ ಹೃದಯಸ್ಥವಾಗಿ ಉಪಾಧಿರಹಿತವಾಗಿ ಸರ್ವರ ದೇಹದಲ್ಲೂ ವ್ಯಾಪಿಸಿರುವ ಆ ಆತ್ಮವಸ್ತುವೇ ಸಾಧಕನ ಉತ್ಕಟಹಂಬಲದಿಂದ, ಅವನ ಸೌಲಭ್ಯಕ್ಕಾಗಿಯೇ, ಉದ್ಧಾರಕ್ಕಾಗಿಯೇ ಗುರುಸ್ವರೂಪದಲ್ಲಿ ಕಣ್ಣೆದುರು ಸುಳಿಯುತ್ತಾನೆ-ಎಂಬುದೇ ರಮಣರ ದೃಢನಿಶ್ಚಯ. ಆದುದರಿಂದಲೇ ತಮ್ಮನ್ನು ಸಾಧಕರು, ತಮಗಿಂತ ಬೇರೆಯಾದ ಶರೀರಮಾತ್ರವೆಂದು ತಿಳಿಯಬಾರದೆಂದೇ ಅವರ ಪ್ರೇಮಮಯ ಆಗ್ರಹ! ಇದನ್ನು ಅವರು ಪುನಃ ಪುನಃ ಸೂಚಿಸುತ್ತಿದ್ದ ಉದ್ದೇಶವೆಂದರೆ, ತಮ್ಮಲ್ಲಿ ಪೂರ್ಣಶ್ರದ್ಧಾಭಕ್ತಿಯನ್ನು ಹೊಂದಿದ್ದು ಸಂಪೂರ್ಣವಾಗಿ ತಮ್ಮನ್ನು ಅವಲಂಬಿಸಿದ್ದ ಸಾಧಕರಿಗೆ-ಭಕ್ತರಿಗೆ-ತಮ್ಮ ದೇಹಾವಸಾನದ ನಂತರ ಶೂನ್ಯತೆ, ದಿಗ್ಭ್ರಮೆ, ಹತಾಶೆ, ಕವಿಯಬಾರದು, ದೇಹಧರ್ಮದ ಸ್ವರೂಪವನ್ನು ಅರಿತು, ಅದಕ್ಕೆ ಅವರು ಮಾನಸಿಕವಾಗಿ ಸಿದ್ಧರಾಗಬೇಕು - ಎಂಬುದೇ ಆಗಿದೆ.

ಅಂತಹ ಕಾಲವೂ ಬಂದೇ ಬಂದಿತು. 1-9-1946ರಲ್ಲಿ ರಮಣ ಮಹರ್ಷಿಗಳ ಅರುಣಾಚಲ ಆಗಮನದ ಸುವರ್ಣಮಹೋತ್ಸವವು

ಅರ್ಥಪೂರ್ಣವಾಗಿ ಹತ್ತುದಿನಗಳ ಕಾಲ ಆಚರಿಸಲ್ಪಟ್ಟಿತ್ತು. ದೇಶ-ವಿದೇಶಗಳ ಸಾಧಕರು, ಕವಿಗಳು, ಗಾಯಕರು, ತಮ್ಮ ತಮ್ಮ ರೀತಿಯಲ್ಲಿಯೇ ಭಗವಾನರಿಗೆ ಭಕ್ತಿಪೂರ್ವಕ ನಮನಗಳನ್ನು ಸಲ್ಲಿಸಿದರು. ಉತ್ಸಾಹದ ಉಬ್ಬರವೆಲ್ಲ ಸಾಧಕರ ಮನಸ್ಸು-ಚರ್ಯೆಗಳಲ್ಲಿ ಎಂದಿನಂತೆಯೇ ಇದ್ದಿತು. ರಮಣರು ಅತ್ಯಂತ ಸರಳವಾಗಿ ಕೌಪೀನಮಾತ್ರಧಾರಿಗಳಾಗಿ , ಆನಂದಸ್ವರೂಪರೇ ಆಗಿ, ಆತ್ಮಾರಾಮರಾಗಿ ಈ ಎಲ್ಲ ಉತ್ಸವದ ಸಾಕ್ಷಿಮಾತ್ರವಾಗಿದ್ದರು. ಶ್ರೀ ಶಂಕರರು ಜೀವನ್ಮುಕ್ತನನ್ನು ವರ್ಣಿಸುವಾಗ 'ದೇಹವಾನಿವ, ಜಾತ ಇವ' ಎನ್ನುವದರ ಪೂರ್ಣಾರ್ಥ ಭಗವಾನರನ್ನು ಕಂಡವರಿಗೆ ಸ್ಫುರಿಸುತ್ತಿತ್ತು. ದೇಹಾತ್ಮಭಾವದ ಕಿಂಚಿತ್ ಅನುಭವವೂ ರಮಣರಲ್ಲಿ ಕಂಡುಬರುತ್ತಿರಲಿಲ್ಲ.

ಈ ಉತ್ಸವದ ಅನಂತರ, ಪ್ರಕೃತಿಧರ್ಮದಂತೆ ಅವರ ದೇಹಸ್ಥಿತಿ ಕೆಡುತ್ತಾ ಬಂದಿತು. ನಡಿಗೆ ನಡುಗುತ್ತಿತ್ತು. ಶರೀರ ಕ್ಷೀಣವಾಗತೊಡಗಿತ್ತು. ಆದರೂ ಸಂದರ್ಶನಾರ್ಥಿಗಳಿಗೆ, ಭಕ್ತರಿಗೆ, ಅವರ ದರ್ಶನ ಸದಾ ಸುಲಭವೂ ಸಾಧ್ಯವೂ ಆಗಿತ್ತು. ಅಂಥವರಿಂದ ತಮ್ಮನ್ನು ಬೇರ್ಪಡಿಸುವ ಯಾವ ಪ್ರತ್ಯೇಕಕೋಣೆಯನ್ನೂ ಅವರು ಬಯಸುತ್ತಿರಲಿಲ್ಲ. ಭಕ್ತರ ನಡುವೆ ಅವರನ್ನು ಅನುಗ್ರಹಿಸುತ್ತಾ ವಿರಾಜಮಾನರಾಗುವದೇ ಅವರ ಸಹಜಸ್ವಭಾವ. ಅವರ ಈ ಸೌಲಭ್ಯಗುಣ ದೇಹಾಂತ್ಯದವರೆಗೂ ಬಿಡುವಿಲ್ಲದೆ ನಡೆಯಿತು. 1950ರಲ್ಲಿ ಅವರ ಜಯಂತಿಯ ಸಂದರ್ಭದಲ್ಲಿ ರಮಣರನ್ನು ಕಂಡವರಿಗೆ (ಆಗ ಅವರಿಗೆ 70 ವರ್ಷ) ದೇಹ ಅತ್ಯಂತಕೃಶವಾಗಿರುವದು ಸ್ಪಷ್ಟವಾಗಿಯೇ ಗೋಚರಿಸಿತು. 1949ರಲ್ಲಿಯೇ ಅವರ ಎಡಮೊಳಕೈ ಮೇಲೆ ಒಂದು ಸಣ್ಣ ಗುಳ್ಳೆ ಗೋಚರಿಸಿ, ಆಶ್ರಮದ ವೈದ್ಯರು ಚಿಕಿತ್ಸೆಮಾಡಿದ್ದರು. ಆದರೆ ಅದು ಬೆಳೆಯುತ್ತಲೇ ಹೋಯಿತು. ಅದನ್ನು 'ಸರ್ಕೋಮಾ' ಎಂದು ಗುರುತಿಸಲಾಯಿತು. ಆಶ್ರಮದಿಂದ ಹೊರಗಿನ ಚಿಕಿತ್ಸಾಲಯಕ್ಕೆ ಹೋಗುವದಾಗಲಿ, ಅರಿವಳಿಕೆ ನೀಡುವದಾಗಲಿ ಅವರಿಗೆ ಒಲ್ಲದ ಸಂಗತಿ. 'ನೋವಿನ ಅನುಭವವೇ ನನಗಿಲ್ಲ, ಅರಿವಳಿಕೆಯೇ ಅನವಶ್ಯಕ' ಎಂದು ಅವರ ಮನೋಭಾವ. ಇದೇ ಸ್ಥಿತಿಯಲ್ಲಿ ಆಶ್ರಮದಲ್ಲಿಯೇ ಮಾರ್ಚ್ 27 ರಂದು ಶಸ್ತ್ರಚಿಕಿತ್ಸೆ ನಡೆಯಿತು. ಇದು ಎರಡನೆಯದು. ಅದೇ ವರ್ಷದ ಆಗಸ್ಟ್‌ನಲ್ಲಿ ಮತ್ತೊಮ್ಮೆ ಡಿಸೆಂಬರ್ 19 ರಂದು ಕೊನೆಗೊಮ್ಮೆ ಈ ವೈದ್ಯಕರ್ಮ ನಡೆಯಿತು.

ಎಲ್ಲವೂ ದುಃಖಿತಭಕ್ತರ-ವೈದ್ಯರ ಸಮಾಧಾನ, ಸಾಂತ್ವನಕ್ಕಾಗಿ. ರಮಣರ ಮುಖದ ಮಂದಹಾಸ, ಕೃಪಾದೃಷ್ಟಿ ಮಾಸಲಿಲ್ಲ. ಈ ವ್ಯಾಧಿ-ಚಿಕಿತ್ಸೆ ತಮಗೆ ಅಲ್ಲವೇ ಅಲ್ಲ ಎಂಬ ಭಾವದಲ್ಲಿ ಅವರು ನೆಲೆಸಿದ್ದರು. ಎಂದಿನಂತೆ ಶಾಂತ-ಸ್ಥಿರ-ಅನುಕಂಪ-ಅನುಗ್ರಹ ದೃಷ್ಟಿ ತಮ್ಮ ವ್ಯಾಧಿಯನ್ನು ತಪೋಬಲದಿಂದ ತಾವೇ ಗುಣಪಡಿಸುವ ಶಕ್ತಿ ಅವರಿಗಿತ್ತು. ಮುರುಗನಾರ್ ಸುಬ್ರಹ್ಮಣ್ಯ ಮುಂತಾದ ಭಕ್ತರು ಅವರನ್ನು ಆ ಬಗೆಗೆ ಒತ್ತಾಯಿಸುತ್ತಲೇ ಇದ್ದರು. ನಗುನಗುತ್ತಲೇ ಅವರ ಕೋರಿಕೆಯನ್ನು ರಮಣರು ನಿರಾಕರಿಸಿದರು. ಅಂಥದಕ್ಕೆ ಕೊನೆಯೆಲ್ಲಿ? ಜೀರ್ಣವಾಗುವದು. ಬಿದ್ದು ಹೋಗುವದು ಶರೀರಧರ್ಮ. ಅದನ್ನೇಕೆ ತಡೆಯುವದು? ಇದು ಅವರ ಭಾವ. 'ತಮ್ಮ ಇಚ್ಛಾಶಕ್ತಿಯನ್ನು ಬಳಸಿ' ಎಂಬ ಸುಬ್ರಹ್ಮಣ್ಯರ ಕೋರಿಕೆಗೆ ಭಗವಾನರ ಉತ್ತರ : ಜ್ಞಾನಿಗೆ ತನ್ನದೇ ಆದ ಸಂಕಲ್ಪ ಎಂಬುದೇ ಇಲ್ಲವಲ್ಲಾ! ವ್ಯಾಧಿ-ಮರಣ ದೇಹಕ್ಕೆ ಅಲ್ಲವೆ ? ಜ್ಞಾನಿ ದೇಹವಲ್ಲವಲ್ಲಾ! ರೋಗ - ಎಂಬುದು ದೇಹದ ಹಕ್ಕು, ಅದನ್ನು ಕಿತ್ತುಕೊಳ್ಳಲಿ! ಎಂದು ನಗೆಯಾಡುತ್ತಿದ್ದರು. ಈ ಟ್ಯೂಮರ್ ಬರಲಿ ಎಂದು ಕೇಳಿದೆನೆ ? ಹೋಗು - ಎಂದು ಏಕೆ ಹೇಳಲಿ?ನನಗೂ ಅದಕ್ಕೂ ಏನು ಸಂಬಂಧ ? ಎಂದು ರಮಣರು ನುಡಿಯುತ್ತಿದ್ದರು.

ವೈದ್ಯರು ಮುಂದಿನ ಚಿಕಿತ್ಸೆಯ ಬಗೆಗೆ ತಮ್ಮ ಅಸಹಾಯಕತೆಯನ್ನು ಸ್ಪಷ್ಟಪಡಿಸಿದರು. ಭಕ್ತರು ತಮ ತಮಗೆ ತಿಳಿದಂತೆ ಆಯುರ್ವೇದ, ಹೋಮಿಯೋಪತಿ, ನಾಟಿವೈದ್ಯ ಎಲ್ಲವನ್ನೂ ಅವರ ದೇಹದ ಮೇಲೆ ಪ್ರಯೋಗಿಸತೊಡಗಿದರು. ಈ ಎಲ್ಲವನ್ನೂ ನಿರ್ಲಿಪ್ತರಾಗಿ. ದೇಹಭಾವವೇ ಇಲ್ಲದ ರಮಣರು ಸಹಿಸಿದರು. ಮುಂದೆ ಏನು ಮಾಡೋಣ? ಎಂದು ಹತಾಶರಾದ ಭಕ್ತರು ಕೇಳಿದರೆ- "ಹೀಗೆ ಚಿಕಿತ್ಸೆ ಮಾಡಿದರೆ ವಾಸಿಯಾಗುತ್ತದೆ- ಎಂದು ನಾನು ಹೇಳಿದೆನೆ? ನಿಮಗಾಗಿ ನೀವೇ ಮಾಡುತ್ತಾ ಹೋದಿರಿ. ಯಾವ ಚಿಕಿತ್ಸೆಯೂ ಬೇಡ, ಎಂದು ಮೊದಲಿನಿಂದ ಹೇಳುತ್ತಲೇ ಇದ್ದೆ. ನೀವು ಕೇಳಲಿಲ್ಲ. ಈಗಲೂ ನಿಮ್ಮದೇ ತೀರ್ಮಾನ. ನಡೆಯಬೇಕಾದುದು ನಡೆಯುತ್ತದೆ"- ಎಂಬುದೇ ಅವರ ಉತ್ತರ. ಅವರಂತೂ ಸಹಜಾನಂದದಲ್ಲಿಯೇ ಮುಳುಗಿಬಿಟ್ಟಿದ್ದರು. ಎಂದಿನಂತೆಯೇ ಅವರು ಭೋಜನಶಾಲೆಗೆ ಹಲವು ಮೆಟ್ಟಿಲುಗಳನ್ನು ಹತ್ತಿಯೇ ಬರುತ್ತಿದ್ದರು. ಭಕ್ತರೊಡನೆ ಸಹಭೋಜನವನ್ನು ಮಾಡುತ್ತಿದ್ದರು. ಆಶ್ರಮದ ಯಾವ ಚಟುವಟಿಕೆಯಲ್ಲೂ

ವ್ಯತ್ಯಯವಾಗಲು ಅವರು ಅವಕಾಶವೀಯಲಿಲ್ಲ. ತಮ್ಮ ದರ್ಶನಕ್ಕೆ ಬರುತ್ತಿದ್ದ ಭಕ್ತರನ್ನು ತಡೆಯಲೂ ಅವರು ಒಪ್ಪಲಿಲ್ಲ. ತಾವು ಕುಳಿತುಕೊಳ್ಳುತ್ತಿದ್ದ ಕೋಣೆಯ ಬಾಗಿಲು ಹಾಕಲೂ ಅವರು ಸಮ್ಮತಿಸಲಿಲ್ಲ. ಕ್ಲುಪ್ತಕಾಲದಲ್ಲಿ ಮಾತ್ರವೇ ಬಾಗಿಲು ತೆರೆಯೋಣ ಎಂದರೆ-"ಅಯ್ಯೋ! ಎಷ್ಟು ದೂರದೂರದಿಂದ ಬಂದಿದ್ದಾರೆ. ಸಂಜೆಯವರೆಗೂ ಪಾಪ, ಅವರನ್ನೇಕೆ ಕಾಯಿಸುತ್ತೀರಿ? ಅವರನ್ನು ನಿರಾಸೆಗೊಳಿಸ ಬಾರದು,-ತೊಂದರೆಪಡಿಸಬಾರದು" ಎಂದುಬಿಡುತ್ತಿದ್ದರು. ಅವರ ಸ್ಮರಣಶಕ್ತಿ ಕೊನೆಯವರೆಗೂ ತೀಕ್ಷ್ಣವಾಗಿಯೇ ಇದ್ದಿತು. 1950ರ ಏಪ್ರಿಲ್ 12 ರಂದೂ ಸಹ, ತಮ್ಮನ್ನು ಕಾಣಲುಬಂದ ಬಂಧುವೊಬ್ಬರನ್ನು ಇಂದು "ನಿನ್ನ ತಂದೆಯ ಶ್ರಾದ್ಧದ ದಿನ ಅಲ್ಲವೆ? ಕರ್ಮವೆಲ್ಲ ನಡೆಯಿತೆ"? ಎಂದು ವಿಚಾರಿಸಿದರು. ಅವರ ಚಿಂತನೆಯೆಲ್ಲ ಅವರಿವರ ಬಗೆಗೆ- ಪ್ರೀತಿ ಅನುಕಂಪದಿಂದ. ತಮ್ಮ ದೇಹಸ್ಥಿತಿಯ ಬಗೆಗಲ್ಲ.

ಅವರ ದೇಹಾಂತ್ಯದ ದಿನ ಸಮೀಪಿಸಿತು. ಅಂದೂ ಭಕ್ತರ ಪ್ರವಾಹ ಸರದಿಯಲ್ಲಿ ನಿಂತ ಭಕ್ತಸಮೂಹ-ದರ್ಶನ-ನೇತ್ರದೃಷ್ಟಿಯ ಅನುಗ್ರಹ. 1950 ಏಪ್ರಿಲ್ 14-ಸಂಜೆ ಐದು ಗಂಟೆಗೇ ಭಕ್ತರ ಗುಂಪು ಅರುಣಾಚಲಸ್ತುತಿಯನ್ನು ಭಾವುಕರಾಗಿ ಹಾಡತೊಡಗಿದರು. "ಅರುಣಾಚಲ ಶಿವ, ಅರುಣಾಚಲ ಶಿವ" ಎಂಬ ಧ್ವನಿ ಸಾಮೂಹಿಕವಾಗಿ ಮುಗಿಲುಮುಟ್ಟಿತು. (ಈ ಸ್ತುತಿಯ ರಚನೆ ಭಗವಾನರದ್ದೇ- 108 ಶ್ಲೋಕಗಳ ಜ್ಞಾನ-ಭಕ್ತಿ ಸಂಗಮದ ಭಾವಪೂರ್ಣಕೃತಿ). ಭಗವಾನರ ಮುಖ ಅಪೂರ್ವತೇಜಸ್ಸಿನಿಂದ ದೀಪ್ತವಾಯಿತು. ಆಯಾಚಿತವಾಗಿ ಅಪ್ರಯತ್ನವಾಗಿ ಆನಂದಬಾಷ್ಪ ಅವರ ಕಣ್ಣುಗಳಿಂದ ಚಿಮ್ಮಿ ಕಪೋಲವನ್ನು ತೋಯಿಸಿತು. ಉಸಿರಾಟ ಮಂದವಾಯಿತು. ಕೃತಕ ಉಸಿರಾಟ ನೀಡುವ ವೈದ್ಯರ ಸಲಹೆಯನ್ನು ಕೈಗಳ ಸಂಕೇತದಿಂದಲೇ ಅವರು ನಿರಾಕರಿಸಿದರು. ಉಸಿರು ಮೆಲ್ಲಮೆಲ್ಲನೆ ಆಡುತ್ತಿದ್ದದು ಅಂದು ರಾತ್ರಿ 8 ಗಂಟೆ 47 ನಿಮಿಷಕ್ಕೆ ಶಾಂತವಾಯಿತು. ಆ ಕ್ಷಣದಲ್ಲೂ ಭಗವಾನರ ಮುಖದಲ್ಲಿ ಯಾವ ಉದ್ವೇಗ, ಅಶಾಂತಿ, ನೋವಿನ ಸುಳಿವು-ಸೂಚನೆಗಳೂ ಇರಲಿಲ್ಲ.

(ಹೀಗೆ ನಾಮರೂಪಗಳ ಉಪಾಧಿಯನ್ನು ಎಂದೋ ಕಳಚಿದ್ದ ಆ ಚೈತನ್ಯ ವಿಶ್ವಾತ್ಮವೇ ಆಗಿ ಸರ್ವವ್ಯಾಪಿಯಾಯಿತು.)

# 15. ಕೇವಲಮ್ ಬ್ರಹ್ಮಮಾತ್ರಮ್

"ಭಗವಾನ್ ರಮಣಮಹರ್ಷಿಗಳು ವೇದಯುಗದ ಋಷಿಗಳಂತೆಯೇ ಸತ್ಯವನ್ನು ನೇರವಾಗಿ ಕಂಡವರು. ಅನುಭವಕ್ಕೆ ತಂದುಕೊಂಡವರು. ಅದರಲ್ಲಿಯೇ ನೆಲೆನಿಂತವರು. ಸತ್ಯದರ್ಶನಕ್ಕಾಗಿ ಯಾವದೇ ಬಳಸುದಾರಿಯನ್ನು ಹಿಡಿದವರಲ್ಲ. ಅದು ಆರ್ಜವ ಮಾರ್ಗ. ವಿಚಾರ-ಆತ್ಮವಿಚಾರವೇ - ಆ ದರ್ಶನದ ಊರುಗೋಲು. ವಿಚಾರ "ಆಳವಾದ ಬಾವಿಯಲ್ಲಿ ಕಳೆದುಕೊಂಡ ರತ್ನವನ್ನು ಶೋಧಿಸುವವನು ಪ್ರಾಣವನ್ನೂ, ಮಾತನ್ನೂ ನಿಯಂತ್ರಿಸಿ ಗುರಿಯೊಂದರಲ್ಲಿಯೇ ಮುಳುಗಿರುತ್ತಾನಲ್ಲವೆ"? ಬಾವಿಯ ದಡದಲ್ಲಿ ನಿಂತವರ ಮಾತು, ಸಲಹೆ, ಕುಹಕ, ಎಲ್ಲಕ್ಕೂ ಕುರುಡು, ಕಿವುಡು ಆಗಿ ತನ್ನದೇ ಶೋಧನೆಯಲ್ಲಿರುವನಲ್ಲವೆ? ಆ ಶೋಧನೆಯ ಆ ಅನುಭವವನ್ನು ಮಾತಿನಲ್ಲಿ ಆತ್ಮಸ್ಥಿತಿಯಲ್ಲಿ ನೆಲೆನಿಂತವನು ಬಣ್ಣಿಸಲಾದೀತೆ? "ಅದು ಸಾಕ್ಷಾತ್ ದಕ್ಷಿಣಾಮೂರ್ತಿಯ ಬೃಹನ್‌ಮೌನ. ಆ ದರ್ಶನದ ವ್ಯಾಖ್ಯಾನ ಹೇಗೆ ಸಾಧ್ಯ? ಸತ್ಯವಸ್ತು ಅಪರಿಮಿತ ಆನಂದ. ಅದು ಏಕಮೇವ, ಅದ್ವಿತೀಯ. ಮಾತು ಚಂಚಲಛಾಯೆ. ನೆರಳು ಸತ್ಯವಂತೂ ಅಲ್ಲವಲ್ಲ. ಪ್ರತಿಬಿಂಬ ಎಂದೂ ಬಿಂಬವಾಗುವದಿಲ್ಲ. ಹೀಗಾಗಿ ಆತ್ಮಶೋಧನೆ ಎಂದರೆ ಸ್ವಸ್ವರೂಪಾನುಭೂತಿ. ಅದು ಹೊರಗಿನ ಪ್ರಪಂಚದಲ್ಲಿನ ಹುಡುಕಾಟವಲ್ಲ, ಹೊಸದಾಗಿ ಪಡೆದುಕೊಳ್ಳುವದೂ ಅಲ್ಲ. ಅಧ್ಯಾತ್ಮದ ಸಕಲಸಾಧನೆಗಳೂ, ಅಧ್ಯಾತ್ಮಕೃತಿಗಳೂ, ವ್ಯಾಖ್ಯಾನಗಳೂ ಆತ್ಮನನ್ನು ದೊರಕಿಸಿಕೊಡುವದಕ್ಕಾಗಿ ಹೊರಟದ್ದಲ್ಲ. ಸ್ವಸ್ವರೂಪವನ್ನು ನೆನಪಿಸುವದಕ್ಕಾಗಿಯೇ. ಶ್ರುತಿ, ಕಾರಕವಲ್ಲ- ಜ್ಞಾಪಕ ಎನ್ನುವದು ಈ ಅರ್ಥದಲ್ಲಿಯೇ. ಸಾಧನೆಯೆಲ್ಲವೂ ಆತ್ಮದ ಸಾಕ್ಷಾತ್‌ಕಾರಕ್ಕಾಗಿಯಲ್ಲ. ಸಾಕ್ಷಾತ್ ಆತ್ಮದ ಅನುಭವಕ್ಕಾಗಿ. ಅದಕ್ಕಾಗಿ ಇರುವ ಎಲ್ಲ ಉಪಾಧಿಗಳನ್ನೂ ಕಳಚಿಕೊಳ್ಳುವದಕ್ಕಾಗಿ."

ಹಾಗಾದರೆ ನಮ್ಮದೇ ಸ್ವರೂಪದ ಅನುಭವಕ್ಕೆ ಇಷ್ಟೊಂದು ತಡೆಗಳು ನಿಜವಾಗಿ ಇವೆಯೆ? ಅಥವಾ ಈ ಉಪಾಧಿಗಳೂ ನಿಜವಾಗಿ ಕಲ್ಪನೆಯೆ? ಯಾರ ಕಲ್ಪನೆ? ಮನಸ್ಸಿನ ಕಲ್ಪನೆ ಎನ್ನೋಣವೆಂದರೆ, ಮನಸ್ಸು ಎಂಬುದಕ್ಕೆ ಹೀಗೆ ಕಲ್ಪಿಸುವ ಒಂದು ಸ್ವತಂತ್ರ ಅಸ್ತಿತ್ವ ಉಂಟೆ? ಹಾಗೆ ನೋಡಿದರೆ ಈ ಮನಸ್ಸು ಎನ್ನುವದೇ

ಕಲ್ಪನೆಯಲ್ಲವೆ? ಇಂದ್ರಿಯಗಳು ವಿಷಯಗಳ ಬಗೆಗೆ ಹರಿಯುತ್ತವೆ, ಸುಖದ ಬೇಟೆಯಾಡುತ್ತವೆ. ಅದು ದೊರಕದೆ ಸೋತು ಬಳಲುತ್ತವೆ; ಎಂದೆಲ್ಲ ವಿವರಣೆ ಶಾಸ್ತ್ರಗಳಲ್ಲಿಯೇ ಉಂಟು. 'ಪರಾಂಚಿ ಖಾನಿ ವ್ಯತೃಣತ್ ಸ್ವಯಂಭೂಃ ಪರಾಙ್ ಪಶ್ಯತಿ, ನಾಂತರಾತ್ಮಾ-ಎನ್ನುತ್ತಾರಲ್ಲ ! ಇಂದ್ರಿಯಗಳನ್ನು ಸೃಷ್ಟಿಮಾಡಿದ ಆ ಬ್ರಹ್ಮನ ಮೇಲೆಯೇ ತಪ್ಪು ಹೊರಿಸಿ ಸುಮ್ಮನಿರೋಣವೆಂದರೆ, ಇಂದ್ರಿಯಗಳು ಜಡ. ಅವಕ್ಕೆ ಅರಿವು ಉಂಟೆ? ಪ್ರಚೋದನೆಯಿಲ್ಲದೆ ಅವು ವರ್ತಿಸುವದಾದರೂ ಎಂತು? ವಿಷಯ: ಮಾವಿನಮರ ಎದುರಿಗಿದೆ. ಅದರಲ್ಲಿ ಮಾಗಿದ ಹಣ್ಣು ತೂಗಿಬಿದ್ದಿದೆ. ಅದರ ಇಚ್ಛೆ ಯಾರಿಗೆ? ಕಾಲುಗಳು ತಮಗೆ ತಾವೇ ಬಯಸುತ್ತವೆಯೇನು?ಮರದ ಬಳಿಗೆ ಹೋಗಬಲ್ಲವೇನು? ಪ್ರಚೋದನೆ ಬೇಕು- ಯಾರ ಪ್ರಚೋದನೆ? ಆಹಾ ಮನಸ್ಸಿನದೇ ಇರಬೇಕು ! ತನಗೆ ಬೇಕಾದುದನ್ನು ಅದು ಈ ಇಂದ್ರಿಯಗಳ ಮೂಲಕ ಮಾಡಿಸಿಕೊಳ್ಳುತ್ತದೆ ಅಷ್ಟೆ ಮನಸ್ಸೇ ನಿಜವಾದ ಶತ್ರು. ನಮ್ಮ ಎಲ್ಲ ಸುಖದುಃಖಗಳಿಗೂ ಈ ಹಾಳು ಮನಸ್ಸೇ ಕಾರಣ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ" 'ಮನೋಮಯಂ ತದ್ಭುವನಂ' ಪ್ರಪಂಚವೆಲ್ಲ ಮನಸ್ಸಿನ ಸೃಷ್ಟಿ; ಅದೋ ಬಹು ಚಂಚಲ, ಸಂಕಲ್ಪ-ವಿಕಲ್ಪ-ದೃಢತೆಯೇ ಇಲ್ಲ ಅದಕ್ಕೆ. "ಮನವೆಂಬುದು ಮರ್ಕಟ, ಮೇಲೆ ಮದ್ಯದ ಮದ. ವೃಶ್ಚಿಕ ಕಾಲತುದಿಯನ್ನು ಕಚ್ಚಿದರೆ ಕುಣಿದಾಡುವಂದದಲಿ, ಮನ ಇದು ಮಾತು ಕೇಳದು". ಇಂಥ ಆದೆಷ್ಟು ಮಾತುಗಳನ್ನು ಈ ಕಲ್ಪಿತಮನಸ್ಸು ಎಂಬ ಕಲ್ಪಿತಶತ್ರುವಿನ ಮೇಲೆ ! ಅದಂತೂ ಅಂತಃಕರಣ ಕಣ್ಣಿಗೆ ಕಾಣದು, ಕೈಗೆ ಸಿಗದು- ಎಂದ ಮೇಲೆ ಅದನ್ನು ಅಂತಗೊಳಿಸುವದಾದರೂ ಹೇಗೆ ? ಈ ಜ್ಞಾನಚರ್ಚೆಯ ಫಲವೆಂದರೆ, ನಮ್ಮ ಶತ್ರುಗಳ ಸಂಖ್ಯೆ ಮತ್ತಷ್ಟು ಬೆಳೆದದ್ದು ಪಂಚೇಂದ್ರಿಯಗಳು, ಮನಸ್ಸು-ಬುದ್ಧಿ-ಚಿತ್ತ-ಅಹಂಕಾರ ಎಂಬ ಅಂತಃಕರಣಗಳು. ಈ ಏಳು ಸುತ್ತಿನ ಕೋಟೆಯನ್ನು ಗೆದ್ದು ಆತ್ಮದರ್ಶನವಾಗಬೇಕೆ? ಇದೆಂತಹ ಬಳಸು ದಾರಿ? ರಮಣರೆನ್ನುತ್ತಾರೆ : ಅಪ್ಪಾ ನಿಜವಾಗಿ ಸದ್ವಸ್ತು ಏಕಮೇವ-ಎಂದೆಂದೂ ಒಂದೇ. ಅದು ಆತ್ಮ. ಬ್ರಹ್ಮವೇ ಆತ್ಮವಾಗಿ ಬೆಳಗುತ್ತಿದೆ. ಸಕಲವಿಶ್ವವನ್ನೂ ಸಕಲಜೀವರಾಶಿಯನ್ನೂ ಬೆಳಗುವ ಅಖಂಡಜ್ಯೋತಿ ಅದು. 'ಹೃದಯಕುಹರಮಧ್ಯೇ ಕೇವಲಂ ಬ್ರಹ್ಮಮಾತ್ರಂ । ಅಹಮಹಮಿತಿ ಸಾಕ್ಷಾತ್ ಆತ್ಮರೂಪೇಣ ಭಾತಿ ! ಆಸ್ತಂಭ ಬ್ರಹ್ಮಪರ್ಯಂತ'

ಇರುವದು ಅದೊಂದೇ. ಹೃತ್ ಅಯಂ ಎಂದು ಪ್ರತಿಯೊಬ್ಬರೂ ಗುರುತಿಸಿ ಕೊಳ್ಳುವದು ಅದನ್ನೇ. ಆದುದರಿಂದ ಅದೇ ಹೃದಯ. ದೇಹದ ಎಡಭಾಗದ ಶ್ವಾಸನಿಯಂತ್ರಣದ, ರಕ್ತಪರಿಸರಣದ, ಅಂಗವಲ್ಲ ಅದು ! ನಿಜಕ್ಕೂ ದೇಹದ ಬಲಭಾಗದಲ್ಲಿ ಆಧ್ಯಾತ್ಮದ ಧ್ಯಾನಕೇಂದ್ರ-ಸಾಧನೆಗಾಗಿ ಈ ಸಂಕೇತ. ಅಲ್ಲಿ ಅದರ ಅನುಭವ. ಉಳಿದೆಡೆ ಇಲ್ಲ ಎಂದಲ್ಲ, ದೇಹದ ಹೊರಗೆ ಇರುವದು ಬೇರೆ ಎಂದಲ್ಲ. ಈ ಆತ್ಮಸ್ಥಿತಿಯೇ ಜೀವದ ಸಹಜಸ್ಥಿತಿ. ಅದನ್ನು ಯಾರೂ ಕೊಡಲಾರರು. ಪಡೆಯಲಾರರು. ಇರುವಿಕೆಯೇ ಅದು, ಅರಿವೇ ಅದು, ಆನಂದವೇ ಅದು. ಅದು ಸತ್-ಚಿತ್-ಸುಖ. ಅದನ್ನು ಮಾತು ಬಣ್ಣಿಸದು, ಮನಸ್ಸು ಕಲ್ಪಿಸದು. ಏಕೆಂದರೆ ಮನಸ್ಸೇ ಕೇವಲ ಕಲ್ಪನೆ. ವಸ್ತುತಃ ಅದು ಇಲ್ಲ, ಎಂದಮೇಲೆ ಅದು ಆತ್ಮಾನುಭವದ ಉಪಾಧಿಯಾಗುವದು ಹೇಗೆ?

ಮಾನಸಂ ತು ಕಿಂ ಮಾರ್ಗಣೇ ಕೃತೇ

ನೈವ ಮಾನಸಂ (ಮಾನಸಂ) ಮಾರ್ಗ ಆರ್ಜವಾತ್॥ (ಉ.ಸಾರ)

ಇಲ್ಲದ ಮನಸ್ಸಿನೊಡನೆ ಸಲ್ಲದ ಹೋರಾಟವೇಕೆ? ಹಾಗಾದರೆ ನಿಜವಾದ ಶತ್ರು ಯಾರು? ಎಷ್ಟು ಮಂದಿ ಶತ್ರುಗಳು? ಸದ್ವಸ್ತುವೂ ಏಕಮೇವ। ಶತ್ರುವೂ-ಉಪಾಧಿಯೂ ಏಕಮೇವ ! ಒಂದು ಮರ, ಮತ್ತೊಂದು ಆನೆ, ಆನೆ ಕಾಣುವಾಗ ಮರ ಕಾಣದು. ಮರ ಕಂಡಾಗ ಆನೆ ಇರದು ! ಅಜ್ಞಾನದಲ್ಲಿ - ಅವಿದ್ಯೆಯಲ್ಲಿ-ಅಧ್ಯಾಸದಲ್ಲಿ ಸರ್ಪವೇ. ಕತ್ತಲು ಹರಿದಾದ ಹಗ್ಗವೇ. ಒಂದಿದ್ದಾಗ ಮತ್ತೊಂದು ಇಲ್ಲ. ಈ ಸರ್ಪದ ಆಭಾಸವೂ ಹಗ್ಗದಿಂದಲೇ ಹೊಮ್ಮಿದುದು. ಅದು - ಆಭಾಸ-ಅಡಗಿ ಹೋಗುವದೂ ಹಗ್ಗದಲ್ಲಿಯೇ. ಎಂದರೆ ಏನಾಯಿತು? ಹಗ್ಗ-ಹಾವು-ಸತ್ಯ-ಭ್ರಾಂತಿ ಎಲ್ಲವೂ ನನ್ನಲ್ಲಿಯೇ ತೋರುವದು-ಅಡಗುವದು ಎಲ್ಲವೂ ಆತ್ಮದಲ್ಲಿಯೇ. ಏಕೆಂದರೆ ಅದಲ್ಲದೆ ಇರುವದಾದರೂ ಏನು? ಅದರ ವರ್ಣನೆಗೆ ಮಾತೆಲ್ಲಿ?

ಏಕಮಕ್ಷರಂ ಹೃದಿ ನಿರಂತರಂ

ಭಾಸತೇ ಸ್ವಯಂ ಲಿಖ್ಯತೇ ಕಥಮ್?

ಎನ್ನುತ್ತಾರೆ ರಮಣರು. ಎಂದರೆ ಏನಾಯಿತು? ಆತ್ಮದರ್ಶನಕ್ಕೆ ನಿಜವಾಗಿ

ಅಡ್ಡಿಯಾಗಿರುವದು ಉಪಾಧಿಗಳಲ್ಲ, ಒಂದೇ ಉಪಾಧಿ. ಅದು ನಾನು ಎಂಬ ಅಭಿಮಾನ. ಅದು ಎದ್ದುಕೊಂಡರೆ ಜಗತ್ತೇ ಏಳುತ್ತದೆ. ಅದು ಮುಳುಗಿದರೆ ಜಗತ್ತೇ ಮುಳುಗುತ್ತದೆ. ಜಗತ್ತು ಎದ್ದಾಗ ತೋರಿಕೊಳ್ಳುವ ಸಕಲ ವೈವಿಧ್ಯವನ್ನೂ ಸುಖ-ದುಃಖ-ರಾಗ-ದ್ವೇಷಾದಿಗಳ ಸಂತೆಯನ್ನೂ 'ಅಹಂ' ಎಂಬ ಒಂದೇ ಶಬ್ದದಿಂದ ಬಣ್ಣಿಸಬಹುದು. ಅಕಾರದಿಂದ 'ಹ' ಕಾರ (ಎ ಟು ಜೆಡ್) ಆದರಾಚೆ ಯಾವ ಬಣ್ಣನೆ ಸಾಧ್ಯ?

ಈ ಅಭಿಮಾನ- ಸಂಕಲ್ಪ - ವಿಕಲ್ಪರೂಪವಾಗಿ ಹರಿದರೆ ಅದಕ್ಕೆ ಹೆಸರು ಮನಸ್ಸು. ನಿಶ್ಚಯಾತ್ಮಕವಾಗಿ ಹರಿದರೆ ಅದು ಬುದ್ಧಿ. ಸ್ಮರಣಾತ್ಮಕವಾಗಿ ಹರಿದರೆ ಚಿತ್ತ. ಅದೆಲ್ಲವೂ ನಾನು ಎಂಬ ಒಂದೇ ಮೂಲವೃತ್ತಿ. ಅಲ್ಲಿಂದಲೇ ಎಲ್ಲ ವೃತ್ತಿಗಳ ಪ್ರವಾಹ. ಅತಿವೇಗದ ವೃತ್ತಿಗಳ ಪ್ರವಾಹ. ಒಂದನ್ನೊಂದು ಅಟ್ಟಿಹೋಗುತ್ತಿರುವದು ಅದರ ರೀತಿ. ಒಂದು ಯಾವದೋ ಎರಡು ಯಾವದೋ ಗುರುತಿಸಲಾಗದ ಪ್ರವಾಹ. ಅದರಲ್ಲೋ ಅಸಂಖ್ಯಾತ ಹನಿ-ಹನಿಗಳು. ಎಲ್ಲವೂ ನೀರು ತಾನೇ. ಅದರ ಉಗಮವನ್ನು ಗುರುತಿಸಿ ಅಲ್ಲಿ ಮುಳುಗಿದರೆ ಸಾಲದೆ?

ಅಹಮಪೇತಕಂ ನಿಜವಿಭಾನಕಂ
ಮಹದಿದಂ ತಪೋ ರಮಣವಾಗಿಯಮ್ (ಉ.ಸಾರ-೩೦)

ಆಗ ವೃತ್ತಿಗಳೆಲ್ಲವೂ ಅಡಗಿಹೋಗುತ್ತವೆ. ಪ್ರಶ್ನೆ-ಉತ್ತರ, ಸುಖ-ದುಃಖ ಸತ್ಯ-ಮಿಥ್ಯೆ, ಈಶ-ಜೀವ, ಎಲ್ಲ ಕಲ್ಪಿತದ್ವಂದ್ವಗಳೂ ಇಲ್ಲವಾಗುತ್ತವೆ. ಅರಿವು-ಪರಿಶುದ್ಧ ಅರಿವು (ಚಿತ್), ಇರವು ನಿಜವೊಂದೇ ಆದ ಇರವು (ಸತ್), ಸುಖ-ದ್ವಂದ್ವಾತೀತ (ಆನಂದ) ಅಖಂಡಸುಖ-ಇದೇ ಆತ್ಮಸ್ವರೂಪ. ತತ್ ತ್ವಂ. ಅದೇ ನೀನು. ಅಸಿ- ಆಗಿದ್ದೀಯೆ ಆಗಿದ್ದೇ ಆಗುತ್ತೀಯೆ ಅಲ್ಲ, ಇಲ್ಲಿ ಈಗ-ವರ್ತಮಾನ-ಆಗಿದ್ದೀಯೆ. ಆಗಿಯೇ ಇದ್ದೀಯೆ. ಇದು ಶ್ರುತಿವಾಕ್, ಇದು ರಮಣವಾಕ್.

ಹಾಗಾದರೆ ಅಹಂನ ಅಳಿವು ಇದೇ? ಇದೇ ತಪಸ್ಸು ಎಂಬ ಸಾಧನೆಯೇ? ಹೌದು, ಅಷ್ಟಲ್ಲದೆ ಏನು? ಏನು ಎನ್ನುತ್ತಾರೆ ರಮಣರು. ಹಾಗೆ ಅಳಿದಾಗ ಉಳಿಯುವದು ಏನು? ನಾನು ಇಲ್ಲವಾಗುತ್ತೇನೆಯೆ? ಇರುವದು ಎಂದೆಂದೂ ಇದ್ದದ್ದೇ. ನಾನು ಎಂಬ ಅಭಿಮಾನವಲ್ಲ, ನಾನು ಎಂಬ ಮೂಲವೃತ್ತಿಯಲ್ಲ, ನಿಜವಾದ

ನಾನು. ಅದು ನಾನು ಯಾರು? ಎಂಬ ಪ್ರಶ್ನೆಯಲ್ಲ, ನಾನು ಎಂಬ ನಿರಂತರಸ್ಫುರಣೆ. ಆದೇ ನಿಜದ ನಾನು. ನಿಜ ಎಂದರೆ ಆತ್ಮವಷ್ಟೆ? ಆ ಶಾಶ್ವತಸ್ಥಿತಿಯಲ್ಲಿ ಅಖಂಡ ಆನಂದ-ಅಖಂಡಮೌನದಲ್ಲಿ ಜೀವಗಳ ರೋದನವೆಲ್ಲಿ? ಜಗತ್ತಿನ ಜಾಲವೆಲ್ಲಿ? ಶೋಕಮೋಹಗಳಾದರೂ ಎಲ್ಲಿ? ಅದು ನಿಜ ವಿಭಾನಕ!

"ಶ್ರೀ ರಮಣಮಹರ್ಷಿಗಳು ಸ್ಪಷ್ಟಪಡಿಸುವಂತೆ ಅಹಂ ಎಂಬ ಅಭಿಮಾನದ ಅಳಿವೇ ನಿಜವಾದ ತಪಸ್ಸು. ಹೀಗಾಗಿ ಅವರ ಚಿಂತನೆಯಲ್ಲಿ ಅಹಂಸ್ವರೂಪದ ಶೋಧನೆ ಪ್ರಧಾನಪಾತ್ರವನ್ನು ವಹಿಸಿದೆ. ವಿಚಾರಮಾರ್ಗ ಎಂದರೆ ನಾನು ಎಂಬ ಈ ಮೂಲವೃತ್ತಿಯನ್ನು ಸಾಧನವಾಗಿರಿಸಿಕೊಂಡೇ ಅದರ ಉಗಮವನ್ನು ಶೋಧಿಸಲು ಹೊರಡುವದು- ಅದು ಜ್ಞಾನಾಗ್ನಿಯಲ್ಲಿ ತನಗೆ ತಾನೇ ಕರ್ಪೂರದ ಬೊಂಬೆಯಂತೆ ನಿಶ್ಶೇಷವಾಗುವದಕ್ಕಾಗಿಯೇ ಈ ಸಾಧನೆ. ಆದುದರಿಂದ ಅಹಂ ಸ್ವರೂಪದ ಖಚಿತ ವಿಶ್ಲೇಷಣೆ ಅವರ ಚಿಂತನದಲ್ಲಿ ದೊರೆಯುತ್ತದೆ. ಜಡವಾದ ದೇಹೇಂದ್ರಿಯಗಳು ನಾನು ಎಂಬುದನ್ನು ತಿಳಿಯಿತು-ಈವರೆಗೆ ತಿಳಿದಿರಲಿಲ್ಲ ಎಂದು ನುಡಿಯುವದು, ಅಷ್ಟೇಕೆ ನಾನು ಬ್ರಹ್ಮವಾಗಿದ್ದೇನೆ ಎಂದು ಶಾಬ್ದಿಕವಾಗಿ ಉದ್ಗರಿಸುತ್ತಿರುವದೂ ಆತ್ಮವಲ್ಲ, ಆತ್ಮದ ಭಾಷೆ ಮಾತು ಅಲ್ಲ, ಮೌನ. ಅಹಂ ಎಂಬ ಅಭಿಮಾನ ಗಾಳಿಯಂತೆ ನಿರೂಪಣೆ. ದೇಹಪ್ರಮಾಣದಲ್ಲಿ ಹುಟ್ಟಿದ ವೃತ್ತಿ, ಅದರೊಡನೆಯೇ ಜಗತ್ತೂ ಹುಟ್ಟಿತು-ಅಳಿಯಿತು. 'ಯತ್ರೋದಿತೋ ಸರ್ವಮುದೇತಿ। ಧಿಯಾಹಮ ಶ್ಯೋಧ್ರಯ ಜನ್ಮದೇಶಂ। (ಸದ್ದರ್ಶನ 23). ಈ ಅಹಂಮೂಲವನ್ನು ಶೋಧಿಸುವದೇ ಎಲ್ಲ ಸಾಧನೆ-ತಪಸ್ಸು. ಆತ್ಮವನ್ನು ಪಡೆಯುವದು ಅಲ್ಲ, ಆತ್ಮ ಪಡೆಯಬೇಕಾದ,' ಪಡೆಯಲು ಸಾಧ್ಯವಾದ ವಸ್ತುವಲ್ಲ, ವಿಷಯವಲ್ಲ. ವಿಚಿತ್ರವೆಂದರೆ ಗಾಳಿಯಂತೆ ರೂಪರಹಿತವಾದ ಈ ನಾನು. ನಾನು ಇಂಥವನು ಎಂಬ ರೂಪವನ್ನು ಕಲ್ಪಿಸಿಕೊಂಡೇ ಹುಟ್ಟುತ್ತದೆ. ನಾನು ಯಜಮಾನ-ತಂದೆ-ತಾತ-ಮಗ ಇತ್ಯಾದಿ ಸಂಬಂಧಗಳನ್ನೂ ಕಲ್ಪಿಸಿಕೊಳ್ಳುತ್ತದೆ. ಇವು ರೂಪಮಾತ್ರವಲ್ಲ-ರೂಪತತಿ-ರೂಪಗಳ ಗುಂಪು. ಅದರಿಂದಲೇ ಅಹಂ ಕೊಬ್ಬುತ್ತದೆ. ಆದರೆ ಪುಣ್ಯವಶಾತ್ (!) ಅದು ಒಮ್ಮೆಗೆ ಒಂದು ರೂಪದಲ್ಲಿ ಮಾತ್ರ ಇರಲು ಸಾಧ್ಯ. ಯಜಮಾನ- ಎಂದುಕೊಂಡಾಗ ಸೇವಕನಲ್ಲ, ಸೇವಕ ಎಂದುಕೊಂಡಾಗ- ತಂದೆ ಅಥವಾ ಗಂಡನಲ್ಲ. ಎಂದರೆ ಕುದುರೆಹುಳದಂತೆ.

ಮುಂಗಾಲಿನಲ್ಲಿ ಒಂದು ರೂಪವನ್ನು ಭದ್ರವಾಗಿ ಹಿಡಿಯುತ್ತದೆ. ಕೂಡಲೆ ಹಿಂಗಾಲನ್ನು ಬಿಟ್ಟುಬಿಡುತ್ತದೆ. ಹೀಗೆ ಹಿಡಿಯುವದು ಬಿಡುವದೇ ಅದರ ಆಟ. ಅದರ ವಿಜೃಂಭಣೆ ಎಂದರೆ ಅದಕ್ಕೆ ರೂಪದ ಅಶನ. ಒಂದಲ್ಲ ಒಂದು ರೂಪವನ್ನು ತಿಂದೇ ಬದುಕುತ್ತದೆ. ವಿಜೃಂಭಿಸುತ್ತದೆ. ಹಿಡಿಯುವ, ಬಿಡುವ ತಿಂದುತಿಂದು ಬದುಕುವ ಪಿಶಾಚ ಅದು. ಅದರ ನಿಜರೂಪ ಯಾವದು? ನಿಜವಾಗಿ ಅದಕ್ಕೆ ರೂಪವೇ ಇಲ್ಲ. ಅದನ್ನು ಹಿಡಿಯುವದು-ಕೊಲ್ಲುವದು ಹೇಗೆ? "ಸ್ವಯಂ ವಿರೂಪಃ ಸ್ವವಿಚಾರಕಾಲೇ" ಆತ್ಮವಿಚಾರ-ವಿಚಾರ ಒಂದೇ ಮಾರ್ಗ. ಆಗ ಏನಾಗುತ್ತದೆ? 'ಧಾವತ್ಯಹಂಕಾರ ಪಿಶಾಚ ಏಷಃ' (ಸದ್ದರ್ಶನ : 25) ಹೀಗಾಗಿ ಅಧ್ಯಾತ್ಮಸಾಧನೆ, ಆತ್ಮದ ಸಾಧನೆಯಲ್ಲ, ಅಹಂಕಾರದ ಶೋಧನೆ. ಆತ್ಮ ಸಾಧಿಸಲ್ಪಡುವ ವಸ್ತುವಲ್ಲ, ಅದು ಇದ್ದೇ ಇದೆ- ಸ್ವಪ್ರಕಾಶದಿಂದ ಬೆಳಗುತ್ತಲೇ ಇದೆ. ಶೋಧನೆಗೆ ಹೊರಟ ಅಹಂ, ತನ್ನ ಮೂಲವನ್ನೇ ಹುಡುಕಿ ಆ ದಿವ್ಯ ಪ್ರಕಾಶದ ಎದುರು ನಿಂತಾಗ ಅದು ಸಾಗರದಲ್ಲಿ ಮುಳುಗಿದ ಲವಣ. ಬೆಂಕಿಗೆ ಸೋಂಕಿದ ಕರ್ಪೂರ, ನಿಶ್ಶೇಷ। ಅಹಂ ತಲೆ ಎತ್ತಿತು : "ಸರ್ವಮಿದಂ ವಿಭಾತಿಃ" ಅದು ಅಳಿಯಿತು, ನೈವ ವಿಭಾತಿ ಕಿಂಚಿತ್" ಆದುದರಿಂದಲೇ "ತಸ್ಮಾದಹಂ ರೂಪಮಿದಂ ಸಮಸ್ತಂ । ತನ್ಮಾರ್ಗಣಂ ಸರ್ವಜಯಾಯ ಮಾರ್ಗಃ" (ಸದ್ದರ್ಶನಂ) ಈ ಅಹಂನಾಶವೇ ಆಧ್ಯಾತ್ಮಸಾಧನೆ. ಸ್ವಸ್ವರೂಪಸ್ಥಿತಿಯೇ ಅಧ್ಯಾತ್ಮಸಿದ್ಧಿ. ಅದು ಪಡೆಯುವದಲ್ಲ, ಇರುವದು. ಅಹಂ ನಾಶವಾದಾಗ ಅದರ ಪೂರ್ಣ ಅನುಭವ- ಸಹಜವಾಗಿ ಇದ್ದುದರ ಅನುಭವ, ಸ್ವಾನುಭವ. ಹೊಸದಾಗಿ ಪಡೆದದ್ದಲ್ಲ. ಅದು ಪಡೆಯುವಂತಹುದಲ್ಲ, ಇರುವಂತಹುದು. ಅಧ್ಯಾತ್ಮಸಾಧನೆ ಎಂದರೆ ಈ ಸ್ವಾನುಭವಕ್ಕೆ ತಡೆಯಾಗಿ, ಮಾಯೆಯಾಗಿ ಕಾಡುವ ಅಹಂಕಾರವನ್ನು ಮುಳ್ಳಿನಿಂದ ಮುಳ್ಳನ್ನು ತೆಗೆಯುವಂತೆ ತೆಗೆದ ನಂತರ ಅದನ್ನೇ ಎಸೆಯುವಂತೆ ಅಹಂಕಾರವಿಸರ್ಜನೆ- ನಾಶ. ಆಗ ಆತ್ಮವೇ ಬೆಳಕು, ಏಕಮಾತ್ರ ಅದ್ವಿತೀಯ, ಅದೇ ನಾವು ಮರೆತಿದ್ದ ಮರೆತು ಕೊರಗುತ್ತಿದ್ದ ಕೊರಗುತ್ತಲೇ ಹುಡುಕುತ್ತಿದ್ದ ನಮ್ಮದೇ ಸಹಜಸ್ವರೂಪ. ಆ ಅನುಭವದಲ್ಲಿ ನೆಲೆನಿಂತಾಗ, ಈವರೆಗೆ ಈ ಅನುಭವಕ್ಕೆ ಉಪಾಧಿಯಾಗಿದ್ದ ಅಹಂಕಾರದ ಮಿಥ್ಯೆ ಎಲ್ಲಿದೆ ? ಭಗವಾನ್

ರಮಣರು ದೃಢವಾಗಿ ನುಡಿಯುತ್ತಾರೆ. ''ಏತದಹಂತಾಪರಿಭುಗ್ನ ಶೀರ್ಷಾ-'' ಈವರೆಗೆ ಕಾಡಿದ ಅಹಂ ತಲೆಕತ್ತರಿಸಿ ಬೀಳುತ್ತದೆ. ಆಗ-ಆಗಲೂ ಯಾವಾಗಲೂ ಪ್ರಕಾಶಿಸುತ್ತಲೇ ಇದ್ದ ನಿಜವಾದ ನಾನು (ನನ್ನ ನೆರಳಲ್ಲ, ನಾನು!) ಸ್ಫುರತಿ ಪ್ರಕೃಷ್ಟಂ । ನಾಹಂಕೃತಿಃ । ತತ್ ಪರಮೇವ ಪೂರ್ಣಂ ॥ ತಾನೇ ತಾನಾಗಿ ಬೆಳಗುತ್ತಲೇ ಇದ್ದ, ಜೀವ ಅಜ್ಞಾನದಿಂದ ಮರೆತಿದ್ದ ನಿಜದ ನಾನು; ಈ ನಾನು ಅಹಂಕಾರವಲ್ಲ, ಅದು ತಲೆ ಕತ್ತರಿಸಿ ಬಿದ್ದಾಯಿತು, ಅದರ ಕಥೆ ಮುಗಿಯಿತು- ಪರಿಭುಗ್ನಶೀರ್ಷಾ -ಅಗ್ನಿಯ ಎದುರು ನಿಂತ ಕರ್ಪೂರ ಅದು, ಅದರ ಕಥೆ ಮುಗಿದ ಕಥೆ. ಈ ಅನುಭವದ ಬೆಳಕು, ಸ್ವಪ್ರಕಾಶ ತಾನೇತಾನಾಗಿ ನಿರಂತರವಾಗಿ ಬೆಳಗುತ್ತಲೇ ಇರುವಂತಹುದು. ಅದು ಈವರೆಗೆ ಕಾಡಿದ ಅಹಂವೃತ್ತಿಯಲ್ಲ ಅಹಂ-ಕಾರವಲ್ಲ, ಅಹಂಸ್ಫುರಣ. ನಿಜದ ನಾನು. ಪರಂ ಪೂರ್ಣಂ ಏವ-ಇದ್ದದ್ದು-ಮರೆತದ್ದು- ಸದಾ ಇರುವಂತಹುದು- ಹೊಸದಾಗಿ ಪಡೆದದ್ದಲ್ಲ! ಪರಿಪೂರ್ಣವಾದ, ಕಾಲದೇಶದ ಉಪಾಧಿಗಳೇ ಇಲ್ಲದ ಪೂರ್ಣಪ್ರಕಾಶ. ಅದು ನಿಜದ ನಾನು!

ಈ ಅನುಭವವೇ ತಾನಾದ ಆತ್ಮವಂತನ ಸ್ಥಿತಿಯನ್ನು ಯಾರು ತಾನೇ ವರ್ಣಿಸಲು ಸಾಧ್ಯ? ಅವನು ಪಡೆಯುವಂತಹುದು, ಮಾಡಬೇಕಾದ್ದು ಮತ್ತೇನು? ಸರ್ವಂ ಬ್ರಹ್ಮಮಯಂ । ''ಕೃತ್ಯಮಸ್ತಿ ಕಿಂ ಸ್ವಸ್ಥಿತಿಂ ಯತಃ?'' ಅಂಥವನ ಸನ್ನಿಧಿಯಲ್ಲಿ ಎಲ್ಲವೂ ಆಗುತ್ತಿದೆ-ಆಗುತ್ತದೆ ಅಷ್ಟೆ ! ಅದು ತಮ್ಮ ತಮ್ಮ ನಿಜದ ದರ್ಶನಕ್ಕಾಗಿ. ಕಮಲ ದಳದಳವಾಗಿ ಅರಳುತ್ತದೆ, ನೂರು ಹಕ್ಕಿಗಳು ಚಿಲಿಪಿಲಿಗುಟ್ಟುತ್ತವೆ. ಜೀವ-ಜೀವದ ಕೋಲಾಹಲ ನಡೆಯುತ್ತಲೇ ಇರುತ್ತದೆ. ಎಲ್ಲವೂ ಸರ್ವಾತ್ಮನ ಸಾಕ್ಷಿಯಲ್ಲಿ, ಜೀವದ ಉದ್ಧಾರ ನಿರಂತರವಾಗಿ ನಡೆಯುತ್ತಲೇ ಇದೆ. ಆತ್ಮದ ಬೆಳಕಿನಲ್ಲಿ-ಏಕೆಂದರೆ ಆತ್ಮವೇ ಬೆಳಕಷ್ಟೆ! ಸತ್ಯಂ, ಜ್ಞಾನಂ, ಅನಂತಂ । ಸರ್ವಧೀ ಸಾಕ್ಷಿಭೂತಂ । ಸ್ವಪ್ರಮಾಣಕವೂ ಸ್ವಪ್ರಕಾಶಿತವೂ ಆದ ಅದನ್ನು ಬೆಳಗಲು ಬೇರೆ ಬೆಳಕಾದರೂ ಏಕೆ? ನಾನು ಬೆಳಗುತ್ತಿದ್ದೇನೆ-ಅದು ಹೀಗೆ ಹೇಳುತ್ತದೆಯೆ? ಹೇಳಬೇಕಾದರೂ ಏಕೆ ? ಆ ನೆಲೆಯಲ್ಲಿ ಸ್ಥಿರವಾಗಿ ನಿಲ್ಲಲೆಂದೇ ಎಲ್ಲ ಸಾಧನೆ. ನಿಂತಮೇಲೆ ಸಾಧನೆ ಎಲ್ಲಿ ? ಏಕೆ? ಆದುದರಿಂದ ಈವರೆಗಿನ

ಸಾಧನೆಗಳೆಲ್ಲವೂ, ಆ ಬಗೆಗಿನ ಚರ್ಚೆಗಳೆಲ್ಲವೂ ಮಾಯೆಯ ಆಟ. ರಮಣರೆನ್ನುತ್ತಾರೆ : ಆತ್ಮನಲ್ಲಿ ನೆಲೆನಿಂತರೆ ಈ ಮಾಯೆಯ ಆಟವೂ ನಿಲ್ಲುತ್ತದೆ.

ಹಾಗೆ ನೆಲೆನಿಂತವನಿಗೆ ಆತ್ಮಚರ್ಚೆ, ಬಂಧ, ಯತ್ನ, ಮುಕ್ತಿ-ಎಲ್ಲವೂ ಕೇವಲ ವಾಗ್ವಿಜೃಂಭಣವಾಗಿಯೇ ತೋರುತ್ತದೆ. ಶ್ರೀ ಶಂಕರರು ಸರಿಯಾಗಿಯೇ ವಿಡಂಬಿಸಿರುವಂತೆ ಎಲ್ಲವೂ ಮಾತಿನ ಮಳೆಯೇ!

ವಾಗ್ ವೈಖರೀ-ಶಬ್ದಝರೀ ಶಾಸ್ತ್ರವ್ಯಾಖ್ಯಾನಕೌಶಲಮ್ ।
ವೈದುಷ್ಯಂ- ವಿದುಷಾಂ - ತದ್ವತ್ ಭುಕ್ತಯೇ ನ ತು ಮುಕ್ತಯೇ ॥
(ವಿವೇಕ ಚೂಡಾಮಣಿ- 58)

ನಿಜವಾದ ಆತ್ಮನಿಷ್ಠನ ಸ್ಥಿತಿಯನ್ನು ಯಾವ ಮಾತಿನಲ್ಲಿ ವರ್ಣಿಸಲು ಸಾಧ್ಯ ? ಅದು ಅನುಭವೈಕವೇದ್ಯ. ಸ್ವಾನುಭವವೊಂದೇ ಅದಕ್ಕೆ ಪರಮಪ್ರಮಾಣವಷ್ಟೆ? ಆದುದರಿಂದಲೇ ರಮಣಮಹರ್ಷಿಗಳು, 'ದಕ್ಷಿಣಾಮೂರ್ತಿಯ ಮಹಾಮೌನಕ್ಕೆ ವ್ಯಾಖ್ಯಾನವೇಕೆ? ಅದು ಅನುಭವವೇದ್ಯ'- ಎನ್ನುತ್ತಾರೆ.

"ಹೃತ್ಪ್ರಾಪ್ಯ ಸದ್ಧಾಮ ನಿಜಸ್ವರೂಪೇ ಸ್ವಭಾವಸಿದ್ಧೇऽನುಪಲಭ್ಯ ನಿಷ್ಠಾಮ್ ।
ಮಾಯಾವಿಲಾಸಃ ಸದಸತ್ಸ್ವರೂಪ-ವಿರೂಪನಾನೈಕಮುಖಪ್ರವಾದಾಃ"
(ಸದ್ದರ್ಶನಂ : ೩೪)

ಹೃದಯಧಾಮದಲ್ಲಿ, ತನ್ನ ಸ್ವರೂಪದಲ್ಲಿ -ಆತ್ಮನಲ್ಲಿ-ನೆಲೆನಿಲ್ಲದೆ, ಈ ಆತ್ಮನು ಸಗುಣನೊ, ನಿರ್ಗುಣನೊ, ಒಬ್ಬನೊ, ಅನೇಕರೊ- ಎಂಬ ಇತ್ಯಾದಿ ಬರಿಯ ವಾದವಿವಾದಗಳೆಲ್ಲವೂ ಮಾಯೆಯ ಆಟ, ಬರಿಯ ಅಬ್ಬರ ಆರ್ಭಟ ಎನ್ನುತ್ತಾರೆ.

ಈ ಆಟ, ಆರ್ಭಟಗಳೆಲ್ಲ ಮಾಯಾವಿಲಾಸವಲ್ಲವೆ? ನಿಮ್ಮಲ್ಲಿ ನೀವು ನೆಲೆನಿಂತಾಗ ಈ ಎಲ್ಲವೂ ನಿಲ್ಲುತ್ತವೆ. ಅಲ್ಲಿ ಎಲ್ಲವೂ ನಿಶ್ಚಲಮೌನ-ಮಹಾಮೌನ. ಕೇವಲಾನುಭವದ, ರಮಣಾನುಭವದ ಶ್ರೀ ಶಂಕರಸ್ಥಿತಿ ಅದು !

ಓಂ ತತ್ಸತ್ ।

# 16. ಟಿಪ್ಪಣಿ

ಆಧ್ಯಾತ್ಮಪ್ರಕಾಶದ ಸಂಪಾದಕರ ವಾತ್ಸಲ್ಯದ ಆಹ್ವಾನದಿಂದ ಈ ಚಿಂತನ ಮಾಲೆ ಸಾಧ್ಯವಾಯಿತು. ಇದೀಗ ಮುಕ್ತಾಯವಾಗುತ್ತಿದೆ. ಭಗವಾನ್ ಶ್ರೀ ರಮಣ ಮಹರ್ಷಿಗಳು ಶ್ರೀ ಶಾಂಕರ ಅದ್ವೈತದ ಮೂರ್ತಿಮಂತ ಸ್ವರೂಪ. ಅದ್ವೈತದ ಅಖಂಡ ಅನುಭವ. ಜೀವನ ಪರಮಸ್ಥಿತಿ - ಸಹಜಸ್ಥಿತಿ. ಅವಿದ್ಯಾನಾಶದಿಂದ ಈ ಸ್ಥಿತಿಯ ಅನುಭವ ಶತಸ್ಸಿದ್ಧ ಎಂಬುದನ್ನು ಸ್ವಾನುಭವದಿಂದಲೇ ಕಂಡುಕೊಂಡ ಮಹಾಚೇತನ ಶ್ರೀ ರಮಣರು. ಅಧ್ಯಾತ್ಮಪ್ರಕಾಶದ ನವೆಂಬರ್ ಮಾಹೆಯ ಸಂಚಿಕೆಯಲ್ಲಿ ಪರಮಪೂಜ್ಯ ಶ್ರೀ ಸಚ್ಚಿದಾನಂದೇಂದ್ರ ಸ್ವಾಮೀಜಿಯವರು 1951ರ ಜನವರಿ ಸಂಚಿಕೆಯಲ್ಲಿಯೇ ಬರೆದ ಲೇಖನದ ಪುನರ್ಮುದ್ರಣ ವಾಗಿರುವದನ್ನು ವಾಚಕರು ಗಮನಿಸಿರಬಹುದು. ಪ್ರಕೃತ ಲೇಖನಮಾಲೆಗೆ ಪೂಜ್ಯರ ಭರತವಾಕ್ಯದ ಅನುಗ್ರಹವೇ ಆ ಪುನರ್ಮುದ್ರಣ ಎಂದು ಭಾವಿಸಿ ಲೇಖಕನು ಹರ್ಷಭಾಷ್ಪ ಪುಳಕಿತನಾಗಿದ್ದಾನೆ. ಇದೂ ಸಹ ಆಕಸ್ಮಿಕವಲ್ಲ, ಗುರುವಾತ್ಸಲ್ಯದ ಪರಮಕೃಪೆ ಎಂದೇ ಈ ಲೇಖಕನ ವಿನೀತ ಭಾವನೆ. 'ಅವಚನೇನೈವ ಪ್ರೋವಾಚ' ಎಂಬ ಸಾರ್ಥಕ-ಸುಂದರ ಶೀರ್ಷಿಕೆಯಲ್ಲಿ ಪೂಜ್ಯ ಗುರುಗಳ ಲೇಖನ ಪ್ರಕಟವಾಗಿರುವದು ಅರ್ಥಪೂರ್ಣವಾದ ಯೋಗಾಯೋಗ ಎಂದೇ ಭಾವಿಸಬೇಕಿದೆ. ಲೇಖನಮಾಲೆಗೆ ಆಯಾಚಿತವಾಗಿ ದೊರೆತ ಸದ್ಗುರುವಿನ ಪೂರ್ಣಾನುಗ್ರಹ ಎಂದೇ ಈ ಲೇಖಕನ ವಿನಮ್ರಶ್ರದ್ಧೆಯಾಗಿದೆ. ಅದನ್ನು ಕೇವಲ ವಾತ್ಸಲ್ಯದಿಂದ ದೊರಕಿಸಿಕೊಟ್ಟ ಆಧ್ಯಾತ್ಮ ಪ್ರಕಾಶದ ಸಂಪಾದಕರಿಗೆ ಲೇಖಕನ ಅನಂತ ಕೃತಜ್ಞತೆಗಳು ಸಲ್ಲುತ್ತವೆ. 'ಮೌನದಿಂದಲೇ ಪರಮಾರ್ಥವನ್ನು ವ್ಯಾಖ್ಯಾನಮಾಡಬಹುದು- ಎಂಬುದಕ್ಕೆ ಈ ನಮ್ಮ ಕಾಲದಲ್ಲೂ ಕೆಲವರು ಮಹಾತ್ಮರು ನಿದರ್ಶನವಾಗಿರುತ್ತಾರೆ'. ಎನ್ನುತ್ತಾ ಪೂಜ್ಯರು ಅರುಣಾಚಲದ ಮಹರ್ಷಿಗಳನ್ನು ಉದಾಹರಿಸಿದ್ದಾರೆ. 'ಆಧ್ಯಾತ್ಮವಿದ್ಯೆಯ ಮಹತ್ವವನ್ನೂ ಮೌನದ ಉಚ್ಚಭೂಮಿಕೆಯನ್ನೂ ತಮ್ಮ ಜೀವನಕ್ರಮದಿಂದಲೇ

ನಮಗೆ ತಿಳಿಸಿಕೊಟ್ಟಿದ್ದಾರೆ.' ಎಂದು ಮಹರ್ಷಿಗಳನ್ನು ಕುರಿತು ಅರ್ಧಶತಮಾನಕ್ಕೆ ಮೊದಲೇ ನಮ್ಮ ಸ್ವಾಮಿಗಳು ನುಡಿದಿರುವದರ ಪುನಃಸ್ಮರಣೆ ಈ ಲೇಖನಮಾಲೆಗೆ ಸಂದ ಭರತವಾಕ್ಯವೆಂದೇ ದೃಢವಾಗಿ ನಿಶ್ಚಯಿಸಿ ಪ್ರಕೃತ ಲೇಖಕ ಧನ್ಯತಾಭಾವವನ್ನು ಅನುಭವಿಸುತ್ತಿದ್ದಾನೆ. ಈ ಮಹದನುಗ್ರಹಕ್ಕಾಗಿ ಪರಮಪೂಜ್ಯಸ್ವಾಮಿಜೀಯವರ ಲೇಖನದ ಪುನರ್ಮುದ್ರಣದ ಮೂಲಕ ಸಂಪಾದಕರು ಕೃಪಾವರ್ಷವನ್ನೇ ಸುರಿಸಿದ್ದಾರೆ. - ಎಂಬ ಕೃತಜ್ಞತಾಭಾವದಿಂದ ಪ್ರಕೃತ ಚಿಂತನಮಾಲೆಗೆ ಮುಕ್ತಾಯವನ್ನು ಸೂಚಿಸಬೇಕಾಗಿದೆ.

ಭಗವಾನ್ ರಮಣಮಹರ್ಷಿಗಳ ಜೀವನ- ಸಂದೇಶ (ಎರಡೂ ಒಂದೇ ಆಗಿದೆಯಷ್ಟೆ!) ವನ್ನು ವಿವರವಾಗಿ ತಿಳಿಯಬಯಸುವವರು ಪಾಲ್ ಬ್ರಂಟನ್ ಅವರ "ರಮಣಮಹರ್ಷಿ ಮತ್ತು ಅವರ ಸಂದೇಶ", ಬಿ. ವಿ. ನರಸಿಂಹಸ್ವಾಮಿಯವರ "ಆತ್ಮಸಾಕ್ಷಾತ್ಕಾರ", ಓಸ್‌ಬರ್ನ್ ಹಾಗೂ ಸ್ವಾಮಿನಾಥನ್ ಅವರು ಬರೆದ ಮಹರ್ಷಿಗಳ ಜೀವನ ಚರಿತ್ರೆಗಳನ್ನೂ, "ಶ್ರೀ ರಮಣ ಮಹರ್ಷಿಗಳೊಡನೆ ಮಾತುಕತೆ" (ಮೂಲ : TALKS WITH MAHARSHI, RAMAANANDA SARASWATHI) ಮುಂತಾದ ಉದ್ಗ್ರಂಥಗಳನ್ನು ಅಭ್ಯಾಸಮಾಡಬಹುದಾಗಿದೆ. ಇವೆಲ್ಲವೂ ಕನ್ನಡಭಾಷೆಯಲ್ಲಿಯೂ ಈಗ ದೊರೆಯುತ್ತವೆ.

"ಓಂ ನಮೋ ಭಗವತೇ ಶ್ರೀ ರಮಣಾಯ"

# ಅನುಬಂಧ (ಅವಚನೇನೈವ ಪ್ರೋ ವಾಚ)

## (ಶ್ರೀ ಶ್ರೀ ಸಚ್ಚಿದಾನಂದೇಂದ್ರ ಸರಸ್ವತೀ ಸ್ವಾಮಿಗಳು)

(ಅಧ್ಯಾತ್ಮಪ್ರಕಾಶದ 1951ನೆಯ ಜನವರಿ ಸಂಚಿಕೆಯಿಂದ)

ಭರತಖಂಡದ ಸಂಸ್ಕೃತಿಯಲ್ಲಿ ಅಧ್ಯಾತ್ಮವಿದ್ಯೆಗೆ ಬಹಳ ಹೆಚ್ಚಿನ ಸ್ಥಾನವಿದೆ. ಅಧ್ಯಾತ್ಮವಿದ್ಯೆಯೆಂದರೆ ಪರಮಾರ್ಥಗಳನ್ನು ಸಾಕ್ಷಾತ್ಕರಿಸಿಕೊಂಡು ಆನಂದಿಸುವುದು. ಈ ವಿದ್ಯೆಯಿಂದ ಒಂದಾನೊಂದು ತತ್ತ್ವವನ್ನು ಅರಿತುಕೊಂಡದ್ದರಿಂದ ಎಲ್ಲವನ್ನೂ ಅರಿತುಕೊಂಡಂತೆ ಆಗುವದೆಂದು ಉಪನಿಷತ್ತುಗಳಲ್ಲಿ ಮತ್ತೆ ಮತ್ತೆ ಹೇಳಿರುತ್ತದೆ.

ಆದ್ದರಿಂದಲೇ ಅಧ್ಯಾತ್ಮವಿದ್ಯೆಯ ಸಂಪಾದನೆಗಾಗಿ ಮಿಕ್ಕ ಎಲ್ಲವನ್ನೂ ಕಡೆಗಣಿಸಿ ಎಲ್ಲವೂ ಅನಿತ್ಯವು, ಅಸಾರವು, ಎಂದು ಮನಗಂಡು ವೈರಾಗ್ಯದಿಂದ ಸದ್ಗುರುವನ್ನು ಸೇರಬೇಕು. ಇದಕ್ಕಿಂತ ಹೆಚ್ಚಿನ ವಿದ್ಯೆಯಿಲ್ಲ, ಇದರಲ್ಲಿ ಹೇಳಿರುವ ವಿಷಯಕ್ಕಿಂತ ಹೆಚ್ಚಿನ ತತ್ತ್ವವೂ ಇಲ್ಲ, ಎಲ್ಲಾ ವಿದ್ಯೆಗಳೂ ಈ ವಿದ್ಯೆಯಲ್ಲಿ ಕೊನೆಗಾಣುವವು. ಆದ್ದರಿಂದ ಇದನ್ನು 'ಬ್ರಹ್ಮವಿದ್ಯೆ' ಎಂದೂ 'ಆತ್ಮವಿದ್ಯೆ'- ಎಂದೂ ಕರೆಯುತ್ತಾರೆ.

ಆದರೆ ಬ್ರಹ್ಮವಿದ್ಯೆಯು ಅಥವಾ ಆತ್ಮವಿದ್ಯೆಯು ಹೇಳುವ ಪರಮಾರ್ಥತತ್ತ್ವವು ಎಂಥದ್ದು ? ಅದರ ಸ್ವರೂಪವು ಹೇಗಿರುವದು ? ಎಂಬ ಪ್ರಶ್ನೆಗೆ ಬಲ್ಲವರು ಒಂದು ವಿಲಕ್ಷಣಭಾಷೆಯಿಂದ ಉತ್ತರವನ್ನು ಹೇಳಿರುತ್ತಾರೆ. ಆ ತತ್ತ್ವವು ಅನುಭವೈಕವೇದ್ಯವು. ಅದನ್ನು ಇಂಥದ್ದು ಅಂಥದ್ದು - ಎಂದು ವರ್ಣಿಸಿ ತಿಳಿಸುವುದಕ್ಕೆ ಆಗಲಾರದು. ಅದನ್ನು ಯಾವನಾದರೂ ಲಕ್ಷಣವಾಕ್ಯದಿಂದ ತಿಳಿಸಿದರೆ ಅದಕ್ಕೆ ಪರಿಚ್ಛೇದವನ್ನು ಕಲ್ಪಿಸಿದಂತಾಗುತ್ತದೆ. ಆ ವರ್ಣನೆಯಿಂದ ಅದನ್ನು ಹೆಚ್ಚಿನದೆಂದು ತಿಳಿಸುವದಕ್ಕೆ ಬದಲು ಅದರ ಗೌರವವನ್ನು ಕಡಿಮೆಮಾಡಿದಂತಾಗುತ್ತದೆ - ಎಂಬುದೇ ಅನುಭವಿಗಳ ಉತ್ತರವು. ಹಿಂದೆ ಬಾಷ್ಕಲಿ - ಎಂಬಾತನು ಬಾಧ್ವನೆಂಬ ಋಷಿಯನ್ನು "ಪರಮಾರ್ಥತತ್ತ್ವವನ್ನು ನನಗೆ ತಿಳಿಸಿಕೊಡಿರಿ" ಎಂದು ಮತ್ತೆ ಮತ್ತೆ ಕೇಳಿದರೂ ಏನೊಂದು ಮಾರುತ್ತರವನ್ನೂ ಕೊಡದೆ ಸುಮ್ಮನೆ ಇರುತ್ತಿದ್ದರಂತೆ. ಕೊನೆಗೆ ಮತ್ತೂ ಶಿಷ್ಯನು ಕೇಳಿದ್ದಕ್ಕೆ "ಅಪ್ಪ, ನಾನು ಹೇಳುತ್ತಲೇ ಇದ್ದೇನೆ. ಆದರೆ ನೀನು ಇದನ್ನು ಅರಿತುಕೊಳ್ಳದೆ ಇರುವೆ. ಈ ಪರಮಾತ್ಮನು ಉಪಶಾಂತನಾಗಿರುವನು. ಸಕಲ ವಿಶೇಷಗಳನ್ನೂ ಮೀರಿದವನಾಗಿರುತ್ತಾನೆ" ಎಂದು ನುಡಿದನಂತೆ.

ಮೌನದಿಂದಲೇ ಪರಮಾರ್ಥವನ್ನು ವ್ಯಾಖ್ಯಾನಮಾಡಬಹುದೆಂಬುದಕ್ಕೆ ಈ ನಮ್ಮ ಕಾಲದಲ್ಲಿಯೂ ಕೆಲವರು ಮಹಾತ್ಮರು ನಿದರ್ಶನವಾಗಿರುತ್ತಾರೆ. ಇದಕ್ಕೆ ತೀರ ಇತ್ತೀಚಿನ ಉದಾಹರಣೆಗಳನ್ನು ಕೊಡಬೇಕೆಂದರೆ ಅರುಣಾಚಲದ ಮಹರ್ಷಿಗಳನ್ನೂ ಪಾಂಡಿಚೆರಿಯ ಶ್ರೀ ಅರವಿಂದಘೋಷರನ್ನೂ ಉದಾಹಿಸಬಹುದಾಗಿದೆ. ಈ ಇಬ್ಬರು

ಮಹನೀಯರುಗಳೂ ಅಧ್ಯಾತ್ಮವಿದ್ಯೆಯ ಮಹತ್ತ್ವವನ್ನೂ ಮೌನದ ಉಚ್ಚಭೂಮಿಕೆಯನ್ನೂ ತಮ್ಮ ಜೀವನ ಕ್ರಮದಿಂದ ನಮಗೆ ತಿಳಿಸಿಕೊಟ್ಟಿರುತ್ತಾರೆ.

ರಮಣಮಹರ್ಷಿಗಳು : ಇವರು ಬಾಲ್ಯದಿಂದಲೇ ಅರುಣಾಚಲದ ಮಹಿಮೆಯನ್ನು ಕೇಳಿ ಪರಮವೈರಾಗ್ಯವನ್ನು ತಳೆದು ಆ ಪವಿತ್ರಕ್ಷೇತ್ರಕ್ಕೆ ದಯಮಾಡಿಸಿದರು. ಪರಮಾತ್ಮನನ್ನು ನಮ್ಮ ಹೃದಯಾಂತರಾಳದಲ್ಲಿರುವ ಆಕಾಶದಲ್ಲಿ ನೇರಾಗಿ ಕಂಡು ಆನಂದಿಸಬಹುದು- ಎಂಬುದನ್ನು ತಮ್ಮ ತಪಃಪ್ರಧಾನವಾದ ಜೀವನದಿಂದ ಲೋಕಕ್ಕೆ ತಿಳಿಸಿಕೊಟ್ಟರು. ಅವರ ಕೀರ್ತಿಯು ಅವರ ಪ್ರಯತ್ನವಿಲ್ಲದೆಯೇ ನಾಗರಿಕಭೂಮಂಡಲವನ್ನೆಲ್ಲ ವ್ಯಾಪಿಸಿತು. ಅವರ ದರ್ಶನವನ್ನು ತೆಗೆದುಕೊಂಡು, ಅವರಿಂದ ಯಾವ ಉತ್ತರವನ್ನೂ ಪಡೆಯದೆ ಇದ್ದರೂ ಪ್ರಶಾಂತಹೃದಯರಾಗಿ ಹಿಂತಿರುಗಿದವರು ನೂರಾರು ಮಂದಿ ಇರುತ್ತಾರೆ. ಅವರು ತಮಿಳುಭಾಷೆಯಲ್ಲಿ ರಚಿಸಿರುವ "ಉಳ್ಳದು ನಾರ್ಪದು" ಎಂಬ ಸದ್ವಿದ್ಯಾದರ್ಶನದ ನಲವತ್ತು ಪದ್ಯಗಳನ್ನು ನೇರಾಗಿ ಅಥವಾ ಭಾಷಾಂತರದಿಂದ ಓದಿ ಮನಶ್ಶಾಂತಿಯನ್ನು ಹೊಂದಿದವರು ಲೆಕ್ಕವಿಲ್ಲದಷ್ಟು ಜನರು ಈಗಲೂ ಇರುತ್ತಾರೆ.

ಅರವಿಂಧಘೋಷರು : ಇವರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸವನ್ನು ಪಡೆದು ನಮ್ಮ ದೇಶದ ತರುಣರ ತಲೆಯನ್ನು ತಿರುಗಿಸುವ ರಾಜಕೀಯ ಚಳುವಳಿಯ ಸಮುದ್ರದಲ್ಲಿ ಈಜಿ ಲೋಕವಿಖ್ಯಾತರಾದವರು. ಅವರು ಸಂಪಾದಕರಾಗಿದ್ದ "ವಂದೇ ಮಾತರಮ್" "ಕರ್ಮಯೋಗಿನ್" "ಧರ್ಮ" ಎಂಬ ರಾಜಕೀಯ ವಿಚಾರದ ಪತ್ರಿಕೆಗಳಲ್ಲಿಯೂ, ಅವರಿಗೆ ಪ್ರಾಚೀನಸಂಸ್ಕೃತಿಯಲ್ಲಿದ್ದ ಗೌರವವು ಹೊರಸೂಸುತ್ತಿತ್ತು. ಆದರೆ ಕಾಲಕರ್ಮಸಂಯೋಗದಿಂದ ಅಧ್ಯಾತ್ಮಯೋಗದ ಹೆಚ್ಚುಗಾರಿಕೆಯು ಅವರ ಮನಸ್ಸನ್ನು ಸೆಳೆಯಿತು. ಪಾಂಡುಚೆರಿಯಲ್ಲಿ ಅವರು ಸ್ಥಾಪಿಸಿದ ಆಶ್ರಮವು ನಾನಾ ಜನಾಂಗದವರನ್ನೂ ಶಾಂತಿಯ ಅನ್ವೇಷಣೆಗಾಗಿ ಅಲ್ಲಿಗೆ ಕರೆತಂದಿತು. ಅವರ ದರ್ಶನಮಾತ್ರದಿಂದಲೇ ಧನ್ಯರಾದೆವೆಂದು ಎಣಿಸುವ ಸಾವಿರಗಟ್ಟಲೆಯ ಸಾಧಕರು ಅಲ್ಲಿ ನೆರೆಯುತ್ತಿದ್ದರು. ಅವರು ಇಂಗ್ಲಿಷ್‌ನಲ್ಲಿ ಬರೆದಿರುವ 'ದಿವ್ಯಜೀವನ್' (Life Divine) ವೆಂಬ ಗ್ರಂಥವು ಅನೇಕ ತತ್ತ್ವ ಜಿಜ್ಞಾಸುಗಳಿಗೆ ವೇದವಾಗಿ ಪರಿಣಮಿಸಿದೆ.

ಮೌನದ ಮಹಾತ್ಮ್ಯವನ್ನು ಮೌನದಿಂದಲೇ ವ್ಯಾಖ್ಯಾನಮಾಡಿ ಮಹಾಮೌನ ಸಮಾಧಿಯನ್ನು ನಮ್ಮ ಕಣ್ಣುಮುಂದೆಯೇ ಪಡೆದು ಎಲ್ಲರನ್ನೂ ಬೆರಗುಮಾಡಿರುವ ಈ ಮಹಾತ್ಮರ ಚರಿತ್ರೆಯನ್ನು ನಮ್ಮ ದೇಶದ ಯುವಕರು ಮನನಮಾಡುವವದರಿಂದ ಲಾಭವುಂಟು.

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯ ಸರ್ವದಾ ಸ್ಮರಣೀಯರಾದ ಶ್ರೀ ಶಂಕರ ಭಗವತ್ಪಾದರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು - ವೈ. ಸುಬ್ಬರಾಯರು, ಜನನ 5.1.1880), ಶ್ರೀ ಶಂಕರ ವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾ ಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯ ಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದ ಧೂಳನ್ನು ತೊಡೆದು ಶಾಂಕರವೇದಾಂತದ ನೈಜ ತಿರುಳನ್ನು ಕಂಡುಕೊಂಡರು. ಶಾಂಕರ ವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಪ್ರತಿಪಾದಕರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದ ಪುರುಷ ಸರಸ್ವತಿ ಎಂಬ ಅನ್ವರ್ಥನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತ ಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮವಿಚಾರದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೇ, ಅನಂತರ ಶ್ರೀ ಗೋಂದಾವಳಿ ಮಹಾರಾಜರಲ್ಲಿ ಶ್ರೀ ರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹ ಭಾರತೀಮಹಾಸ್ವಾಮಿಗಳವರಿಂದ ಭಾಷ್ಯಶಾಂತಿಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವೂ ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ.

ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ.

ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾ ವಿಗ್ರಹವು ಹೊಳೆನರಸೀಪುರದ ಸಮಾಧಿ ಮಂದಿರದಲ್ಲಿ ರಾರಾಜಿಸುತ್ತಿದೆ.